*Text Fly*

UNIVERSAL
LIBRARY
OU_198130
UNIVERSAL
LIBRARY

OUP—881—5-8-74—15,000

OSMANIA UNIVERSITY LIBRARY

Call No. K83.1 Accession No. Pa. K2259

I97D

Author ಐಯರ್, K.V.

Title [illegible]

This book should be returned on or before the date last marked below

# ದೆಯ್ಯದ ಮನೆ

ಅಥವಾ

# ಆಷಾಢ ಬಹುಳ ಅಮಾವಾಸ್ಯೆ

ಕೆ. ವಿ. ಐಯರ್

ಮಾರಾಟಗಾರರು:

ಹಿಂದ್ ಕಿತಾಬ್ಸ್ ಲಿಮಿಟೆಡ್ (ಬೊಂಬಾಯಿ)

ಬೆಂಗಳೂರು 2

[ಎಲ್ಲ ಹಕ್ಕುಗಳೂ ಬರೆದವರದು]

**ಮೊದಲನೆಯ ಮುದ್ರಣ:**

**೨೪-೧೧-೧೯೪೯**

ಈ ಪುಸ್ತಕ

**ಕೈಲಾಸಂ ಜ್ಞಾಪಕ ಸಮಿತಿ**

ಇವರಿಂದ ಪ್ರಕಟವಾಯಿತು

**ಬಿ. ಬಿ. ಡಿ. ಪವರ್ ಪ್ರೆಸ್**

ಅರಳೇಪೇಟೆ, ಬೆಂಗಳೂರು ಸಿಟಿ

# ಪ್ರಕಾಶಕರ ಅರಿಕೆ

"ಬಾಗಿದ ಬೆನ್ನೇ ಬೇನೆಯ ತವರು."

ಹತ್ತಾರು ವರ್ಷಗಳ ಹಿಂದೆ ಈ ಹೆಸರಿನಿಂದ ಕನ್ನಡದಲ್ಲಿ ಒಂದು ಲೇಖನ ಪ್ರಕಟವಾಯಿತು. ಲೇಖನದ ವಸ್ತು: ವ್ಯಾಯಾಮದ ಅವಶ್ಯಕತೆ. ಆದರ ರೀತಿ: ತಮ್ಮಂದರಿಗೆ ಅಣ್ಣ ಮಾತನಾಡಿದಂತೆ. ತರ್ಕ, ವಿಚಾರಸರಣಿ: ನಿರ್ದುಷ್ಟ. ವಿಷಯ ಎಷ್ಟೋ ಅಷ್ಟೇ ಮಾತು. ಲೇಖನದ ಶೀರ್ಷಿಕೆ—ಪ್ರಾಸವನ್ನು ಮುಕ್ಕಾಲು ಪೋಣಿಸಿಕೊಂಡಿದ್ದರೂ ಸಾರ್ಥವಾದ ಸೂತ್ರದಂತಹದು, ಕೇಳಿದ ಕಿವಿಯಲ್ಲಿ ಅನುರಣನವಾಗುವಂತಹದು. ಬರೆದವರು: ಬೆಂಗಳೂರಿನ ವ್ಯಾಯಾಮಶಾಲೆಯ ಸಂಸ್ಥಾಪಕರಾದ ಶ್ರೀಮಾನ್ ಕೆ. ವಿ. ಐಯರ್ ಅವರು. 'ಆಡಿದಂತೆ ಮಾಡು' ಎಂಬುದನ್ನು ಅವರಿಗೆ ಅನ್ವಯಿಸಬಹುದಾದರೂ, ತಾವು ಮಾಡಿದುದನ್ನು ಈ ಲೇಖನದಲ್ಲಿ ಆಡಿದವರು.

ಹೀಗೆ ವ್ಯಾಯಾಮಪಟುಗಳಾಗಿ ದೈಹಿಕಶಿಕ್ಷಣದಲ್ಲಿ ಪೂರ್ಣತೆಯನ್ನು ಪಡೆದವರು ತಮ್ಮ ಮಾನಸಿಕ ಹಾಗೂ ಹಾರ್ದಿಕ ಶಿಕ್ಷಣಗಳ ಬೆಳವಣಿಗೆಯನ್ನು ಮರೆಯದೆ, ತಾವು ಅನುಭವಿಸುತ್ತಿದ್ದ ಪ್ರಾಚೀನ ಸಾಹಿತ್ಯಗ್ರಂಥಗಳ ಸತ್ಸಂಗವನ್ನೂ ಅವರೊಡನೆ ಇರುತ್ತಿದ್ದ ಕೈಲಾಸಂ, ವಿ. ಸೀ. ಮೊದಲಾದ ಹೊಸಕಾಲದ ಸಾಹಿತಿಗಳ ಸಾಹಚರ್ಯವನ್ನೂ ಕಂಡಿದ್ದವರಿಗೆ, ವ್ಯಾಯಾಮದ ಬಗ್ಗೆ ಅವರು ಬರೆದ ಒಂದೆರಡು ಬರೆಹಗಳನ್ನು ಓದಿದ್ದವರಿಗೆ, ಅವರು ತಮ್ಮ ಅನುಭವಕ್ಕೆ ಬಂದ ಸಂಗತಿಗಳನ್ನು ನಿರೂಪಿಸುವುದು ಕೇಳಿದ್ದವರಿಗೆ, ನಮಗೆ ಒಂದೊಂದು ಸಲ ಹೀಗೆನ್ನಿಸುತ್ತಿತ್ತು: 'ನಾವು ಕೆಲವರು ಪುಸ್ತಕ ಪ್ರಪಂಚದ ಪ್ರಜೆಗಳು, ಅಲ್ಲಿನ ಇಲ್ಲಿನ ಪರಾವಲಂಬನದಿಂದ, ನಮ್ಮ ಕಲ್ಪನೆಯ ಕುಲಿಮೆಯಲ್ಲಿ ಕಾಯಿಸಿ ಕುಟ್ಟಿ ತಂದು ಏನೇನೋ ಕೃತಿ ಮಾಡುತ್ತೇವೆಯಲ್ಲಾ! ಬದುಕಿನಲ್ಲಿ ವಿವಿಧವಾದ ಅನುಭವಗಳನ್ನು ನೇರವಾಗಿ ಪಡೆಯುತ್ತಿರುವ ವೈದ್ಯರು, ವಕೀಲರು, ವ್ಯಾಪಾರಿಗಳು, ಇತರ ವ್ಯವಹಾರಿಕರು (ಈ ಕನ್ನಡದಲ್ಲಿ ಹೇಗೆ ಬರೆಯುವುದೆಂಬ ಸಂಕೋಚವನ್ನು ತೊರೆದು) ತಾವು ಕಂಡದ್ದನ್ನು

ಕಂಡಂತೆ ಹೇಳಿದರೆ, ಆ ಕೃತಿ ಎಂಥ ಕೆಂಡವಾದೀತು! ಉದಾಹರಣೆಗೆ, ಈ ಐಯರ್ ಅವರು ಎಂಥೆಂಥ ಜನರ ಎಷ್ಟೆಷ್ಟು ಜೀವಗಳನ್ನು ಅಂಗೈಯಲ್ಲಿಟ್ಟು ಕಂಡಿದ್ದಾರೆ! ಇದರಲ್ಲಿ ಹೇಳಬಹುದಾದುದು, ಮಾನವತೆಯ ಮೌಲ್ಯವನ್ನು ಮಣಿಮಾಲೆಯಾಗಿ ಮಾತಿನಲ್ಲಿ ಮೆರೆಸತಕ್ಕದ್ದು, ಎಷ್ಟೋ ಇದ್ದೀತು! ಇಂಥವರು ಏಕೆ ಇದಕ್ಕೆ ಕೈಹಚ್ಚಬಾರದು!' ಎಂದು ಅನೇಕ ಸಲ ಎನ್ನಿಸಿದ್ದುಂಟು.

ನಮ್ಮ ದೇಶದ ಧರ್ಮದಲ್ಲಿ ಒಂದು ನಂಬಿಕೆ—ಯಾವುದಕ್ಕೂ 'ಕಾಲಲಬ್ಧಿ' ಬರಬೇಕು, ಎಂದು. ಆ ಪಕ್ವವಾಗುವ ಕಾಲ ಒದಗಿ ಬಂದಾಗ, ಫಲ ತಾನಾಗಿಯೇ ಪರಿಣಮಿಸುತ್ತದೆ.

ಅದರಂತೆ, ಈಗೊಂದು ಒಂದೂವರೆ ವರ್ಷದ ಕೆಳಗೆ ಶ್ರೀ ಐಯರ್ ಅವರ '**ರೂಪದರ್ಶಿ**' ಎಂಬ ಕಾದಂಬರಿಯ ಹಸ್ತಪ್ರತಿ ಕಂಡಾಗ ನಮಗೆ ಕೆಲವರಿಗೆ ಸಂತೋಷವಾಯಿತು. ಕತೆಯ ತಡಿಕೆಯನ್ನು ಎಲ್ಲಿಂದಲೊ ಎತ್ತಿಕೊಂಡಿದ್ದರೂ, ಮೂಲದಲ್ಲಿನ ಅಚ್ಚಾದ ಅರ್ಧ ಮುಕ್ಕಾಲು ಪುಟ ಇವರ ಕೈಯಲ್ಲಿ ಸುಮಾರು ಮುನ್ನೂರು ಬರೆವಣಿಗೆಯ ಪುಟಗಳಷ್ಟು ವೃದ್ಧಿಯಾಗಿತ್ತು. ಕತೆಯ ಓಟ, ಘಟನೆಗಳ ಹೊಂದಿಕೆ, ಗುರಿಗೆ ನಡೆದ ಬೆಳೆವಣಿಗೆ, ತಾವಾಗಿ ಹುಟ್ಟಿ ಬೆಳೆದು ರೂಪುಗೊಂಡ ಆ ವಿವಿಧ ಪಾತ್ರಗಳು—ಇವು ತೃಪ್ತಿಕೊಟ್ಟರೂ ಅದರಲ್ಲಿ ನಮ್ಮ 'ವಾಸನೆ' (atmosphere) ದೂರ. ಕತೆ ನಡೆಯುವುದು ಇಟಲಿಯಲ್ಲಿ, ಅಲ್ಲಿನ ಪಾತ್ರಗಳು ಇಟಲಿಯವರು.

ಹೀಗಾಗಿ, ಅರಕೆ ಇನ್ನೂ ಹಾಗೇ ಇತ್ತು—ಐಯರ್ ಅವರು ತಮಗೆ 'ಆಡಿದ ಹೊಲ, ಉಂಡ ಮದ್ದು, ಕಂಡ ವಿಚಾರ' ಆದ ಕತೆಗಳನ್ನು ಹೇಳುವುದಿಲ್ಲವಲ್ಲಾ, ಎಂದು.

ಈಗೊಂದು ಕೆಲವು ತಿಂಗಳ ಹಿಂದೆ, ಕೈಲಾಸಂ ಅವರ 'ಹುತ್ತದಲ್ಲಿ ಹುತ್ತ'ವನ್ನು ಶ್ರೀ ಐಯರ್ ಅವರು ಓದಬೇಕೆಂದು ಒಂದು ಸಭೆ ಏರ್ಪಾಡಾಗಿತ್ತು. ಆದರೆ ಅದೇ ಸಂಜೆ, ಎದುರುಗಡೆ ಅಪೇಕ್ಷಿತವಾಗಿ ಒಂದು ಸಂಗೀತ ಸಭೆ 'ಧ್ವನಿವರ್ಧಕ' ಹಾಕಿಕೊಂಡದ್ದರಿಂದ, ಈ ವಾಚನ ಮುಂದುವರಿಯಿತು. ವಾಚನ ಮಾಡಬೇಕಾಗಿದ್ದವರೊಡನೆ

ಅದೇ ಸಂಜೆ ಮನೆಗೆ ಹೋದಾಗ, 'ಇದೊಂದು ಸಣ್ಣದಿದೆ. ಒಂದ್ ಒಂದೂಕಾಲ್ಗಂಟೆ. ಓದ್ತೀನಿ, ಕೇಳ್ತೀರಾ' ಎಂದು ಅವರು ಅಂದಾಗ, 'ದಮ್ಮಯ್ಯಾ ಅಂತ' ಅಂದೆವು.

ಆ ಸಂಜೆ ಅಲ್ಲಿ ನಾವು ಕೇಳಿದ್ದೇ ಈಗ ಇಲ್ಲಿ ಅಚ್ಚಾಗಿರುವುದು.

ಇಲ್ಲಿರುವ ಕತೆಯೆಂದರೆ ಈಗ ನಾವು 'ಸಣ್ಣಕತೆ' ಎನ್ನುತ್ತೇವೆ ಯಲ್ಲಾ ಆ ಮಾದರಿಯದಲ್ಲ; ನಮ್ಮ ದೇಶದಲ್ಲಿ ಹಿಂದೆ ಯಾವುದು 'ಕಥಾ' ಎನ್ನಿಸಿಕೊಂಡಿತ್ತೋ ಆ ಮಾದರಿಯದು, ಕಥೆಯಾದರೂ ಸಂಕ್ಷಿಪ್ತ ಕಾದಂಬರಿಯಂತೆ ಇರತಕ್ಕದ್ದು. ಈ ಕಥೆಯಲ್ಲಿ ಸುಮಾರು ಎರಡು ವರುಷಕ್ಕೆ ಮೇಲ್ಪಟ್ಟ ಕಾಲದ ಕಥೆಯಿದೆ, ಹತ್ತಾರು ಜೀವ ಗಳಿಗೆ ಸಂಬಂಧಿಸಿದ ಕಥೆಯಿದೆ.

ಈ ಕತೆಯಲ್ಲಿ ಬರುವ ಕಮಲಾಛತ್ರದ ಕಾವಲುಗಾರ ಚಿನ್ನಯ್ಯ, ನಾವು ಹಿಂದಿನ ಕಾಲದಲ್ಲಿ ಹಳ್ಳಿಹಳ್ಳಿಗಳಲ್ಲೂ ಕಾಣುತ್ತಿದ್ದ ಕಥೆ ಗಾರಿಕೆಯ ಸಂಪ್ರದಾಯಕ್ಕೇ ಕಾವಲುಗಾರ ಇದ್ದ ಹಾಗೆ. ಕೇಳಿ ದವರಿಗೆ, ತಾವೇ ಸ್ವತಃ ಅದನ್ನು ಕಂಡೆವೋ ಎಂಬಂತೆ ಆಗಬೇಕು. ಅದಕ್ಕೆ ತಕ್ಕ ಭಾಷೆ, ತಕ್ಕ ನಿರೂಪಣೆ, ತಕ್ಕ ನಿದಾನ.

ಈ ಚಿನ್ನಯ್ಯ ಹೇಳುವ ದೆಯ್ಯದ ಮನೆಯ ಕತೆ ತನ್ನಷ್ಟಕ್ಕೆ ತಾನು ಮೈ ಜುಮ್ಮೆಬ್ಬಿಸುವಂತಹದಾದರೂ, ಇದು ಇನ್ನೊಂದು ಗಂಡು ಜೀವದ ಕತೆಯ ಬಿಂಬಕ್ಕೆ ಕಂಬ ಅಷ್ಟೆ. ಪುಟ್ಟಮಲ್ಲನ 'ಪರಾಣ' ಹೋದ ಆ ಕರುಣದ ಕತೆಯೇ ಈ ಕೃತಿಯ ಪ್ರಾಣ.

'ಬಾಗಿದ ಬೆನ್ನೇ ಬೇನೆಯ ತವರು' ಎನ್ನಲಿಲ್ಲಾ? ಬೆನ್ನು ಬಾಗದೆ ಹುರಿ ನೇರಗೊಂಡಷ್ಟೂ 'ಛಾತಿ' ಮುಂದಾಗುತ್ತದೆ. ಪುಟ್ಟಮಲ್ಲ ಇಂಥ ವನು. ಯಜಮಾನರು ಮುನಿಸಾಮಪ್ಪ ಹೇಳಲಿಲ್ಲಾ: 'ಛಾತಿ ಐತೋ ಪುಟ್ಟಮಲ್ಲಂಗೆ. ದಿಲ್ ಕಚ್ಚಾ ಅಲ್ಲ ಅವನೂ'ಂತ! ಚಿಕ್ಕರಂಗಪ್ಪ ಹೇಳಲಿಲ್ಲಾ: 'ಯಮುಗುಂಡ್ಗೆ ಕಣಪ್ಪಾ ಪುಟ್ಟಮಲ್ಲಂದೂ'ಂತ!

ಇಂತಹ ಒಬ್ಬ ಗರಡಿಯ ಗಂಡಾಳಿನ ಕತೆಯನ್ನು ಎತ್ತಿಕೊಂಡ ಇವರು ಅದೇ ಹಳೆಯ ಕಾಲದ ಗರಡಿಯವರಿಂದ ಸ್ಫೂರ್ತಿಗೊಂಡು, ಆ ಹಿಂದಿನ ಸಂಪ್ರದಾಯವನ್ನು ಸನಾಥವಾಗಿ ಮಾಡಿರುವವರಲ್ಲೊಬ್ಬರು.

ಹಳೆಯದರ ಪುಣ್ಯಸ್ಮೃತಿಯನ್ನು ಅಚ್ಚಳಿಯಗೊಡದೆ ತಾಳಿದ ತಮ್ಮ ಚಿತ್ತಭಿತ್ತಿಯಿಂದ ಈ ಒಂದೆರಡು ಪ್ರಾಣಪ್ರತಿಮೆಗಳನ್ನು ಎತ್ತಿ ಇಲ್ಲಿ ವಾಕ್ಯವಾಹಿನಿಯಲ್ಲಿ ತೇಲಿಬಿಟ್ಟಿದ್ದಾರೆ ಇಂತಹವು ಇನ್ನೂ ತೇಲಿ ಬರಲಿ ಎಂದು ನಮ್ಮ ಆಸೆ.

ಶ್ರೀ ಐಯರ್ ಅವರು, ಕೈಲಾಸಂ ಜೊತೆಯಲ್ಲಿ ಮನಸ್ಸು ಬೆಳಸಿದವರು. ಕೈಲಾಸಂ ಕೃತಿಗಳಲ್ಲಿ ಕೆಲವನ್ನು ಬರೆದವರು, ಬರೆದುದನ್ನು ಕೈಲಾಸಂ ಮೆಚ್ಚುವಂತೆ ಓದಿದವರು. ಹೀಗಾಗಿ ಇವರ ಈ ಕತೆಯಲ್ಲಿ ಕೈಲಾಸಂ ಪದ್ಧತಿ ಕಂಡುಬಂದರೆ ಅದೇನೂ **ಕಲಿತು** ಬಂದದ್ದಲ್ಲ, ಅದು **ಕಲೆತು** ಬಂದದ್ದು.

ಇಲ್ಲಿನ ಕಥನದ ರೀತಿಯಲ್ಲಿ, ಘಟನೆ ನಡೆಯುವ ಕ್ಷೇತ್ರಗಳಲ್ಲಿ, ಪಾತ್ರಗಳು ಆಡುವ ಮಾತಿನಲ್ಲಿ, ಕೈಲಾಸಂ ಅವರಿಗೆ ಬಹುಪ್ರಿಯವಾದ 'ವಾಸನೆ' ಸಮೃದ್ಧಿಯಾಗಿ ಉಂಟು ಎಂಬುದನ್ನು ಬೆಂಗಳೂರನ್ನು ಬಲ್ಲವರು ಕಾಣಲಾಪರು. ಜೊತೆಗೆ ಚಿನ್ನಯ್ಯ, ಪುಟ್ಟಮಲ್ಲ, 'ಯೆಂಗ್ಟೇಶೂ' ಇವರ ಪ್ರಪಂಚವೇ ಕೈಲಾಸಂ ಅವರ ಪ್ರಪಂಚ.

ಈ ವರುಷದ ಇದೇ ನವೆಂಬರ್ ಇಪ್ಪತ್ತನಾಲ್ಕು—ಕೈಲಾಸಂ ಕಣ್ಮರೆಯಾದ ದಿವಸ. ಆ ದಿವಸ ಅವರ ಜ್ಞಾಪಕಕ್ಕಾಗಿ ಅವರ ಕೃತಿಗಳ ಯಾವುದಾದರೂ ಒಂದು ಮುಖವನ್ನು ವಿವರಿಸಿ ಒಂದು ಸಣ್ಣ ಪುಸ್ತಕ ಪ್ರಕಟಿಸಬೇಕೆಂದು ಎಣಿಸಿದ್ದೆವು. ಅದಕ್ಕೆ ಬದಲು, ಅವರ ನೆನಪಿಗೆ, ಈ ಪುಸ್ತಕವನ್ನೇ ಪ್ರಕಟಿಸಿದ್ದೇವೆ.

೨೪-೧೧-೧೯೪೯
ಬೆಂಗಳೂರು

**ಪ್ರಕಾಶಕರು**

ನನಗೆ

**ಗುರುಗಳೂ ಗೆಳೆಯರೂ ಆಗಿ**

**ನನ್ನ ಜೀವನಪಥಕ್ಕೆ ಬೆಳಕು ಕಾಣಿಸಿದ**

# ಕೈಲಾಸಂ

**ಅವರ ನೆನಪಿಗೆ**

# ವಿವರ


| | | | | ಪುಟ |
|---|---|---|---|---|
| ೧. | ಹಳೆಯ ಬೆಂಗಳೂರು | .... | .... | ೯ |
| ೨. | ಕಾಮನ ಹುಣ್ಣಿಮೆ | .... | .... | ೧೪ |
| ೩. | ದೆಯ್ಯದ ಮನೆ | .... | .... | ೩೨ |
| ೪. | ಆಷಾಢ ಬಹುಳ ಅಮಾವಾಸ್ಯೆ | .... | .... | ೫೧ |

# ಹಳೇ ಬೆಂಗಳೂರು

ನಲವತ್ತು ವರ್ಷಗಳ ಹಿಂದಿನ ಮಾತು. ಆಗ ಬೆಂಗಳೂರು ಈಗಿರುವುದರಲ್ಲಿ ಮೂರನೇ ಒಂದು ಭಾಗದಷ್ಟು ಇರಲಿಲ್ಲ. ಆಗ ತಾನೆ ಎಲೆಕ್ಟ್ರಿಕ್ ದೀಪ ಬಂದಿತ್ತು. ಊರಿನ ಒಂದೆರಡು ಕಡೆ ಮುನಿಸಿಪಲ್ ಲಾಂದ್ರ ಇನ್ನೂ ಇತ್ತು.

ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ ಆಗಲೂ ದೊಡ್ಡ ಜಂಕ್ಷನ್. ನಾಲ್ಕು ಕಡೆಗಳಿಂದಲೂ ರೈಲು ಬರುತ್ತಿತ್ತು. ರೈಲ್ವೆ ಸ್ಟೇಷನ್ ಮೆಟ್ಟಿಲುಗಳನ್ನು ಇಳಿದು ಅದೇ ರಸ್ತೆಯಲ್ಲಿ ಮುಂದೆ ಹೋದರೆ, ಸ್ವಲ್ಪದೂರ ಹೋಗುವುದರೊಳಗೆ ಎದುರಿಗೆ ದೊಡ್ಡ ಕೆರೆ: ಹೆಸರು 'ಧರ್ಮಾಂಬುಧಿ'. ಕೆರೆಯ ತುಂಬ ನೀರು, ನೀರುಹಕ್ಕಿ. ನೀರಿನ ಮೇಲೆ ತಣ್ಣಗೆ ಬೀಸುವ ಗಾಳಿ. ಮಧ್ಯಾಹ್ನವೆಲ್ಲಾ ರೈಲಿನಲ್ಲೇ ಕುಳಿತು, ಬಿಸಿಲಿನ ಬೇಗೆಯನ್ನೂ ಜನಗಳ ನೂಕಾಟವನ್ನೂ, ಗಂಟೆಗೆ ಹತ್ತು ಹನ್ನೆರಡು ಮೈಲಿ ವೇಗದಲ್ಲಿ ಪ್ರಯಾಣಮಾಡುವ ಪ್ರಯಾಸವನ್ನೂ ಅನುಭವಿಸಿ, ಎಂದಿಗೆ ಬೆಂಗಳೂರು ಸೇರಿಯೇವೋ ಎಂದು ಕಾತರಪಡುತ್ತಿದ್ದ ಪ್ರಯಾಣಿಕರಿಗೆ—ರೈಲ್ವೆಸ್ಟೇಷನ್ ಮೆಟ್ಟಲುಗಳನ್ನು ಇಳಿಯುತ್ತಿದ್ದ ಹಾಗೆಯೇ ಆ ನೀರಿನ ಮೇಲೆ ಬೀಸಿಕೊಂಡು ಬರುತ್ತಿದ್ದ ಆ ಗಾಳಿ ಎಷ್ಟೋ ಶ್ರಮ ಪರಿಹಾರ ಮಾಡುತ್ತಿತ್ತಲ್ಲದೆ ಮನಸ್ಸಿಗೆ ಸಂತೋಷವನ್ನೂ ಉಂಟುಮಾಡುತ್ತಿತ್ತು.

ರೈಲ್ವೆಸ್ಟೇಷನ್ ಮೆಟ್ಟಲುಗಳನ್ನಿಳಿದು, ಅದೇ ರಸ್ತೆಯಲ್ಲಿ ಮುಂದಕ್ಕೆ ಹೋಗಿ, ಉತ್ತರ—ದಕ್ಷಿಣವಾಗಿದ್ದ ಅಡ್ಡರಸ್ತೆಯಲ್ಲಿ ದಕ್ಷಿಣದ ದಾರಿಯನ್ನು ಹಿಡಿದು ಕೆರೆಯ ಕಟ್ಟೆಯ ಮೇಲೆಯೇ ನಡೆದುಹೋದರೆ, ಅದು ನೆಟ್ಟಗೆ ಅರಳೇಪೇಟೆಗೆ ಹೋಗುತ್ತಿತ್ತು. ಅರಳೇಪೇಟೆಯ ರಸ್ತೆಯನ್ನು ಬಿಟ್ಟು ಪೂರ್ವಕ್ಕೆ ಹೋಗುವ ದಾರಿಯನ್ನು ಹಿಡಿದು ಕೆರೆಯ ಕಟ್ಟೆಯ ಮೇಲೆಯೇ ನಡೆದುಹೋದರೆ, ಬಲಕ್ಕೆ ಮುನಿಸಿಪಲ್ ಗಾರ್ಡನ್—ಅಥವಾ ಚಿಕ್ಕ ಲಾಲ್‌ಬಾಗ್—ಎಂಬ ತೋಟ ಸಿಗುವುದು. ತೋಟದ ಕಡೆಗೆ ದೊಡ್ಡ ದೊಡ್ಡ ಮರಗಳು. ಹೆಚ್ಚಾಗಿ ನೋಡಿದರೆ ಗೋಣಿಯ ಮರಗಳು. ಪ್ರತಿ ಭಾನುವಾರ ಈ ಚಿಕ್ಕ ಲಾಲ್‌ಬಾಗಿನಲ್ಲಿ ಸೊಗಸಾದ

ನಾಗಸ್ವರ. ಊರಿನ ಎಲ್ಲಾ ಕಡೆಯ ಜನ ಆ ಸಂಗೀತ ಕೇಳುವುದಕ್ಕೂ ತೋಟದ ಒಳ್ಳೆಯ ಹವ ಅನುಭವಿಸುವುದಕ್ಕೂ ರಜಾದಿನವಾದ್ದರಿಂದ ಹೆಂಡತಿ ಮಕ್ಕಳೊಡನೆ ಅಲ್ಲಿಗೆ ಬರುತ್ತಿದ್ದರು. ಅನೇಕ ದಿನಗಳಿಂದ ಒಬ್ಬರನ್ನೊಬ್ಬರು ನೋಡದೆ ಇದ್ದವರು, ಸ್ನೇಹಿತರು, ಬಂಧುಗಳು, ಬಂದು ಸೇರುವುದಕ್ಕೆ ಅದು ಬಹು ಅನುಕೂಲವಾದ ಸ್ಥಳವಾಗಿತ್ತು.

ಕೆರೆಯ ದಂಡೆಯ ಮೇಲೆ ಹಾಗೇ ಇನ್ನೂ ಮುಂದೆ ಹೋದರೆ, ಬಲಗಡೆ—ಮೆಟ್ಟಿಲು ಇಳಿದು ಪೂರ್ಣಯ್ಯನ ಛತ್ರಕ್ಕೆ ಹೋಗುವ ದಾರಿ. ಮೆಟ್ಟಲಿನ ಒಂದು ಪಕ್ಕಕ್ಕೆ ಒಂದು ದೊಡ್ಡ ಅಶ್ವತ್ಥವೃಕ್ಷ, ನಾಗರಕಟ್ಟೆ. ಆ ಅಶ್ವತ್ಥದ ಮರವೂ ಅದರ ಪಕ್ಕದ ಗೋಣೀ ಮರಗಳೂ ಅಸಂಖ್ಯಾತ ಕೋತಿಗಳಿಗೆ ತಲ್ಪತರು. ಮೆಟ್ಟಲುಗಳ ಇನ್ನೊಂದು ಕಡೆ ಬೈರಾಗಿಗಳ ಮಠ. ಸಂಸಾರ ಸಮೇತರಾದ ಬೈರಾಗಿಗಳೂ ಗೋಸಾವಿಗಳೂ ಸದಾ ಅಲ್ಲೂ ಪೂರ್ಣಯ್ಯನ ಛತ್ರದ ಹೊರ ಆವರಣದಲ್ಲೂ ತುಂಬಿರುತ್ತಿದ್ದರು. ಸಾಯಂಕಾಲವಾಗುತ್ತಲೂ ಊರಿನ ಚಿಕ್ಕವರೂ ದೊಡ್ಡವರೂ ಕೋತಿಗಳ ಆಟಪಾಟಗಳನ್ನು ನೋಡುತ್ತಾ ನೆಲಗಡಲೆ, ಸೀಬೇಹಣ್ಣು ಮುಂತಾದುವನ್ನು ಕಪಿಗಳಿಗೆ ತಿನ್ನಲು ಎಸೆಯುತ್ತಾ ವಿನೋದವಾಗಿ ಕಾಲ ಕಳೆಯುತ್ತಿದ್ದರು. ಬೈರಾಗಿಗಳು ತಮ್ಮ ಮುಂದೆ ಬೆಂಕಿ ಹಾಕಿಕೊಂಡು ಭಸ್ಮೋದ್ಧೂಳಿತಸರ್ವಾಂಗರಾಗಿ ಜಟಾಭಾರದಿಂದೊಪ್ಪುತ್ತಾ, ಬಂದು ನಮಸ್ಕಾರ ಮಾಡಿದವರಿಗೆಲ್ಲಾ ಕೈಯೆತ್ತಿ ಆಶೀರ್ವಾದಮಾಡುತ್ತಾ, ನಡುವೆ ನಡುವೆ ಚೇಲರು ಹತ್ತಿಸಿಕೊಟ್ಟ ಭಂಗಿಚಿಲುಮೆಯನ್ನು 'ಭೋಂ! ಹರಹರ ಮಹಾದೇವ್!' ಎಂದು ಸೇದಿ, ಆಕಾಶಮಾರ್ಗಕ್ಕೆ ಧೂಮವನ್ನು ಪಸರಿಸುತ್ತಾ ಕಣ್ಣು ಮುಚ್ಚಿ ಧ್ಯಾನಾಸಕ್ತರಾಗಿರುತ್ತಿದ್ದುದು ಆ ಸ್ಥಳದಲ್ಲಿ ದಿನದಿನದ ದೃಶ್ಯವಾಗಿತ್ತು.

ಅಲ್ಲಿಯೇ ಕೆರೆಯ ನೀರಿನ ಬಳಿ ಇಳಿಯುವುದಕ್ಕೆ ಸೋಪಾನಗಳೂ ಮೇಲ್ಭಾಗದಲ್ಲಿ ಉದ್ದಕ್ಕೆ ಮಂಟಪಗಳೂ ಇದ್ದುವು. ಕೆರೆಯಲ್ಲಿ ವರ್ಷೇ ವರ್ಷೇ ನರಸಿಂಹ ಜಯಂತಿಯ ದಿನ ರಾತ್ರಿ ಬಳೇಪೇಟೆ ನರಸಿಂಹ ದೇವರ ತೆಪ್ಪೋತ್ಸವ ತುಂಬ ವಿಜೃಂಭಣೆಯಿಂದ ನಡೆಯುತ್ತಿತ್ತು. ಊರಿಗೆ ಊರೇ ಬಂದು ನೋಡಿ ಸಂತೋಷಪಡುತ್ತಿತ್ತು.

ಭಾನುವಾರಗಳಲ್ಲಿ ಬೆಳಗ್ಗೆ ಆರು ಗಂಟೆಯ ಹೊತ್ತಿಗೆ ಊರಿನ ಸಾವಿರಾರು ಜನ ಕ್ಷೇಮಕಾರಿ (ಗರುಡಪಕ್ಷಿ)ಯ ದರ್ಶನಕ್ಕೆಂದು ಕೆರೆಯ ಕಟ್ಟೆಯ ಮೇಲೆ ಬಂದು ಸೇರುತ್ತಿದ್ದರು.

ದಿನಂಪ್ರತಿ ಬ್ರಾಹ್ಮೀಮುಹೂರ್ತದ ವೇಳೆಗೆ ಊರಿನ ಅನೇಕ ವಿದ್ಯಾರ್ಥಿಗಳೂ ವ್ಯಾಯಾಮಕಾಂಕ್ಷಿಗಳೂ ಕೆರೆಯ ಸುತ್ತಲೂ ಓಡಿ, ಅನಂತರ ಕೆರೆಯ ಸೋಪಾನಗಳ ಮೇಲೆ ನೂರುಗಟ್ಟಲೆ 'ದಂಡೆ' ಹೊಡೆದು, ಬಟ್ಟೆ ಒಗೆದುಕೊಂಡು, ಕೆರೆಯಲ್ಲಿ ಈಜಾಡಿ, ಮನೆಗಳಿಗೆ ಹೋಗುತ್ತಿದ್ದರು.

ಅಂಥ ಕಾಲ ಮತ್ತೆ ಯಾವಾಗ ಬಂದೀತು? ಆಗ ಬೆಂಗಳೂರು ಕಲ್ಯಾಣನಗರ. ಧನಧಾನ್ಯ ಸಮೃದ್ಧಿಯಾಗಿತ್ತು. ಆಗ ಪೇಟೆಗೆ ಒಂದೊಂದು ಗರಡಿಮನೆ. ಅರಳೇಪೇಟೆ ಕಾಯಂಗಡಿ ಪಾಪಣ್ಣನ ಗರಡಿ, ಬಳೇಪೇಟೆ ಮುನಿಸಾಮಪ್ಪನ ಗರಡಿ, ಗಾಣಿಗರ ಪೇಟೆ ಗರಡಿ, ತಾರಾಮಂಡಲಪೇಟೇ ಗರಡಿ, ರಾಣಾಸಿಂಗನಪೇಟೇ ಗರಡಿ, ಇವಲ್ಲದೆ ಇನ್ನೂ ಅನೇಕ ಚಿಕ್ಕ, ದೊಡ್ಡ ಗರಡಿಗಳು. ಗರಡಿಹೈದರು ಪೋಲಿಗಳಲ್ಲ, ಪಟಿಂಗರಲ್ಲ. ಯಾವ ಬೀದಿಯಲ್ಲಿ ದೊಡ್ಡ ಮದುವೆಯೇ ಆಗಲಿ, ಭೋಜನಾದಿಗಳೇ ಆಗಲಿ, ದೇವರ ಉತ್ಸವಾದಿಗಳೇ ಆಗಲಿ—ಆಯಾ ಪೇಟೆಯ ಗರಡಿಯವರು ಒಟ್ಟು ಸೇರಿ, ನಿದ್ರಾಲಸ್ಯಗಳಿಲ್ಲದೆ ಕೆಲಸ ಮಾಡಿ, ಯಾವೊಂದು ವಿಷಯದಲ್ಲಿಯೂ ಎಳ್ಳಷ್ಟೂ ಲೋಪದೋಷ ಬಾರದಂತೆ ಕಾರ್ಯವನ್ನು ಸಾಗಿಸುತ್ತಿದ್ದರು. ಹೆಂಗಸರ ಮಕ್ಕಳ ಮಾನಪ್ರಾಣಗಳ ರಕ್ಷಣೆಗೆ ಬದ್ಧಕಂಕಣರಾಗಿ ನಿಂತು ಗೌರವ ಸಂಪಾದಿಸಿದ ಈ ಪೌರಪುತ್ರರ ಪುಣ್ಯಜೀವನ ನನ್ನ ಸ್ಮೃತಿಪಥದಲ್ಲಿ ಇನ್ನೂ ಉಳಿದಿದೆ.

ಬೈರಾಗಿಮಠಗಳನ್ನು ದಾಟಿ ಮುಂದೆ ಹೋದರೆ, ಅಲ್ಲಿಗೆ ಧರ್ಮಾಂಬುಧಿಯ ಒಂದು ಕೊನೆ ಸೇರಿದಂತಾಯಿತು. ಅನಂತರ ಎಡಕ್ಕೆ ತಿರುಗಿಕೊಂಡು ಕೆರೆಯ ಕಟ್ಟೆಯ ಮೇಲೆಯೇ ಹೋದರೆ, ಆ ದಾರಿ ಪುನಃ ದಕ್ಷಿಣೋತ್ತರವಾಗುತ್ತದೆ. ಅಲ್ಲಿ, ನಾಲ್ಕು ಹೆಜ್ಜೆ ಇಡುವಷ್ಟರಲ್ಲಿ ಬಲಗಡೆಗೆ ಒಂದು ದೊಡ್ಡ ಕಲ್ಯಾಣಿ ಬಾವಿ. ನೀರು ಆಳದಲ್ಲಿ.

ಇಳಿಯಲು ದೊಡ್ಡ ಸೋಪಾನ ಮೆಟ್ಟಲು. ಕಲ್ಯಾಣಿಯ ಹೆಸರು 'ಗೋವಿಂದಶೆಟ್ಟಿ ಬಾವಿ.' (ಈಗ ಸರ್ಕಾರದವರು ಆ ಬಾವಿಯನ್ನು ಮುಚ್ಚಿಸಿ ನೆಲಸಮ ಮಾಡಿ, ಮೇಲೆ ಭಿಕಾರಿಗಳಿಗೆ ಮಂಟಪಗಳನ್ನು ಕಟ್ಟಿಸಿಕೊಟ್ಟಿದ್ದಾರೆ.) ಈಗ ಕಮಲಾಛತ್ರ ಎಂದು ಇದೆಯಲ್ಲಾ, ಅದರ ಹಿಂದುಗಡೆಯೇ ಆ ಬಾವಿ ಇದ್ದದ್ದು. ಅದು ಯಾವ ಗಳಿಗೆಯಲ್ಲಿ ಆ ಬಾವಿಗೆ ಗುದ್ದಲಿಪೂಜೆ ನಡೆಯಿತೋ, ತಿಂಗಳಿಗೋ ಎರಡು ತಿಂಗಳಿಗೋ ಆ ಬಾವಿಯಲ್ಲಿ ಒಬ್ಬರಾದರೂ ಬಿದ್ದು ಪ್ರಾಣ ಕಳೆದುಕೊಳ್ಳದೆ ಇರುತ್ತಿರಲಿಲ್ಲ. ಹೆಚ್ಚಾಗಿ ಸಾಯುತ್ತಿದ್ದವರು ಹೆಂಗಸರು. ಆತ್ಮಹತ್ಯ ಮಾಡಿಕೊಂಡವರು ಒಬ್ಬಿಬ್ಬರಿದ್ದರೂ ಬಟ್ಟೆ ಯೊಗೆಯುವಾಗ ಕಾಲುಜಾರಿ ನೀರಿನೊಳಕ್ಕೆ ಬಿದ್ದು ಪ್ರಾಣ ಹೋದವರೇ ಹೆಚ್ಚು. ಈ ಅನಾಹುತಗಳು ಆಗುತ್ತಿದ್ದದ್ದು ಹೆಚ್ಚಾಗಿ ಸಂಜೆಯ ಹೊತ್ತಿನಲ್ಲಿಯೇ.

ಕಾವಲುಗಾರ ಚಿನ್ನಯ್ಯ ಹೇಳುತ್ತಿದ್ದ: ಆ ಬಾವೀಲಿ ಒಂದು ದೆಯ್ಯ ಐತೆ. ಚೆಂಜೆ ಒತ್ನಾಗ ಯೆಂಗುಸ್ರು ಒಂಟೊಂಟ್ಯಾಗಿ ಬಟ್ಟೆ ಒಗಿತಾನಿದ್ರೆ ಅಂಗೇ ಕಾಲಿಡ್ದು ಎಳ್ಕೊಂಬುಡ್ತದೆ. ಒಂದ್ಸಾರಿ ನನ್ ಕಣ್ ಮುಂದೇನೆ ಒಬ್ಬೆಂಗಸ್ನ ಎಳ್ಕೊಂಬುಡ್ತು. ಚೆಂಜೆ ಏಳ್ಗಂಟೆ ಆಗೋಗಿತ್ತು. ನಾನೋ ಮುದ್ಕ, ಈಜೂ ಬರದು, ಯಾರಾದ್ರೂ ಬರ್ರಪ್ಪೋ, ಎಂಗ್ಸು ಬಾವೀಲಿ ಬಿದ್ಬಿಟ್ಟಿದಾಳೇ ಅಂತ ಗಟ್ಯಾಗಿ ಅರಚ್ಕೊಂಡ್ರೂ ಒಬ್ರೂ ಅತ್ರ ಇರ್ನಿಲ್ಲ. ಆ ಎಂಗ್ಸು ಒಂದ್ಸಾರಿ ಮುಣ್ಗಿ ತೇಲೂ ಆಯ್ತು. ನಾನು ಇನ್ನೂ ಇನ್ನೂ ಕೂಕ್ಕೊಂಡ ಮ್ಯಾಕೆ ಬ್ಯೆರಾಗಿ ಮಠ್ದಿಂದ ಜನಗ್ಳು ಬಂದ್ರು. ನೀರ್ನೊಳ್ಗೆ ಧುಮ್ಕಿ ಆ ಎಂಗಸ್ನ ಎತ್ತಾಕೆ ಆಸ್ಕೊತ್ನಾಗ ಒಬ್ರಿಗೂ ಎದೆ ಬರ್ನಿಲ್ಲ. ಅಸ್ಕೊತ್ಗೆ ಮುಗದೋಯ್ತು ಆ ಎಂಗ್ಸೀನ್ ಕತೆ. ನಾಳೆ ಎಂಗೂ ತೇಲ್ತೈತಲ್ಲಾ ಅಂತ ಒಂಟೋದ್ರು. ಎಣ ಮಾರ್ನೇ ದಿನ ಚೆಂಜೇಗೆ ತೇಲ್ತು. ಆವೊತ್ನಿಂದ ಕೋಟಿ ಆಫೀಸ್ನೋರು ಅಚ್ಚಿಬಿಟ್ರು ನೋಟೀಸ—ಈ ಬಾವ್ಯಾಗ ಇನ್ನುಮ್ಯಾಕೆ ಯಾರೂ ತಾಣ ಮಾಡೋದಾಗ್ಲೀ ಬಟ್ಟೆ ಒಗ್ಯೋದಾಗ್ಲೀ ಕೂಡ್ದು; ಸಜಾ ಆಕ್ಬಿಡ್ತೀವಿ ಅಂತ.

ಆ ಪಾಪಿ ಬಾವೀನ ಬಿಟ್ಟು ನಾಲ್ಕು ಹೆಜ್ಜೆ ಮುಂದುವರಿದರೆ ಬಲಗಡೆಗೆ ನಾಲ್ಕೈದು ನೀರುಪುಚ್ಚೀಕಾಯಿ ಗಿಡಗಳು. ಮುಂದಕ್ಕೆ ಒಂದು

ದೊಡ್ಡ ಗೋಣೀ ಮರ. (ಇಲ್ಲೇ ಬಹು ದಿನದ ವರೆಗೂ ಒಂದು ದೊಡ್ಡ ಹೆಂಡದ ಗಡಂಗು ಇತ್ತು.)

ಆ ಗೋಣೀಮರ ಕವಲೊಡೆದು ರೆಂಬೆಗಳು ಹೊರಟುಕೊಂಡ ಕಡೆ, ಮರದಲ್ಲಿ ಒಂದು ದೊಡ್ಡ ಸೈಜುಕಲ್ಲು ಸಿಕ್ಕಿ ಹೋಗಿತ್ತು. ಆ ಕಲ್ಲಿಗೆ ಒಂದು ದೊಡ್ಡ ಕಬ್ಬಿಣದ ಮೊಳೆ ಹೊಡೆದಿತ್ತು. ಆ ಕಲ್ಲು, ಅಲ್ಲಿ ಸ್ಥಾಪನೆಯಾಗಿ ಬಹಳ ವರ್ಷಗಳಾದ್ದರಿಂದ ರೆಂಬೆಗಳು ದಪ್ಪನಾಗಿ ಬೆಳೆದು, ಮರ ಆ ಕಲ್ಲನ್ನು ಕ್ರಮೇಣ ತನ್ನ ಗರ್ಭಕ್ಕೇ ಎಳೆದುಕೊಂಡಿತ್ತು. ಕಾವಲು ಚಿನ್ನಯ್ಯ ಹೇಳುತ್ತಿದ್ದ: ಅವನು ಚಿಕ್ಕವನಾಗಿದ್ದಾಗ, ಒಬ್ಬ ಮಲೆಯಾಳಿ ಮಂತ್ರಗಾರ, ಆ ದಾರಿಯಲ್ಲಿ ಜನಗಳನ್ನು ಬಹುವಾಗಿ ಹೆದರಿಸುತ್ತಿದ್ದ ಒಂದು ಗಂಡು ದೆವ್ವವನ್ನು ಆ ಕಲ್ಲಿನೊಳಕ್ಕೆ ಆಹ್ವಾನಿಸಿ, ಅದು ಅಲ್ಲೇ ಸ್ಥಾಪನೆಯಾಗಿರುವಂತೆ ಮೊಳೆ ಹೊಡೆದು ದಿಗ್ಬಂಧನ ಮಾಡಿ, ಈ ಗೋಣೀಮರದಲ್ಲೇ ಇರು ಎಂದು ಆ ಕಲ್ಲನ್ನು ಅದೇ ಮರದಲ್ಲಿಟ್ಟು ಹೋದನಂತೆ. ಅಂದಿನಿಂದ ಆ ಸುತ್ತಮುತ್ತಲಿನ ಜನಗಳಿಗೆಲ್ಲಾ ಆ ದೆವ್ವದ ಬಾಧೆ ತಪ್ಪಿತಂತೆ.

ಆ ಗೋಣೀಮರದ ಹಿಂಭಾಗಕ್ಕೆ ಇಪ್ಪತ್ತು ಹೆಜ್ಜೆ ದೂರದಲ್ಲಿ ಒಂದು ಹಾಳುಬಿದ್ದ ಮಹಡಿಮನೆಯಿತ್ತು. ಮನೆಯ ಕೆಳಭಾಗವೆಲ್ಲಾ ಕಲ್ಲಿನ ಕಟ್ಟಡ, ಮಹಡಿ ಮಾತ್ರ ಇಟ್ಟಿಗೆ ಕಟ್ಟಡ. ಮನೆ ಸುಮಾರು ದೊಡ್ಡದು, ನಾಲ್ಕಾರು ಜನ ಇರಬಹುದಾದದ್ದು. ಮನೆ ಬಹಳ ದಿನದಿಂದಲೂ ಪಾಳುಬಿದ್ದಿತ್ತು. ಒಂದೆರಡು ಅರ್ಧಮರ್ಧ ಕಿಟಕಿ ಬಾಗಿಲುಗಳ ಕದಗಳು ಇನ್ನೂ ಉಳಿದಿದ್ದುವು. ಯಾಕೆ ಆ ಮನೆ ಪಾಳು ಬಿದ್ದಿದ್ದಿತೋ ಹೇಳಬಲ್ಲವರಾರು? ಬಹುಶಃ ಚಿನ್ನಯ್ಯನನ್ನು ಕೇಳಿದರೆ ಹೇಳಬಹುದು. ಆ ರಸ್ತೆಯಲ್ಲಿ ರಾತ್ರೆ ಎಂಟು ಘಂಟೆಯಾದರೆ ಜನ ಸಂಚಾರವೇ ಇಲ್ಲ. ಹಾಗೂ ಆ ದಾರಿಯಲ್ಲಿ ಒಂದು ಮುನಿಸಿಪಲ್ ಲಾಂದ್ರವಾಗಲಿ ಒಂದು ಎಲೆಕ್ಟ್ರಿಕ್ ದೀಪವಾಗಲಿ ಇರಲಿಲ್ಲ.

# ಕಾಮನ ಹುಣ್ಣಿಮೆ

## ೧

ಈಗ ಹೇಳುತ್ತಿರುವ ಕತೆ ನಡೆದು ಹೆಚ್ಚುಕಡಿಮೆ ನಾಲ್ವತ್ತು ವರ್ಷಗಳಾಯಿತು. ನನಗೆ ಆಗ ಹತ್ತು ಹನ್ನೊಂದು ವಯಸ್ಸು.

ಆಗ ನಾವು ವಾಸವಾಗಿದ್ದುದು, ಬಳೇಪೇಟೆಯ ಕಿಲಾರಿ ರಸ್ತೆಯಲ್ಲಿ. ಮನೆಯ ಹೆಸರು 'ರತ್ನಾಕರ.' ಮನೆಗೆ ದೊಡ್ಡ 'ಗೇಟು.' ಮನೆಯ ಆಗಿನ ಮಾಲೀಕರು ಕೀರ್ತಿಶೇಷರಾದ ಅಡ್ವೊಕೇಟ್ ಶ್ರೀ ಡಿ. ವೆಂಕಟರಾಮಯ್ಯನವರು. ಅವರು ಆಗ ಮುನಿಸಿಪಲ್ ಚೇರ್ ಮನ್ ಆಗಿದ್ದರು. ಅವರು ವಾಸವಾಗಿದ್ದದ್ದು ಮಲ್ಲೇಶ್ವರದಲ್ಲಿ. ಅವರು ಇದ್ದ ಬೀದಿಗೆ ಈಗಲೂ 'ಡಿ. ವೆಂಕಟರಾಮಯ್ಯ ರೋಡ್' ಎಂಬ ಹೆಸರೇ ಇಧೆ.

ನಮ್ಮ ಪೇಟೆಯವರಿಗೆ ನಮ್ಮ ಬಳೇಗರಡಿಯೇ ಎಲ್ಲ ಗರಡಿಗಳಿಗಿಂತ ದೊಡ್ಡ ಗರಡಿ. ಪೈಲವಾನ್ ದೊಡ್ಡ ನಂಜನ ಕಾಲ ಮುಗಿಯುತ್ತ ಬಂದಿತ್ತು. ತಿಂದೂ ತಿಂದೂ ನಂಜನ ಹೊಟ್ಟೆ ಪರ್ವತವಾಗಿ ಹೋಗಿತ್ತು. ಕೈಕಾಲುಗಳಲ್ಲಿ ಇರಬೇಕಾದ ಚುರುಕೂ, ಶಕ್ತಿಯೂ ಎರಡೂ ಉಡುಗಿಹೋಗಿದ್ದುವು. ರಾಣಾಸಿಂಗ್‌ಪೇಟೆ ಗರಡಿ ವಸ್ತಾದ್ ಕೃಪಾಸಿಂಗ್ ನಂಜನನ್ನು ಎರಡಾವರ್ತಿ ನೆಲಕ್ಕೆ ಕುಕ್ಕಿದ್ದರೂ, ತನ್ನ ಮೀಸೆ ಮಣ್ಣಾಗಲಿಲ್ಲ ಎಂದು ನಂಜ ಜಂಬ ಕೊಚ್ಚುತ್ತಿದ್ದ. ಎಲ್ಲರ ಹತ್ತಿರಲೂ 'ಕೃಪಾಸಿಂಗ್‌ಗೆ ಮಿಠಾಯಿ ಅಂಗಡಿ ಮಾಂಧಾತ ಚೆನ್ನಾಗಿ ತಯಾರಿ ಕೊಡಿಸ್ತಾರೆ. ನನಗೂ ಯಾರಾದರೂ ಅಂಗೇ ಕೊಡಿಸಲಿ, ಎರಡೇ ತಿಂಗಳೊಳಗೆ ಕೃಪಾಸಿಂಗ್‌ನ ಮೂಳೇನೆಲ್ಲ ಬಗ್ಗಿಸಿಬಿಡತೇನೆ' ಎಂದು ಹೇಳಿಕೊಳ್ಳುತ್ತಿದ್ದ.

ಆ ಮಾತನ್ನು ಕೇಳಿ ಯಜಮಾನ್ ಮುನಿಸಾಮಪ್ಪನವರು "ಲೋ ನಂಜ, ಯಾಕೋ ಸುಮ್ಮನೆ ಜಂಬ ಕೊಚ್ತೀಯ? ಸುಮ್ಮನೆ ತಿನ್ನೋದ್ರಿಂದ ಬರೋದಿಲ್ಲೊ ಗೈರತ್ತು. ಅದು ಆವರವರ ಹುಟ್ಟುಗುಣ ಕಾಣೊ. ನಿನಗೆ ಹತ್ಹತ್ರ ನಲವತ್ತು ವಯಸ್ಸಾಗ್ತಾ ಬಂತು. ನಾಲ್ಕು

ಮಕ್ಕಳೂ ಇವೆ. ವೈಯೂ ಭಾರ ಆಗ್ಹೋಯ್ತು. ಇನ್ನೂ ಯಾಕೋ ಜೊತೆ ಹಾಕ್ಕೊಳ್ತೀಯ? ನಂ ಪುಟ್ಟಮಲ್ಲ ಇಧಾನಲ್ಲ, ಅವನ್ನ ಈ ಸಾರಿ ತಯಾರ್ಮಾಡು. ಮುಂದಕ್ ಬರೋರ್ಗೆ ಖುಮ್ಮಕ್ ಕೊಡ್ದೆ ನಿನ್ ಜಂಬಾನೇ ಕೊಚ್ತಾ ಇದ್ರೆ ಹೆಂಗೆ? ಈ ಸಾರಿ ಕಾಮನ ಹಬ್ಬಕ್ಕೆ ಪುಟ್ಟ ಮಲ್ಲನ ಕಾಲ್ಗೆ ಬತ್ತದಹುಲ್ಲು ಗೊಲಸು ತೊಡಿಸಿ ಬೆಂಗಳೂರ್ಗೇ ಸವಾಲ್ ಹಾಕೋಣ ನೋಡೋಣ, ಯಾವ ಗರಡಿಯೋರು ಪೋಟಿ ಹಾಕ್ತಾರೊ! ಕೃಪಾಶಿಂಗ್ ತಾನೇ? ನಿನ್ನ ಕೈಲಾಗ್ಲಿಲ್ಲ; ನಮ್ಮ ಪುಟ್ಟ ಮಲ್ಲ ಕಣ್ಣುಮುಚ್ಚಿ ತೆಗೆಯೋದ್ರೊಳಗೆ ಮಣ್ಣು ಮುಕ್ಕಿಸ್ತಾನವನ್ನ. ಅರಳೀಪೇಟೆಯೋರ್ಗೂ ಇದೆ, ರಾಣಾಸಿಂಗ್ ಪೇಟೆ ಮೇಲೆ ಕಣ್ಣು. ಕಾಯಂಗಡಿ ಪಾಪಣ್ಣ ಯೋಳ್ತಾನೆ—'ಮುನ್‌ಸಾಮಪ್ಪಾ, ತಯಾರ್ಮಾಡು ಪುಟ್ಟಮಲ್ಲನ್ನ. ದಂಡಿನ ಗಫೂರ್‌ಖಾನ್ ಗರಡಿ ಇಮಾಮುನ್ನ ಯಂಗಾದರೂ ಮಟ್ಟ ಇಕ್ಬೇಕು. ಆಮೇಲೆ ಆ ಕಲ್ಲೂ ಪೈಲ್ವಾನ್ನೂ ನೋಡೇಬಿಡಲಿ ಒಂದು ಕೈ, ನಂ ಪುಟ್ಟಮಲ್ಲ. ಗಳ್ಡ್ಯೋರು ಗಳ್ಡ್ಯೋರು ಬೇರ್ಬೇರೆ ಇರೋದಕ್ಕಾಯ್ತುದ, ಒರಗ್ನೋರು ಬಂದು ನಂ ಉಡುಗರ್ನ ಎದ್ರಿಸ್ತಿದ್ರೆ? ಪುಟ್‌ಮಲ್ಲ ನಿಂ ಗಳ್ಡ್ಯೋನೂ ಔದು, ನಂ ಗಳ್ಡ್ಯೋನೂ ಔದು. ಅವ್ನಿಂದ ನಮ್ಮೂರು ಮಾನ ಉಳೀಬೇಕಪ್ಪಾ ನಂ ಗಳ್ಡಿಯಿಂದ ಐವತ್ ರೂಪಾಯ್ ಆಕ್ತೀವಿ ತಿಂಗಳ್ಗೆ. ನೀವೂ ಐವತ್ ರೂಪಾಯ್ ಆಕ್ರಿ. ತಯಾರ್ಮಾಡ್ಸಿ ಪುಟ್ಮಲ್ಲನ್ನ ಬರೋ ಕಾಮಣ್ಣನ ಅಬ್ಬದ ವ್ಯಾಳೇಗೆ' ಅಂತ ಕಾಯಂಗಡಿ ಪಾಪಣ್ಣ ಯೋಳ್ತಾನೆ. ಪುಟ್ಮಲ್ಲ ಬಾಸೆ ಕೊಟ್ಟವ್ನೆ ನನ್ತಾವ—'ಇನ್ನೂ ನಾಕು ತಿಂಗಳು ನೋಬಣ ಮಾಡಿಕೊಳ್ಳಾಕಿಲ್ಲಾ' ಅಂತ. ಅವರಮ್ಮ ಬಲವಂತ ಮಾಡ್ತಾ ಔಳಂತೆ. ನಾನೇ ಓಗಿ ಏಳ್ತೀನಿ— ರೋಟು ನಿದಾನಮಾಡ್ರೀ ಅಂತ" ಅಂತಂದ್ರು, ಯಜಮಾನ್ ಮುನಿಸಾಮಪ್ಪ.

ಯಜಮಾನ್ರು ಹೀಗೆ ಹೇಳಿದ ಮೇಲೆ, ಎಲ್ಲರ ಮನಸ್ಸೂ ಪುಟ್ಟ ಮಲ್ಲನ್ನ ತಯಾರುಮಾಡೋದ್ರಲ್ಲೇ ನೆಟ್ಟಿತು. 'ನಂ ಉಡುಗನ್ ಕೈಲಿ ಇನ್ನೆಳ್ಡು ತಿಂಗ್ಳೊಳ್ಗೆ ನಿನ್ನ ನೆಲಕ್ಕುಕ್ಕಿಸ್ದಿದ್ರೆ—ನಾನು ಮೀಸೆ ಬೋಳೀಸ್ಕೋತೀನೆಂ'ತ ದೊಡ್ಡನಂಜ ಕೃಪಾಶಿಂಗೂಗೆ ಹೇಳಿಕಳಿಸಿಯ್ಬಿಟ್ಟ.

'ನಿಂ ಪುಟ್ಮಲ್ಲನ್ನ ಮೂಳೇನ ಮುರ್ದಿಕ್ಬೇ ಇದ್ರೆ—ಆವತ್ತೇ ಮಟ್ಟೇಗೆ ಕಡೇಸಲಾಂ ಹೊಡೆದ್ಬಿಡ್ತೀನಿ' ಅಂತ ಬದಲು ಹೇಳಿಕಳಿಸಿದ, ಕೃಪಾ ಸಿಂಗು. ಸರಿ, ಜಿದ್ದು ಬೆಳೀತು. 'ಪುಟ್ಮಲ್ಲನಿಗೆ ಈ ಸಾರಿ ಭತ್ತದಹುಲ್ಲಿನ ಗೊಲಸು ತೊಡಸ್ತೀನೆ' ಅಂದುಬಿಟ್ರು, ಯಜಮಾನ್ ಮುನಿಸಾಮಪ್ಪ.

ಪುಟ್ಟಮಲ್ಲ ಹೆಸರಿಗೆ ತಕ್ಕ ಮಲ್ಲನೇ ಹೌದು. ಇಪ್ಪತ್ನಾಲ್ಕು ಇಪ್ಪತ್ತೈದು ವಯಸ್ಸು. ಸುಮಾರು ಎಣ್ಣೆಕೆಂಪು ಬಣ್ಣ. ಆಳು ಐದಡಿ ಹತ್ತಂಗುಲ ಎತ್ತರ. ಬಹು ವಿಶಾಲವಾದ ಎದೆ. ಸಣ್ಣಗೆ ತೆಳ್ಳಗಿನ ನಡು. ಮದ್ದಾನೆಯ ಸೊಂಡಿಲಿನ ಸೌಷ್ಠವವನ್ನು ಗೆಲ್ಲುವ ತೋಳುಗಳು. ಬೆಟ್ಟವನ್ನೇ ಹೊತ್ತು ನಿಲ್ಲಬಲ್ಲ ಸಾಮರ್ಥ್ಯವುಳ್ಳ ಕಾಲು, ತೊಡೆ. ತೇಜಸ್ವಿಯಾದ ಮುಖ. ಇಂಥ ನರಪುಂಗವನ ಕುತ್ತಿಗೆಗೆ ಅವರ ತಾಯಿ ಆಂಜನೇಯನ ವಿಗ್ರಹ ಕೆತ್ತಿದ ಚಿನ್ನದ 'ತಾಬೀಜ'ನ್ನು ಕಟ್ಟಿದ್ದಳು. ಕುಸ್ತಿ ಮಾಡುವಾಗಲೂ ಪುಟ್ಟಮಲ್ಲ ಆ 'ತಾಬೀಜ'ನ್ನು ತೆಗೆಯುತ್ತಿರ ಲಿಲ್ಲ. ಪುಟ್ಟಮಲ್ಲ ಸರಸಿ, ಒಳ್ಳೆಯ ಸ್ನೇಹಿತ. ಮಗುವಾಗಿದ್ದಾಗಲೇ ತಂದೆಯನ್ನು ಕಳೆದುಕೊಂಡಿದ್ದ. ಪಿತ್ರಾರ್ಜಿತವಾದ ಆಸ್ತಿ ಮಾಗಡಿ ಹತ್ತಿರ ಸ್ವಲ್ಪ ಇತ್ತು. ಸಾಕಷ್ಟು ರಾಗಿ, ಭತ್ತ, ಇತರ ಧಾನ್ಯ ಬರು ತ್ತಿತ್ತು. ಬಳೇಪೇಟೆಯಲ್ಲಿ ಸ್ವಂತ ಮನೆ. ಕಸಬು—ತರಗು. ದುಂದು ಗಾರಿಕೆಯುವನಲ್ಲ. ನೀಚ ಹವ್ಯಾಸಗಳೊಂದೂ ಅವನಲ್ಲಿರಲಿಲ್ಲ.

ಸಂಜೆಹೊತ್ತು ಕಸರತ್ಗೆ ಮಟ್ಟೇಗಿಳಿದ್ರೆ ರಾತ್ರೆ ಎಂಟು ಗಂಟೆಗೇ ಮೇಲಕ್ಕೆದ್ಬರೋದು. ಎಷ್ಟೇ ದಂಡೆ ಹೊಡೀಲಿ, ಎಷ್ಟೇ ಬೈಠಕ್ ಹೊಡೀಲಿ, 'ದಂ' ಬರ್ತಾ ಇರಲಿಲ್ಲ. ಒಬ್ಬರಾದ ಮೇಲೊಬ್ಬರು, ಹೀಗೆ ಒಂದೇ ದಿನ ನಾಲ್ಕು ಸಮಜೋಡಿಗಳನ್ನ ನೆಲಕ್ಕದುಮಿದ್ದ ಪುಟ್ಟಮಲ್ಲ. ಅದನ್ನ ನೋಡಿಬಿಟ್ಟು, ಯಜಮಾನ್ರು 'ಇದೆಲ್ಲಾ ನೀನ್ ಕುಡ್ದ ತಾಯಿಗ್ಬ ಆಲಿನ್ ಪರ್ಬಾವ' ಅಂದ್ರು. 'ಅಂಗಂದ್ರೇನು? ನಾವೂ ತಾಯೀ ಆಲ್ ಕುಡಿದಿಲ್ವಾ?' ಅಂತ ಸವಾಲ್ ಆಕ್ದ ಚಿಕ್‌ರಂಗ. ಅದಕ್ಕೆ ಯಜಮಾನ್ರು 'ಲೋ, ಪುಟ್ಟಮಲ್ಲ ಮೊಗ ಆಗಿದ್ದಾಗ ಅವರಮ್ಮ ನಿಗೆ ಒಂದ್ಸಲ ಮೈಯಾಗ ಸರಿ ಇರ್ಲಿಲ್ಲ. ಆಗ ಅವರ ಬೀದಿ ಎಂಗಸ ರೆಲ್ಲಾ ಎದೇ ಆಲ್ ಕೊಟ್ಟು ಬೆಳಸೆವ್ರೋ, ಪುಟ್ಟಮಲ್ಲನ್ನ! ಚಂದ್ರಾಸ

ಇದ್ದಂಗೆ—ಅವರ ಬೀದಿ ಎಂಗಸರ್ಗೆಲ್ಲಾ ಪುಟ್ಟಮಲ್ಲ ಮಗ ಕಾಣ್ರೋ! ಅದಕ್ಕೇ ನೋಡು, ತಾಯೀಅಲ್ ಚೆನ್ನಾಗ್ ಕುಡ್ಡ ಮಗ ಚೆನ್ನಾಗೇ ಬೆಳೀತದೆ ಅನ್ನೋದು. ಸಾವರ ವರಸ ಚೆನ್ನಾಗಿರ್ಬೇಕು ನಂ ಪುಟ್ಟ ಮಲ್ಲ' ಅಂತ ಹೊಗಳಿದ್ದರು.

ಪುಟ್ಟಮಲ್ಲ ಕುಸ್ತೀಲಿ 'ಖದೀಮ.' ಒಂದು ಸಲಾನೂ ಸೋತ ದ್ದಿಲ್ಲ. ಕುಸ್ತೀ ಇದ್ದ ದಿನ ಅವರ ತಾಯಿ, ಪುಟ್ಟಮಲ್ಲ ಮನೇಯಿಂದ ಹೊರಡೋವಾಗ 'ನಿಂಗೆ ಒಳ್ಳೇದಾಗ್ಲಿ, ಮಗ. ಒರಟುಕುಸ್ತಿ ಮಾಡ ಬೇಡ. ಎದುರು ಜೋಡಿಗೂ ಏನಪಾಯಮಾಡಬೇಡ. ಓಗ್ತಾ, ಆಂಜನೇಯನ ಗುಡೀಗೋಗಿ ಆಸೀರ್ವಾದ ಕೇಳ್ಬಿಟ್ಟೋಗು' ಅಂತ ಹರಸಿ ಕಳಿಸುತಿದ್ದಳು. ಆ ಮೇಲೆ ಪುಟ್ಟಮಲ್ಲ ಬಳೇಪೇಟೆ ನರಸಿಂಹ ದೇವರ ಗುಡೀ ಪಕ್ಕದಲ್ಲಿರುವ ಆಂಜನೇಯನ ಗುಡಿಗೆ ಬಂದು, ತಾನೇ ಕರ್ಪೂರ ಹತ್ತಿಸಿ, ಕಾಯಿ ಒಡೆದು, ದೇವರ ಮುಂದೆ ಮೊಣಕಾಲೂರಿ, 'ಆಸೀರ್ವಾದ ಮಾಡೋವರ್ಗೂ ನಾನೇಳೋದಿಲ್ಲಾ ನಮ್ಮಪ್ಪಾ' ಅಂತ ಕುಳಿತುಬಿಡ್ತಿದ್ದ, ದೇವರ ಮೇಲೆ ದೃಷ್ಟಿ ಇಟ್ಟು, ತದೇಕಧ್ಯಾನದಲ್ಲಿ, ಗಂಟೆ ಗಂಟೆ ಹೊತ್ತು. ದೇವರ ಬಲಭುಜದ ಮೇಲಿದ್ದ ದಾಸವಾಳದ ಹೂ ಕೆಳಕ್ಕೆ ಬಿದ್ರೇನೆ ಅವನು ಏಳೋದು. ಅದನ್ನೆತ್ತಿ ಕಣ್ಣಿಗೊತ್ಕೊಂಡು, 'ನಮ್ಮಪ್ಪ ಆಸೀರ್ವಾದ ಮಾಡ್ದಾಂ'ತ ಆಂಜನೇಯನ ಪಾದದ ಭಂಡಾ ರಾನ ನೆತ್ತಿಗೆ ಹಚ್ಕೊಂಡು, ಅಲ್ಲಿಂದ ನೆಟ್ಗೆ ಕುಸ್ತಿಗೆ ಬಂದು, ಕಾಚಾ ಬಿಗ್ದು, ತಾಯೀನ ನೆನಸ್ಕೊಂಡು ನಮಸ್ಕಾರಮಾಡಿ, ಯಜಮಾನ್ರಿಗೆ ನಮಸ್ಕಾರಮಾಡಿ, ಮಟ್ಟೀಗೊಂದು ನಮಸ್ಕಾರಮಾಡಿ, 'ಅಖಾಡಾ' ಕ್ಕಿಳಿದು, ತೊಡೆ ರೆಟ್ಟೆ ತಟ್ಟಿ, 'ಜೈ ಹನುಮಾನ್!' ಅಂದಾಗ ಬಳೇ ಪೇಟೆ ಎಲ್ಲಾ ಒಟ್ಟಿಗೆ 'ಜೈ ಹನುಮಾನ್!' ಎನ್ನುತ್ತಿತ್ತು. ಆಗಲೇ ಆಗಿಹೋಗಿಬಿಡುತ್ತಿತ್ತು ಎದುರಾಳಿಯ ಗುಂಡಿಗೆ, 'ಝುಲ್' ಅಂತ. ಐದು ನಿಮಿಷದ ಮೇಲೆ ಎದುರಾಳಿ ನಿಲ್ಲುತಿರಲಿಲ್ಲ, ಪುಟ್ಟಮಲ್ಲನ ಮುಂದೆ.

ಪ್ರತಿ ಶನಿವಾರ ನಮ್ಮ ಗರಡೀಮನೆಯಲ್ಲಿ ಮಟ್ಟೀಪೂಜೆ, ಆಂಜ ನೇಯನ ಪೂಜೆ. ಅದನ್ನ ನೋಡುವುದಕ್ಕೂ ಅದಲ್ಲದೆ ಬೊಗಸೆ ಬೊಗಸೆ ಕಡಲೆಪುರಿ, ಕಾಯಿ, ಬಾಳೆಹಣ್ಣು ಇವುಗಳನ್ನ ಗಿಟ್ಟಿಸೋದಕ್ಕೂ

ನಾವು ಕೆಲವರು ಹುಡುಗರು ಹೋಗುತ್ತಿದ್ದೆವು. ನಮ್ಮಂಥ ಚಿಕ್ಕವರನ್ನ ಗರಡಿಗೆ ಸೇರಿಸುತ್ತಿರಲಿಲ್ಲ. ಯಜಮಾನರು ಮಾತ್ರ 'ಬನ್ರೋ, ಬನ್ರೋ, ಕೂತ್ಕೊಳ್ಳಿ. ಈಗ್ಲಿಂದ ನೋಡಿದ್ರೇನೇ ನಿಮಗೆ ಇನ್ಮುಂದಕ್ಕೆ ಉಮ್ಮಸ್ಸ ಉಟ್ಟೋದು' ಅಂತ ನಮ್ಮನ್ನ ಬರಮಾಡಿಕೊಳ್ಳುತ್ತಿದ್ದರು. ಆಗ ಯಾವಾಗಲೋ ಗರಡಿ ಸುಬ್ಬಯ್ಯನಿಗೂ ನನಗೂ ಸ್ನೇಹ ಏರ್ಪಟ್ಟಿತು. ಕ್ರಮೇಣ ಅದು ಬೆಳೆಯಿತು. ಸುಬ್ಬಯ್ಯ ನನಗಿಂತ ವಯಸ್ಸಿನಲ್ಲಿ ಮೂರರಷ್ಟು, ಇಲ್ಲದಿದ್ದರೆ ಎರಡೂವರೆಯಷ್ಟಾದರೂ, ದೊಡ್ಡವನು. ಅವನು ಯಜಮಾನರಿಗೆ ಬಲಗೈ. ಮದುವೆ ಆಗಿತ್ತು. ಒಂದು ಗಂಡುಮಗುವೂ ಇತ್ತು.

ಭಾನುವಾರ ಭಾನುವಾರ ಗರಡಿಗೆ ರಜ. ಬಿಡುವಿದ್ದವರು ಸಂಜೆ ಹೊತ್ತಿನಲ್ಲಿ ಧರ್ಮಾಂಬುಧಿ ಕೆರೆಯಲ್ಲಿ ನೀರಿಲ್ಲದೆ ಚೆನ್ನಾಗಿ ಹಸುರಿದ್ದ ಕಡೆ, ಕೆರೇ ಅಂಗಳದಲ್ಲಿ ಉತ್ತರದ ಕಡೆ, ಸೇರಿ ಹರಟೆ ಹೊಡೆಯುವುದು, ಜಂಬ ಕೊಚ್ಚುವುದು, ಇತರ ಗರಡಿಗಳ ವಿಷಯ ಮಾತನಾಡುವುದು, ಏನಾದರೂ ತಿಂಡಿ ತರಿಸಿ ಎಲ್ಲರೂ ಸೇರಿ ತಿನ್ನುವುದು—ಇದು ವಾಡಿಕೆಯಾಗಿತ್ತು.

೨

ಒಂದು ಭಾನುವಾರ ನಾನು ಸುಬ್ಬಯ್ಯನ ಸಂಗಡ ಯಾರನ್ನೋ ನೋಡಲು ಸಂಜೆಹೊತ್ತಿಗೆ ರೈಲ್ವೆ ಸ್ಟೇಷನ್ನಿಗೆ ಹೋಗಿದ್ದೆ. ಯಾರನ್ನು ನೋಡಲು ಹೋಗಿದ್ದೆವೋ ಅವರು ಆ ದಿನ ಬರಲಿಲ್ಲ. ಮನೆಗೆ ಹಿಂದಿರುಗುತ್ತಾ ಕೆರೆಯ ಏರಿಯ ಮೇಲೆಯೇ ನಡೆದು ಬಂದೆವು. ಆಗ ಸುಮಾರು ಆರೂವರೆ ಗಂಟೆಯ ಸಮಯ. ಬೈರಾಗಿಮಠಗಳ ಬಳಿ ಬರುವಾಗ ಸುಬ್ಬಯ್ಯ ನನಗೆ ಹೇಳಿದ: 'ಯಂಗ್ಟೇಶೂ! ನೀನು ಇನ್ಮನೇಗೋಗು. ಇಲ್ಲಿ ನಾಕ್ಜನ ಸ್ನೇಯಿತ್ರವ್ರೆ. ಅವರ್ನ ನೋಡ್ಕೊಂಡ್ಬರ್ತೀನಿ.'

'ಯಾರ್‍ಯಾರು? ಎಲ್ಲಿದ್ದಾರೆ?' ಅಂದೆ.

'ಇನ್ಯಾರು? ಚಿಕ್ರಂಗ, ಪುಟ್ಮಲ್ಲ, ತಿಮ್ಮಪ್ಪಾ, ಇನ್ಯಾರಾದ್ರೂ ಇರ್ಬೌದು. ಅಗೋ, ಕೆರೇ ಅಂಗಳದಾಗ ಇರ್ತೀವಿ ಅಂತ ಯೇಳವ್ರೆ. ನಾಳೇ ವರ್ಸ ಕಾಮಣ್ಣನಬ್ಬಕ್ಕೆ ನಮಗೆ ಲೈಸನ್ ಕೊಡಾಕಿಲ್ವಂತೆ. ಏನ್ ವಿಷಯಾನೋ, ಮಾತಾಡ್ಬೇಕು.'

'ನಾನೂ ಬರ್ತೀನೆ ಸುಬ್ಬಯ್ಯ. ಭಾನುವಾರ, ಇಷ್ಟು ಬೇಗ ಮನೇಗೆ ಹೋಗಿ ಏನ್ಮಾಡೋದು? ಅಲ್ಲಿ ಇರೋರೆಲ್ಲಾ ನಮಗೆ ತಿಳಿದವರೇ. ಏನೂ ಆಕ್ಷೇಪಣೆ ಮಾಡೋದಿಲ್ಲ.'

'ನಿನ್ ಇಷ್ಟಾಪ್ಪ. ಒತ್ತಾದ್ರೆ, ಮನೇಗೆ ನೀನೊಬ್ನೇ ಓಗ್ಬೇಕಾಯ್ತದೆ ನೋಡ್ಕೊ.'

ಆದದ್ದಾಗಲಿ ಅಂತ ಸುಬ್ಬಯ್ಯನ ಜೊತೇಲೇ ಹೊರಟು, ಗೋವಿಂದಶೆಟ್ಟಿ ಬಾವಿ ದಾಟಿ, ದೆವ್ವದ ಗೋಣೀ ಮರಾನೂ ದಾಟಿ, ಕೆರೆ ಒಳಕ್ಕೆ ಇಳಿದು, ಅಂಚಿನಲ್ಲಿಯೇ ನಡೆದುಹೋಗುತ್ತಿದ್ದಾಗ ನೀರು ಬತ್ತಿದ್ದ ಕಡೆ ಹಸುರಿನ ಮೇಲೆ ಮೂರು ನಾಲ್ಕು ಜನ ಕೂತಿರುವುದು ಕಂಡುಬಂತು.

ಸುಬ್ಬಯ್ಯ ಅಲ್ಲಿಂದಲೇ 'ಯಾರೋ! ಚಿಕ್ರಂಗ, ಲೋ!' ಅಂತ ದೊಡ್ಡ ಕೂಗು ಹಾಕಿದ.

'ಲೋ! ಜಲ್ದಿ ಬಾರೋ! ಜಿಲೇಬೀ ಎಲ್ಲಾ ಆಗೋಯ್ತದೆ!' ಅಂತ ಉತ್ತರ ಬಂತು.

ಸುಬ್ಬಯ್ಯನೂ ನಾನೂ ಒಂದೇ ದೌಡು ಓಡಿ ಗುಂಪನ್ನು ಸೇರಿದೆವು. ನನಗೂ ಎರಡು ಜಿಲೇಬಿ ಎರಡು ವಡೆ ಸಿಕ್ಕಿತು. ಅಷ್ಟು ಹೊತ್ತಿಗೆ ಮುದುಕ, ಕಾವಲು ಚಿನ್ನಯ್ಯ, ಭಾನುವಾರದ ಮಾಮೂಲು ತಿಂಡಿಗೆ ಆಸೆಪಟ್ಟುಕೊಂಡು ಅಲ್ಲಿಗೆ ಬಂದ. ಅವನಿಗೂ ಒಂದೆರಡು ಜಿಲೇಬಿ, ಎರಡು ಮಸಾಲೆ ವಡೆ ಸಿಕ್ಕಿತು. ದವಡೆಯಲ್ಲಿ ಹಲ್ಲುಗಳು ಇಲ್ಲದಿದ್ದರೂ ಹೇಗೋ ಅದನ್ನು ತಿಂದ.

ತಿಂದುಬಿಟ್ಟು ಹೇಳಿದ: 'ಅದ್ಯಾಕಾ, ಶಿಕ್ರಂಗಪ್ಪಾ, ಈ ಬರೋ ವರ್ಸ ನಮ್ಗಿಣೀಕಾಮನ್ನ ಕೂರ್ಸಕ್ಕಿಲ್ಲಾ? ಲೇಶನ್ ಯಾಕ್ ಕೊಡಾಕಿಲ್ಲಾ ಅಂದ್ರಂತೆ? ನಗತರ್‌ಪೇಟೆ ಕಾಮನ್ ಕೂಡಿಸ್ತಾರೆ. ಗಾಣಗರ್ ಪೇಟೇದು ದೊಡ್‌ಯವಾರ ಬಿದ್ದೈತಂತೆ. ಯೆಂಗಾರ ಮಾಡಿ, ನಮ್ಗಿಣೀಕಾಮಣ್ಣನ್ನ ಕೂಡ್ಸೇಬೇಕ್ರು. ನರಸಿಂಸಾಮಿ ಗುಡೀ ಪೂಜಾರಿ ವರದಪ್ಪ ಕಾಮಣ್ಣನ್ ಕೂಡ್ಸೋ ಅಂಗಿದ್ರೆ ರತದ್‌ಗಾಡೀಖಾನೇನೆ ಖಾಲಿಮಾಡ್ಕೊಡ್ತೀನೆ ಅಂತ ಯೇಳ್ತಾನಂತೆ. ಬರೋ ಕಾಮನಬ್ಬ

ಬಲ್‌ಸಂದಾಗ್ಮಾಡಬೇಕು! ಏನಂತೀಯ, ತಿಮ್ಮಪ್ಪ? ಏನ್, ಪುಟ್ಮಲ್ಲಪ್ಪ? ಯಜಮಾನ್ರೂ, ಸುಬ್ಬಯ್ಯ, ಮನಸ್ಮಾಡಿದ್ರೆ, ಲೇಶನ್ ಸಂಪಾದ್ನೋದ್ ಏನ್ಕಷ್ಟ? ಅಲ್ಲಾ, ಆದ್ಯಾಕ — ಒಬ್ರೀಗೊಂದು ಒಬ್ರೀಗೊಂದು ಮಾಡೋದು ಈ ಸರಕಾರದೋರು? ದುಷ್ಟೀಕಮೀಶನ್ರುನೇ ಓಗಿ ಮೊಕ್ತಾ ಕೇಳ್ಬಿಡೋದು—ಯಾಕೆ? ಏನ್ ತೆಪ್ಪೈತೆ ನಂತಾವ? ಯಾಕ್ ಲೇಶನ್ ಕೊಡಾಕಿಲ್ಲಾ? ಅಂತ.'

'ಯಾಕ್ ಚಿನ್ನಯ್ಯ? ಓದ್ಸಾರಿ ಕಾಮನಬ್ಬಕ್ಕೆ ಊರಾಗಿರ್ನಿಲ್ವ ನೀನು? ಎಲ್ಲೋಗಿದ್ದೆ?' ಅಂದ, ಚಿಕ್ಕರಂಗಪ್ಪ.

'ಊರಾಗಿರ್ನಿಲ್ಲಾ, ರಂಗಪ್ಪ. ನನ್ನಳಿಯನ್ಗೆ ಜೀವಕ್ ಉಸಾರಿರ್ನಿಲ್ಲ. ಅದ್ಕೇ ಆನ್‌ಕಲ್ಗೋಗಿದ್ದೆ. ಅದ್ನೈದ್ದಿನ ಅಲ್ಲೇ ಇದ್ಬುಟ್ಟೆ' ಅಂದ ಕಾವಲು ಚಿನ್ನಯ್ಯ.

'ಅದ್ಕೇ ನಿಂಗ್ ಸಮಾಚಾರಾನೇ ಗೊತ್ತಿಲ್ಲ. ಓದ್ಸಾರಿ ಕಾಮ ನಬ್ಬದಾಗ ಎಳ್ಡ್ ಅನಾವುತಗ್ಳು ನಡದೋದ್ವು. ಪುಟ್ಟಮಲ್ಲ, ನೀನೂ ಇರ್ಲಿಲ್ಲ. ಮಾಗಡೀಗ್‌ಓಗಿದ್ದೇ ಅಂತ ಯೋಳದ್ರು. ತಿಮ್ಮಪ್ಪಾ, ನೀನಿದ್ದ್ಯೋ ಇಲ್ವೊ?' ಅಂದ ಚಿಕ್ಕರಂಗಪ್ಪ.

'ಶನ್ನಾಗೇಳ್ದೆ ಯೋಳು! ಯಾಕ್ ನಾನಿರ್ನಿಲ್ವಾ! ಡಾಕ್ಟರ್ನ ಕರ್ಕೊಂಬಂದೋನು ನಾನೇ ಅಲ್ವಾ, ಮಿಶೀನ್ ಆಸ್ಪತ್ರೇಯಿಂದ?' ಅಂದ ತಿಮ್ಮಪ್ಪ.

ಆದಕ್ಕೆ ಚಿಕ್ಕರಂಗಪ್ಪ ಅಂದ: 'ಔದೌದು. ಈಗ್‌ನೆಪ್ಪಾಯ್ತು, ನೋಡ್ದಾ! ಇಗೋ ಈ ಸುಬ್ಬಯ್ಯನೂ ನೀನು ಓಗಿ ಕರತಂದ್ರಲ್ಲಾಪ್ಪಾ. ಆಸ್ಪೊತ್ಗೆ ಯಾವಾಗ್ಲೋ ಓಗ್ಬುಟ್ಟಿತ್ತು ಜೀವ, ಗೋವಿಂದೂಗೆ. ಪಾಪ, ಆ ಮುದುಕಿ ಅಂಕಮ್ಮ ಬಂದು, ಎದೆ ಎದೆ ಬಡ್ಕೊಂಡ್ಳಲ್ಲಾ, 'ನನ್ಮಗನ್ನ ಕೊಂದು ಬಿಟ್ರಾ'ಂತ. ಅವಳ್ಗಿದ್ದದ್ದು ಗೋವಿಂದೂ ಒಬ್ನೇ ಮಗ. ಏನಾಯ್ತೋ, ಎಂಗೋಯ್ತೋ ಗೋವಿಂದೂ ಜೀವ? ಈವತ್ತಿನ ವಗೂರ್ ಯಾಗರ್ೂ ಗೊತ್ತೇ ಇಲ್ಲ. ಡಾಕ್ಟ್ರು ಮಂಕ್ಬಿದ್ದೋದ್ರು— 'ಉದ್ರ್ಯ ನಿಂತೋಯ್ತೂಂ'ದ್ರು. ಪೋಲೀಸ್ ಇನ್ಸ್‌ಪೇಟ್ರು ಮಾತ್ರ ಜೆದ್ದಿಡದ್ರು—'ಎಲ್ಲಾರ್ನೂ ಪಾಸೀಗೆ ಆಕಿಸ್ಬಿಡ್ತೀನಿ' ಅಂತ. ನೀನು,

ಸುಬ್ಬಯ್ಯ, ಅವರ್ನ ಬೋ ರೇಗಿಸ್ಬಿಟ್ಟೆ. ಅದಕ್ಕೇ ಅವ್ರು ಅಸ್ಟು ಬಿಗ ಡಾಯಿಸಿಕೊಂಡುಬಿಟ್ರು.'

'ಅಸ್ಟಲ್ದೇ ಏನ್, ಶಿಕ್ರಂಗಪ್ಪ? ಯಾರೂ, ಏನೂ, ಅಂತ ವಿಚಾರಿಸ್ದೆ ಎಲ್ಲಾರ್ನೂ ಬಾಯಿಗ್ಬಂದಂಗೆ ಅನ್ನೋದಾ ಅವನು? ನಮ ಗೇನು, ಮನೆ ಮಠ ಇಲ್ವಾ? ಯೆಂಡ್ರೂ ಮಕ್ಳೂ ಇಲ್ವಾ? ಇತರ್ರ ಮಕ್ಕಳ್ನ ಆಟಕ್ಕೊಲ್ಲೋ ನೀಚ್ರು ನೀವೂಂತ ನಮ್ಮೆಲ್ರನ್ನ ಬೈದ್ರೆ, ಸುಂಕೆ ಇರ್ಬೇಕಾ ಕೇಳ್ಕೊಂಡು? ಪೋಲಿಸ್ನೋರಿರೋದು, ತಂಟೆ ತಕರಾರ್, ದೊಂಬಿ ಲೂಟಿ, ಅಪಾಯ ಅನಾವ್ತ ಇವುಗಳ್ನ ಆಗೋ ಕ್ಕೊಡಲೇ ಅದಸ್ಟು ತೆಪ್ಸೋದಕ್ಕಲ್ವಾ? ಆಮೇಲೇನು, ಕಳ್ಳ ಸಿಕ್ಕಿದ ಮ್ಯಾಕೆ? ತೆಪ್ಪು ಮಾಡಿದೋನು ಸಿಕ್ಕಿದ ಮ್ಯಾಕೆ, ಅವನ್ನ ಸಿಕ್ಸೆ ಮಾಡೋದು ಯಾವ ದೊಡ್ಡ ಕೆಲಸ? ಚೂಚ್ನ ಕಂಡಿಡಿಯೋದಕ್ಕೆ ಯೋಗ್ಯತೆ ಇಲ್ದೋನು ಪೋಲೀಸ್ ಕೆಲಸಕ್ಕೆ ನಾಲಾಯಕ್!' ಅಂತಂದ ಸುಬ್ಬಯ್ಯ.

'ನಾನ್ ಮಾಗಡೀಂದ ಬಂದ ಮ್ಯಾಕ್ ತಿಳೀತು, ಸಮಾಚಾರ ಎಲ್ಲಾ' ಅಂತಂದ ಪುಟ್ಟಮಲ್ಲ.

ಆವಾಗ ಕಾವಲು ಚಿನ್ನಯ್ಯ 'ಅದೆಂಗೆ ಯೇಳು, ಶಿಕ್ರಂಗಪ್ಪ, ಅಂಕಮ್ಮನ ಮಗ ಗೋವಿಂದೂಗೆ ಎಂಗ್ಜೀವ ಓಯ್ತು? ಯುಜಮಾನ್ರ ತಮ್ಮ ರಂಗಸಾಮಪ್ಪ ಯೆಂಗ್ ಸತ್ತೋದ್ರು? ಒಬ್ಬೊಬ್ರು ಒಂದೊಂದು ಯೇಳ್ತಾರೆ. ನೀನಾದ್ರೆ ಅಲ್ಲೇ ಯಿದ್ದೋನು. ನಿನ್ಮಾತೇ ನಂಬ್ಕೆ ಕನಪ್ಪಾ. ನೀನೇಳಿದ್ರೇನೇ ಸೈ' ಅಂತ ಕೇಳಿಕೊಂಡ.

ಆಗ ಚಿಕ್ಕರಂಗಪ್ಪ ನಾಲ್ಕು ತಿಂಗಳು ಕೆಳಗೆ ನಡೆದು ಹೋಯಿ ತಲ್ಲಾ ಆ ಕಾಮನ ಹುಣ್ಣಿಮೇ ದಿನದ ಚರಿತ್ರೇನ ಹೇಳುವುದಕ್ಕೆ ಮೊದಲುಮಾಡಿದ.

೩

"ಅರಳೇಪೇಟೆ ನಿಜನಿಂಗಪ್ಪ 'ತುರಾ'ರ್ಘುಂಡಾ ಎತ್ಕಟ್ಟಿದ್ ನೋಡಿ, ನಂ ಯುಜಮಾನ್ರ ತಮ್ಮ ರಂಗಸಾಮಪ್ಪ 'ಕಲ್ಕಿ' ರ್ಘುಂಡಾನಾ ಎತ್ತಿದ ಮ್ಯಾಕೆ . . . ತಗೋ, ಷುರು ಆತು ವಾಗ್ವಾದ: 'ತುರಾ'ನೇ

ಎಚ್ಕೊಂತ ಅವ್ರು; ' ಕಲ್ಕಿ ' ' ತುರಾ'ನ ನುಂಗ್ಬಡ್ತು, ಅಂತ ರಂಗ ಸಾಮುಪ್ಪ. ಯೆಂಗಪ್ಪಾ, ಯಾರಪ್ಪಾ, ನಿರ್ದರ್ಸೋದು ಈ ತೊಡಕ್ನ? ಏನ್ ಪಂಚಾಯ್ತಿ ಇಡೋ ಯವಾರ್ವಾ ಇದು? ದೊಡ್ ದೊಡ್ ಯಿದ್ವಾಂಸರ್ಗೆ ತಿಳ್ಯಾಕಿಲ್ಲ, ಈ ವಿಸ್ಯ! ಪೈಸಲ್ ಮಾಡೋ ಛಾತೀ ಯಾವೋನ್ಗೈತೆ! . . .

"ಮಾತಿಗ್ ಮಾತುಗ್ಳು ಬೆಳದು, ರಂಗಸಾಮುಪ್ಪ ತೆಗೆದಿಟ್ಟ—ಚಿನ್ನದ್ಗಂಟೆ ಆಕಿ, ಕೆಂಪು ವಜ್ರಗ್ಳು ಕೆತ್ತಿದ್ದ ಚಿನ್ನದ್ ತೋಡಾನಾ! ಸಾಮ್ರಾಜೊಡೆಯ್ರು ಕೊಟ್ಟಿದ್ದು, ರಂಗಸಾಮುಪ್ಪನ್ಗೆ ಆ ತೋಡ—ಮೈಸೂರಿಗ್ ಕರಿಸ್ಕೊಂಡು, ಸಾಮುಂಡೇಸ್ವರಿ ದೇವಸ್ತಾನ್ದಾಗ ಆ ಮಾತಾಯಿ ಮುಂದೆ ಕುಂಡ್ರಿಸ್ಕೊಂಡು, ಲಾವಣಿಗಳೇಳ್ಸಿ—ಮೈಸೂರಿಗೆ ಮೈಸೂರೇ ಸೈ ಅಂದೋಯ್ತು ರಂಗಸಾಮುಪ್ಪನ್ನ ಯಿದ್ವಾಂಸ್ರೂ ಸಾಸ್ತ್ರಿಗ್ಳೂ ಮೂಗಿನ್ಮೇಲೆ ಬೆಳ್ಳಿಟ್ಕೊಂಡು 'ಆ ಮಾತಾಯೀನೇ ನಾಲ್ಗೇಲಿ ನೆಲಸ್ಬಿಟ್ಟಾಳೆ ರಂಗಸಾಮುಪ್ಪನ್ಗೆ!' ಅಂತ ಪೊಗಳಿದ್ರು . . . ಒಂದ್ ಸಾವಿರ್ರೂಪಾಯಿ, ಚಿನ್ನಯ್ಯಾ, ಆ ತೋಡಾ ಬೆಲೆ! ತೆಗೆದಿಟ್ಬಿಟ್ಟ ರಂಗ ಸಾಮುಪ್ಪ: 'ಗೆದ್ಕೊಂಡೋಗ್ಲಿ ತುರಾದೋರು ಕಲ್ಕೀನ ಸೋಲ್ಸಿ. ಸೋತ್ವಂತ ಒಪ್ಕೊಂಡ್ರೆ, ಇಳೀಸ್ಬಿಡ್ಲಿ ತುರಾ ಝುಂಡಾನ. ಅವ್ರೇನೂ ಬಾಜೀ ಮಡಗ್ಬೇಕಾದ್ದಿಲ್ಲಾ'ಂತ ಅಂದೇಬುಟ್ಟ. ದಿಲ್‌ದಾರ ರಂಗ ಸಾಮುಪ್ಪ! ಬೋ ದಿಲ್‌ದಾರ! . . .

"ನಿಜನಿಂಗಪ್ಪ ಏನ್ ಕಮ್ಮಿ ಆಳಲ್ಲ! ಊರಿನ ಸಿವಾಸಾರದೋರೆಲ್ಲಾ ಖುಮ್ಮಕ್ಕು ಅವನ್ಗೆ. ವುಬ್ಬಳ್ಳಿ ದಾರವಾಡಾನೆಲ್ಲಾ ಜೈಸ್ಕೊಂಡು ಬಂದೋನು. ಆತಣಿ ಸಿವ್ಯೋಗ ಮಟದೋರು ಶಾಲ್ಜೋಡಿ ಒದ್ಸಿ ಕಳೀಸ್ಕೊಟ್ರು, ಈಗ ಎಳ್ಡು ವರ್ಸಕ್ಮುಂಚೆ ನಿಜನಿಂಗಪ್ಪಂಗೆ . . .

"ಸರಿ, ಪಂಚಾತ್ರು ಸೇರ್ದ್ರು. ಯಾರ್ಯಾರು? ನಂಪೇಟೆ ಯಂಗಟ್ರಾಮಾ ಸಾಸ್ತ್ರಿಗಳು, ಅಲ್ಸೂರ್ಪೇಟೆ ರಾಮಾ ಜೋಸ್ರು, ಮಾಂತಿನ್ ಮಟದ ಯಿರೂಪಾಕ್ಸ ಸಾಸ್ತ್ರಿಗಳು, ಗಂಡ್ಗೆಅಂಗ್ಡಿ ಯೀರಬದ್ರಪ್ನೋರು, ಸಿಕ್ಪೇಟೆ ನರ್ಸಿಮ್ಮಯ್ನೋರು, ತರಗ್ಪೇಟೆ ಮಂಡಿ ಅರಿಯಣ್ನೋರು . . . ಎಲ್ಲಾ ಸೇರಿದ್ರು . . .

"ಕಾಮನುಣ್ಮೇ ದಿನಾನೇ 'ಮೇಳ' ಇಟ್ರು, ಕಾಸೀ ಯಿಸ್ವೇಸ್ವರನ ದೇವಸ್ತಾನ್ದಾಗ. ಆ ದಿನ ಒಂಬತ್ಗಂಟೇಗೆ ಪರ್ಸೆ ಸೇರ್ದಂಗ್ಸೇರ್ಬಿಡ್ತು ಜನ. ದೇವಸ್ತಾನದ್ಮುಂದೆ ಬೀದೀಲೆಲ್ಲಾ ಸೇರ್ಬುಡ್ತು ಜನ. ಎಲ್ಲಾ ಗಳ್ಡ್ಯೋರೂ ಬಂದು ಕೂತ್ಬುಟ್ಟಿದ್ರು. ಟೇಮ್ಗೆ ಸರ್ಯಾಗಿ ಪಂಚಾಯಿದ್ದಾರ್ರೂ ಬಂದ್ರು. ಬೋ ದೊಡ್ಸಬೆ ಸೇರ್ಬುಡ್ತಪ್ಪಾ! ನಮ್ದೂ 'ಕಲ್ಕಿ' ಪಂಗಡ. ಸ್ರೀ ರಾಜರಾಜೇಸ್ವರೀ ಪಟ ಇಟ್ಟು, ನೂರೆಂಟ್ ತೆಂಗನ್ಕಾಯ್ ಒಡದು, ಪಟಕ್ಕೆ ಕೆಂಪ್ಕಣಿಗಲು ಹೂಸರ ಆಕಿ, ಕೆಂಪು ತಾವರೆಹೂ ಸಿಕ್ಸಿ, ದೊಡ್ ಕುಂಕುಮದ ರಾಸಿ ಗೋಪುರಮಾಡಿ, ಮೇಲೆ ಚಿನ್ನದ್ ಕತ್ತಿ ನೆಟ್ಟು, ಕೊನೇಗೊಂದ್ ಲಿಂಬೆಅಣ್ ಸಿಕ್ಸಿ, ಲಕ್ಸಣ್ವಾಗಿ ಪೂಜೇ ಮಾಡಿ, ಪಂಚೇರು ಕರ್ಪೂರ ರಾಸೀ ಆಕಿ ಅತ್ಸಿ, 'ಜೈ ಮಹಾಕಾಳೀ' ಅಂತ . . . ರಂಗಸಾಮುಪ್ಪ ನಮುಸ್ಕಾರಮಾಡ್ದ, ನೋಡು! ಮೈತುಂಬಿಬಿಡ್ತು ದೇವ್ರು ರಂಗಸಾಮುಪ್ಪನಿಗೆ! 'ಏಕ್ತಾರ್' ಯಿಡಿದು ಕೂತ್ಬುಟ್ಟ ಜಗಧೀಸ್ವರಿ ಧ್ಯಾನಮಾಡ್ತಾ! . . .

"ನಿಜ್ಲಿಂಗಪ್ಪ ಕಾವೀಬಟ್ಟೆ ಉಟ್ಕೊಂಡು, ಉಬ್ಬಳ್ಳಿ ಪೇಟಾ ಕಟ್ಕೊಂಡು, ಅಣೇ ತುಂಬ ಕಣ್ಣು ತುಂಬ ಕಿವಿ ತುಂಬ ಯಿಬೂತಿ ಬಳ್ಕೊಂಡು, ರುದ್ರಾಕ್ಸಿಸರಗ್ಳಾಕ್ಕೊಂಡು, ಆವ್ಗೆ ಮೆಟ್ಕೊಂಡು ಬಂದಿದ್ದನ್ನ ನೋಡಿದ್ರೆ—ಸಾಕ್ಸಾತ್ ಸಿವನೇ ಬಂದಂಗಿತ್ತು, ಆ ಸಬೇಲಿ! . . .

"ಪಂಚಾಯುತ್ದಾರ್ರು ರಾಮಾಜೋಸ್ರು ಎದ್ನಿಂತ್ಕೊಂಡು, 'ತುರಾ'ಕ್ಕೂ ಕೈಮುಗ್ದು, 'ಕಲ್ಕಿ'ಗೂ ಕೈಮುಗ್ದು, ಸಬೇಗೂ ಕೈಮುಗ್ದು, 'ಮೊದಲ್ ಯಾರ್ ಸವಾಲ್ ಆಕ್ತೀರಿ? ದೊಡ್ಸಬೆ ಸೇರ್ಯೈತೆ. ಲಾವಣಿಗ್ಳು ಆಡೋವಾಗ ಪುಂಡ್ಮಾತ್ತೂ ಬಂಡ್ಮಾತ್ತೂ ಬರಬಾರ್ದು. ಸಬೇಲಿ ಆಕ್ತಂಗ್ಯೋರು ಇದ್ದಾರೆ, ಯಿದ್ವಾಂಸರಿದ್ದಾರೆ, ಸಾವ್ಕಾರ್ರಿದ್ದಾರೆ. ನಾಯುವಾಗಿ ವಾಗ್ವಾದ ನಡೀಲಿ. ಸಿಂ ಯಿದ್ವತ್ತು ಕೇಳೋಕೆ ಊರೆಲ್ಲಾ ಸೇರ್ಯೈತೆ. ನಮಿಗೂ ಆಸೆ ಆಯ್ತದೆ. ನಮಿಗ್ ತಿಳಿದ್ಮಟ್ಗೆ ನ್ಯಾಯುವಾಗೇ ಪೈಸಲ್ ಮಾಡ್ತೀವಿ. ಊಂ! ಆಕ್ರಿ, ಯಾರ್ದು ಮೊದಲ್ನೇ ಸವಾಲ್!' ಅಂದ್ರು . . .

"'ತುರಾ'ದೋರು 'ನಮ್ದೇ' ಅಂದ್ರು . . .

"ನಿಜನಿಂಗಪ್ಪ ಐದ್ ನಿಮ್ಸ ಗುಡೀ ಒಳಕ್ಕೋಗಿ, ಇಸ್ವೇಸ್ವರನ ದರಸ್ನ ಮಾಡಿ, ಕೈಮುಗ್ದು, ಗುಡಿಯಿಂದ್ಲೇ 'ಏಕ್‌ತಾರ್' ಬಾರಸ್ತಾ ಒರಕ್ಬಂದು, 'ನಂಜುಂಡ ನಂಜುಂಡ ಚಿನ್ಮಯರೂಪ ನಿಜಲಿಂಗ ನಂಜುಂಡಾ'ಂತ ಆಡ್ದ. ಮೂರ್ಸೇನೇ ಬಿದ್ದೋಯ್ತು ಜನ! ಅಂಗಾಡ್ಬಿಟ್ಟು, 'ಬ್ರಮ್ಮನ್ನ ಯಿಡಿದಿತ್ತು ಮಾಯೆ, ಯಿಸ್ನೂನ ಯಿಡಿದಿತ್ತು ಮಾಯೆ, ನಂ ಸಿವನತ್ರ ಸುಳೀವಲ್ದು ಮಾಯೆ' ಅಂತ ಲಾವಣೀ ಆಡಿ, 'ಇದೇ ನನ್ ಮೊದಲ್ನೇ ಸವಾಲ್!' ಅಂದ . . .

"ರಂಗಸಾಮಪ್ಪನ್ಗೆ ಆವೇಸ ಬಂದ್ಬಿಟ್ಟಿತ್ತು. 'ಜೈ ರಾಜರಾಜೇಸ್ವರೀ' ಅಂತೇಳಿ ಎತ್ತಿದ ನೋಡು ಲಾವಣೀನ! ಆ ವಯಸ್ನಲ್ಲೂ ಡಾ ರಂಗಸಾಮಪ್ಪಂಗೆ ಅದೇನ್ ಸಾರೀರಾ ಅಂತೀಯ! ಉಡಾನ್ ಎತ್ತಿದ್ರೆ, ಕೇಚ್ರಕ್ಕೇ ಮುಟ್ತು. ಆ ಸವಾಲ್ಗೆ ಎಂತಾ ಜವಾಬ್ ಕೊಟ್ಟಾ ರಂಗ ಸಾಮಪ್ಪ—'ಬೇಷ್ ರಂಗಸಾಮಪ್ಪಾ! ಬೇಷ್!' ಅಂದ್ಬುಟ್ರು ಸಬೆಯೋರೆಲ್ಲಾ . . .

"ನಿಜನಿಂಗಪ್ಪಾ ಏನ್ ಕಮ್ಮಿ ಪಿಂಡಾನಾ! ಆಕ್ದಾ ಢಡಾ ಸವಾಲ್! ಅಲ್ಲಾಡೋಯ್ತು ಜನ! ಸಾಸ್ತ್ರಿಗೈಲ್ಲಾ ಮೂಗಿನ್‌ಮ್ಯಾಗ ಬೆಳ್ಳಿಟ್ಕೊಂಬುಟ್ರು . . .

"ತಿರ್ಗಿ ರಂಗಸಾಮಪ್ಪ ಒಂದು ಚುಟುಕದಾಗ ಎಗರಿಸ್ಬಿಟ್ಟ ಕಲ್ಕಿ ಸವಾಲ್ನ . . .

"ಯಿಂಗೇ ರಾತ್ರಿ ಹನ್ನೆಳ್ಡು ಗಂಟೆ ಆಗೋಯ್ತು . . .

"ಕಡೇಗೆ 'ಮುಕ್ಕಣ್ಣನ್ ಜರೆದೋರು ಮೂರ್ಗಳ್ಗೆ ಬದ್ಕೋದಿಲ್ಲಾ'ಂತ ಸಾಪ ಇಟ್ಟ ನಿಜನಿಂಗಪ್ಪ. ಕುಂತಿದ್ದ ಯಜಮಾನ್ರಿಗೆ ಕೆಂಡದಸ್ಟು ಸಿಟ್ಬಂದೋಯ್ತು. 'ಏನ್, ಸಾಸ್ತ್ರ ನಡಸೋಕ್ ಬಂದರೋ ನೀವು? ಇಲ್ಲಾ, ಯವಾರಾ ಮಾಡಾಕ್ ಬಂದರೊ?' ಅಂತ ಹೊಡೆಯೋದಕ್ಕೆ ಓಗ್ಬುಟ್ರು. ಅಸ್ಟ್ರರಲ್ಲೇ ರಾಮಾಜೋಸ್ರೂ ಕಾಯಂಗ್ಡಿ ಪಾಪಣ್ಣ ಇಬ್ರೂ ಓಡೋಗಿ ಯಜಮಾನ್ರ ಕೈಗಾನಾ ಇಡ್ಕೊಳ್ದಿದ್ರೆ, ಉಳ್ಕೋಯ್ತಾನಿದ್ದ್ವ ತಲೆಗ್ಳು ಆ ರಾತ್ರಿ . . .

“ಸಾಸ್ತ್ರಿಗ್ಳು ಎಲ್ಲಾರ್ನೂ ಸಮಾದಾನಮಾಡಿ, ಬಾಸ್ಣಾಮಾಡಿ, ಬುದ್ವಾದ ಯೋಳ್ದ್ರು. ‘ಕಲ್ಕಿ’ಂದ್ರೆ ಏನು? ‘ತುರಾ’ಂದ್ರೆ ಏನು? ಅದಿಲ್ದೆ ಇದಿಲ್ಲ, ಇದಿಲ್ದೆ ಅದಿಲ್ಲ. ನಮ್ಗೆಲ್ಲಾ ಆವರ್ಸ್ಕೊಂಡಿರೋದು ‘ಮಾಯೇ’ನೆ. ಈ ಮಾಯೇನ ಜೈಸ್ದೋನೆ ಈ ಭೂಮಿಮ್ಯಾಗೂ ಮಾದೇವ. ಈ ದಿನ ವಾದ ಮಾಡ್ದೋರಿಬ್ರೂ ಚನ್ನಾಗಿ ಸಾಸ್ತ್ರ ತಿಳ್ದೋರು. ನಮ್ಗೇ ತಿಳೀದಿದ್ ಸಂಗ್ತಿ ಎಸ್ಟೋ ಇವರಿಗ್ಗೊತ್ತೈತೆ. ಯಿಂಗೇ ಎಲ್ಲಾರೂ ಓದಿ ಕಲ್ತು ಬುದ್ದಿವಂತ್ರಾಗಬೇಕು. ನಮ್ದೇ ದೊಡ್ದು, ನಮ್ದೇ ದೊಡ್ದೂಂತ ಯುವಾರ ಮಾಡಬಾರ್ದು. ಈ ಪರ್ಪಂಚ ಸ್ರುಸ್ಟಿ ಮಾಡಿರೋ ದೇವ್ರಿಗೆ ಚಿಕ್ಕದ್ಯಾವ್ದೂ ಇಲ್ಲ, ದೊಡ್ಡದ್ಯಾವ್ದೂ ಇಲ್ಲ. ನಾವೂ ನಮ್ಮ ಬುದ್ದೀಂಬೊ ಕಣ್ಣ ಚಿಕ್ಕದ್ಮಾಡ್ಕೋಬಾರ್ದು. ಸಿವನಿಗೂ ಸಕ್ತೀಗೂ ಬೇದ ಎಲ್ಲೈತೆ? ಸಿವನ ಸಕ್ತೀನೇ ಮಾಯೆ. ಸರೀರ ಬೇರೆ, ಸಕ್ತಿ ಬೇರೆ ಮಾಡೋದಕ್ಕಾಯ್ತದಾ? ಒಂದ್ರೊಳ್ಗೆ ಒಂದು ಸೇರ್ಕೊಂಡಿದ್ರಲ್ವಾ ಜೀವ—ಜೀವ್ನ. ಎಳ್ಡೂ ಕೂಡೇ ಇರ್ಬೇಕು. ಬೀಜ ಮೊದ್ಲೋ ಗಿಡ ಮೊದ್ಲೋ ಅಂತ ವಾದಮಾಡಿದ್ರೆ ಕೊನೆ ಎಲ್ಲಿ? ಮೊದ್ಲೆಲ್ಲಿ?’ ಅಂತ ದೊಡ್ಡ ಬಾಸ್ಣಮಾಡಿದ್ರು . . .

“ರಂಗಸಾಮಪ್ಪನ್ಗಂತೂ ಇನ್ನೂ ಕೊಂಚ್ಕೊಂಚ ಪ್ರಗ್ನೇನೆ ಬಂದಿರ್ನಿಲ್ಲ. ಅಂಗೇ ಗಾಡೀಲಿ ಮಲಗಿಸ್ಕೊಂಡು ಮನೇಗ್ ಸಾಗಿಸಿದ್ರು. ಮನೇಗೋದ್ಮೇಲೆ ಗೊತ್ತಾಯ್ತು—ಕೈ ಕಾಲು ಬಾಯಿ ಮುಖ ಕಣ್ಣು ಒಂದೂ ಸೋದೀನದಾಗಿಲ್ಲಾಂತ. ವೈದ್ರು ಬಂದು ಯೋಳಿದ್ರು—ಲಕ್ವಾ ಒಡ್ದಿದೇಂತ. ಆಮೇಕೆ ಒಂದೇ ದಿನಾನೆ ರಂಗ್ಸಾಮಪ್ಪ ಇದ್ದದ್ದು. ತೀರ್ಕೊಂಬುಟ್ಟ. ‘ನಿಜ್ನಿಂಗಪ್ಪನ ಸಾಪ ನಿಜಾ ಆಗೋಯ್ತು’ ಅಂತ ಆಡ್ಕೊಂತು ಜನ. ಡಾಕ್ಟ್ರು ಬಂದೇಳಿದ್ರು—ತಲೆ ಒಳ್ಗೆ ರಕ್ತದ ಒಡತ ಯೆಚ್ಚಾಗಿ ಯಿಂಗಾಗೋಯ್ತು ಅಂತ . . .

“ಅಲ್ಲಿ ಆಕಡೆ ಯಿಂಗೆ ಯಿಸ್ವೇಸ್ವರನ್ ಗುಡೀಲಿ ಮೇಳ ಸೇರಿದ್ದಾಗ ನಂಪೇಟೆ ಪಡ್ಡೆಉಡುಗ್ರೆಲ್ಲಾ ಸೇರ್ಕೊಂಬುಟ್ಟು ಯೀಕಡೆ ಒಂದ್ ಅನಾವೃತ ನಡಸಿಬುಟ್ರು. ಏನೂಂತೀಯಾ . . . ನಿನಗ್ ಗೊತ್ತೈತಲ್ಲಾ ನಂಪೇಟೆ ವಾಡ್ಕೆ. ಎಲ್ರೂ ಕಾಮಣ್ಣನ್ನ ವುಣ್ಣಿಮೆ

ರಾತ್ರೀನೇ ಸುಟ್ರಿ, ನಾವು ಬೆಳಗಿನ್ ಜಾಮ ಐದ್ಗಂಟೆ ಒತ್ತಿಗೆ ಬೆಂಕಿ ಅಚ್ಕೋದು. ನಾವೆಲ್ಲಾ ಇನ್ನೂ ಗುಡೀಲೇ ಇದ್ದಾಗ, ರಂಗಸಾಮಿ ಗುಡಿ ಬೀದಿ ಬಳೇಪೇಟೆ ರಸ್ತೆ ಎಳ್ಳೂ ಸೇರ್ತ್ಯೆತಲ್ಲಾ ಆ ಚೌಕ್ದಾಗ ಕಾಮಣ್ಣನ್ ಕಂಬ ನೆಟ್ಬುಟ್ಟು, . . . ಆದೇನ್ ದುರ್ಬುದ್ಧಿ ಬಂತೋ ಅವರ್ಗ . . . ಲೋ! ಕಾಮಣ್ಣನ್ನ ಚಟ್ಟ ಕಟ್ಟೋಣ್ರೊ! ಅಂತ ಮಾತಾಡ್ಕೊಂಡು, ಎಳ್ಡು ಬೊಂಬು, ಗಳ, ಅಗ್ಗ, ಎಲ್ಲಾ ಜಮಾಯ್ಸಿ ಚಟ್ಟಕಟ್ಟಿ, ಅದರ್ಮೇಗೆ ಆ ಎಳೇ ನಿಂಬೇಕಾಯಿ, ಆ ಅಂಕಮ್ಮನ ಮಗ ಗೋವಿಂದೂನ ಕಾಸ್ಕೊಟ್ಟು ಪುಸಲಾಯ್ಸಿ, ಎಣದಂಗೇ ಮನಿಗಿಸ್ಬಿಟ್ಟು, ಅಗ್ಗದಿಂದ ಚಂದಾಗಿ ಕಟ್ಬುಟ್ಟು, ಉವ್ವಾ ಗಿವ್ವಾ ಆಕಿ, ಗಂದದ್‌ಕಡ್ಡಿ ಅಚ್ಚಿ ಸಿಕ್ಸಿ . . . ಆ ಕೆಂಜನರಸಿಮಯ್ಯನ್ ಮಗನ್ಗ ಸೀರೆ ಉಡ್ಸಿ, ಬಳೇ ತೊಡ್ಸಿ, ತಲೇ ಬಿರೇ ಆಕ್ಸಿ, 'ನನ್ ಗಂಡ ಸತ್ತೋದ್ನೋ! ನನ್ ಮನ್ಮತ ಸತ್ತೋದ್ನೋ'ಂತ ಎದೆಎದೆ ಬಾಯ್‌ಬಾಯ್ ಬಡ್ಕೊಂತೇ ಳ್ಕೊಟ್ಬುಟ್ಟು . . . ನಾಕ್ ಜನ ಆ ಚಟ್ಟಾನ ಒತ್ಕೊಂಡು, ಮುಂದ್ಗಡೆ ಮಡಕೇಲಿ ಬೆಂಕೀನೂ ಒತ್ಕೊಂಡು ಎಲ್ಲಾರೂನೂ ಗೋಳಾಡ್ತಾ . . . ಬೆಂಗ್ಳೂರ್ ಒಂಬತ್ ಬಾಗ್ಲೂ ಅಲ್ದು, ತಂದ್ರುಪ್ಪ ಚಟ್ಟಾನ—ನಾವು ಕಾಮಣ್ಣಂಗೆ ಬೆಂಕಿ ಅಚ್ಕೊ ಒತ್ಗ ಸರ್ಯಾಗಿ . . . ಲೋ! ಯಾರೋ ಯಿಂಗೆಲ್ಲಾ ಮಾಡಿದ್ದೂ? ಅಂತ ಕೇಳದ್ರೆ, ಒಬ್ಬನಾದರೂ ನಿಜ ಯೋಳ್ಬೇಕಲ್ಲ? ಅವನು ಇವನ್ನ ತೋರಿಸ್ತಾನೆ, ಇವನು ಇನ್ನಾರನ್ನೋ ತೋರಿಸ್ತಾನೆ . . .

"ಆಸ್ಟ್ರಾಗೇ ಯಜಮಾನ್ರು ಮನೇಯಿಂದ ಸಮಾಸಾರ ಬಂತು: 'ರಂಗಸಾಮಪ್ಪನಿಗೆ ಎಲ್ಲಾ ಆಗೋಯ್ತು. ಮೇಲುಸ್ರು ಎಳಿತಾಐತೆ.' ಅಂತ . . . ಇಲ್ಲೋ—ಚಟ್ಟಾ ಕಟ್ಟಿದ್ ಅಗ್ಗಾನೆಲ್ಲಾ ಬಿಚ್ಚಿ, ಎಬ್ಬಿಸ್ತಾರೆ ಗೋವಿಂದೂನ! 'ಕಮುಕ್, ಕಿಮುಕ್' ಇಲ್ಲ. ಮೈಯೆಲ್ಲಾ ಆನೇಕಲ್ನಂಗೆ ಕೊರಿತಾಐತೆ. ಅಳ್ಳಾಡಿಸಿದ್ರೂ ಇಲ್ಲ, ಒಳ್ಳಾಡಿಸಿದ್ರೂ ಇಲ್ಲ. ನಿದ್ದೆಮಾಡ್ತಾ ಇದ್ದಾಂತೀಯ? ಊಹೂಂ! ಅಸ್ಟೆಲ್ಲಾ ಜನ 'ಗೋವಿಂದೂ! ಗೋವಿಂದೂ!' ಅಂತ ಕೂಗ್ತಾ ಇದ್ರೂ ಅಂಗೇ ಮನಗಿದ್ದ. ನಮಿಗ್ಗಾ ಬ್ರೀ ಆಗೋಯ್ತು. ಗುಂಡ್ಗೆ ಜಲ್ಲಂದೋಯ್ತು.

ನಾನೇ ಎದೆಮ್ಯಾಗೆ ಕೈಯಿಟ್ಟು ನೋಡ್ತೇನೆ—ಉಸ್ರೇ ಇಲ್ಲ. ಮೂಗ್ನತ್ರ ಬೆಳ್ಳಿಡದು ನೋಡ್ದೆ. ಏನೇನೂ ಇಲ್ಲ. ಇನ್ನೇನ್ ಗತೀಂತ ಎದೆ ಡವ್‌ಡವ್ ಅಂತ ಬಡ್ಕೊಳ್ಳೋದಕ್ ಸುರು ನಮಗೆಲ್ಲಾ—ತಕ್ಷಣಾನೆ ಓಡಿಸ್ದೆ ಸುಬ್ಬಯ್ಯನ್ನ: 'ಯಾವ ಡಾಕ್ಟರಾದ್ರೂ ಪರ್ವೇ ಇಲ್ಲ. ಎಸ್ಟು ರೂಪಾಯಾದ್ರೂ ಪರ್ವೇ ಇಲ್ಲ. ಕರ್ಕೊಂಡೇ ಬಾ' ಅಂತ . . .

"ಇತ್ಕಡೆ ಯಜಮಾನ್ರಿಗೂ ಸಂಗ್ತಿ ಯೇಳ್ಕಳಿಸಿದ್ವಿ. ಅಲ್ಲಿ ತಮ್ಮದೀರ್ಗೆ ಕೊನೇ ಪರಾಣ ಎಳೀತಾ ಐತೆ. ಆದ್ರೂ ಅವರ ಮನಸ್ ಎಸ್ಟ್ ದೊಡ್ಡೈತೆ ನೋಡು ಇತರರ್ಕಡೆ! ಒಂದೇ ಅರ್ಗ ಓಡೇಬಂದ್ರು—ಕಾಮಣ್ಣನ್ನ ಸುಡೋತಾವ್ಕೆ. ಬಂದೋರೆ ಗೋವಿಂದೂನ ನೋಡಿ, ತಲೇತಲೇ ಚೆಚ್ಕೊಂಡ್ರು—ಪರಾಣ ಒಂಟೋಗೈತೇಂತ. ಅವರ ಕಣ್ಣಾಗೂ ನೀರೇ. ನಮ್ಮೆಲ್ಲರ ಕಣ್ಣಾಗೂ ನೀರೇ. ಎಲ್ಲಾರ್ನೂ ಯಿಸಾರಿಸ್ತ್ರು: 'ಯೆಂಗೋಯ್ತೋ ಪರಾಣ? ಕೂಕ್ಕೊಂಡ್ನೇನೊ? ಒಳ್ಳಾಡಿದ್ನೇನೊ? ಅಯ್ಯೋ! ಅಗ್ಗದಿಂದ ಕುತ್ಗೆ ಗಿತ್ಗೆ ಮೇಗ್ ಬಿಗಿದ್ಬಿಟ್ಟಿದ್ರೇನೊ? ಯಾರೋ ನಿಮಗೆ ಬುದ್ದಿ ಯೇಳಿದ್ರು? ಇದ್ಮಾಡಬೌದು, ಇದ್ಮಾಡಬಾದರ್ದೂಂತ ಗೊತ್ತಾಗಾಕಿಲ್ವ? ವುಡಗ್ಬುದ್ದಿ ಮಾಡ್ಬಿಟ್ರಿ, ಅನಾವ್ತ ಆಗೋಯಿತ್ರಲ್ಲೋ? ಓಗ್ಲಿ, ಒತ್ಕೊಂಡೋದೋರು ಆಗಾಗ ಇಳ್ಸಿ ನೋಡ್ಲಿಲ್ವೇನೊ? ಏನ್‌ಬಂತ್ರೋ ಈ ಕೆಟ್ಬುದ್ದಿ ನಿಮಗೆಲ್ಲಾ! ಯಾರ್ಗಿನ್ ಎಂಗಪ್ಪಾ ಸಮಾದಾನ ಯೋಳೋದು? ಊರ್ಗೆಲ್ಲಾ ನಗುಪಾಟ್ಲು ಆಗೋಯ್ತುಪ್ಪಾ ನಂಬಾಳು!' ಅಂತ ಗೋಳಾಡೋಗ್ಬಿಟ್ರು. . .

"ಅಸ್ರಲ್ಲೇ ಗೋವಿಂದೂನ್ತಾಯಿ ಅಂಕಮ್ಮನ್ಗೆ ಯಾರು ಸಮಾಸಾರ ಮುಟ್ಟಿಸಿದ್ರೋ ಏನೋ, ಬೀದೀ ಉದ್ದಕ್ಕೂ ಅಳ್ತಾ ಬಾಯ್ಬಡ್ಕೋತಾ ಬಂದ್ಬುಟ್ಳು ಅಂಕಮ್ಮ. ಮಗನ್ನ ನೋಡ್ಬುಟ್ಟು ಅವನೆದೇಮ್ಯಾಗೆ ಬಿದ್ದು ತಬ್ಕೊಂಡು, ತಲೆತಲೆ ಚಚ್ಕೊಂಡು, 'ಅಯ್ಯೋ! ಯಾರ್ ಕೊಂದೋರು ನನ್ ಗೋವಿಂದೂನ? ಯಾಕ್ ಚಟ್ಟದ ಮ್ಯಾಗ್ ಮಲಗಿಸಿದ್ರು, ನನ್ನ ಮಗನ್ನ, ಅಬ್ಬದ ವುಣ್ಮೇದಿನ? ಯೆಂಗ್ ಸತ್ತಾ? ಅಯ್ಯಯ್ಯೋ, ವೋಯ್ತಲ್ಲಾ ನನ್ರತ್ನಾ!' ಅಂತ ಗೋಳಾಡೋಗ್ಬಿಟ್ಳು ಅಂಕಮ್ಮ . . .

“ಅಸ್ಟೊತ್ಗೆ ಡಾಕ್ಟ್ರು ಬಂದ್ರು. ಬಂದ್ ನೋಡಿದ್ ತಕ್ಷಣ್ಣನೆ ಯೇಳ್ಬಿಟ್ರು—ಎಲ್ಲಾ ಆಗೋಯ್ತೂಂತ. ಅಂಕಮ್ಮ ಡಾಕ್ಟರ್ ಕಾಲ್ಗಳ್ನ ಬಿಮ್ಮಗಿಡ್ಕೊಂಬುಟ್ಟು, ‘ನಾನ್ ನಿಂಪಾದ ಬಿಡೋಕಿಲ್ಲಾ. ಬದ್ಕಿಸಿ ಕೊಟ್ರೀನೇ ನನ್ ಮಗನ್ನ. ಕೊಂದಾಕ್ಬುಟ್ಟಾರೆ ಎಲ್ಲಾರೂ ಸೇರ್ಕೊಂಡೂ’ಂತ ರಾದ್ಧಾಂತ ಮಾಡಿದ್ಲು. ನಾಕ್ಜನ ಬಂದೆಳದ್ರೂ ಅಂಕಮ್ಮ ಡಾಕ್ಟರ್ ಕಾಲ್ನ ಬಿಡ್ಲೇ ಇಲ್ಲ. ಮಿಸೀನ್ ಆಸ್ಪತ್ರೆ ಡಾಕ್ಟ್ರು ಕಾಲಿನ್ ಬೂಡ್ಸಿನ್ದಾರಾನ ಅಂಗೇ ಸಡಲ ಮಾಡ್ಕೊಂಡು, ಬೂಡಸ್ನ ಅಂಕಮ್ಮನ ಕೈಯಾಗೇ ಬುಟ್ಬುಟ್ಟು, ಗಾಡೀನತ್ಕೊಂಡು ಓಡೇ ಪೋಗ್ಬುಟ್ಟ—ಇದೇನ್ ಗಾಸಾರ ಬಂತೂಂತ . . .

“ಊರ್ಗೂರೇ ಸೇರ್ಬುಡ್ತು ಜನ. ಅಂಕಮ್ಮನ್ ಕಡೆ ಬಂದುಗ್ಳು ಬಂದ್ಬುಟ್ರು, ದೊಣ್ಣೆಗಳ್ನ ಮಚ್ಚುಗಳ್ನ ತಕ್ಕೊಂಡು—ತರದಾಕ್ ಬಿಡ್ತೀವಿ ಎಲ್ಲಾರ್ನೂಂತ. ಅಸ್ಟೊತ್ಗೆ ಅತ್ತನ್ನೆಳ್ಡು ಜನ ಪೋಲೀಸ್ನೋರು ಬರ್ದೇಗಾನ ಇದ್ದಿದ್ರೆ . . . ಆಗೋಗ್ಬುಡ್ತಾ ಇತ್ತು, ಬೆಳಕ್ ಅರಿಯೋದ್ರೊಳಗೆ, ಮಾಬಾರ್ತ. . .

“ಅಲ್ಲಿಂದ ಮುಂದಕ್ಕೆ ಪೋಲಿಸ್ನೋರ್ದು ಯಿಸಾರ್ಣೆ ಗಿಸಾರ್ಣೆ ಎಲ್ಲಾ ನಡೀತು. ನಾವೆಲ್ಲಾ ಕೋರ್ಟ್‌ಗೋಗ್ಬೇಕಾಯ್ತು—ಕೈಪಿಯತ್ ಕೊಡಾಕೆ, ಸಾಕ್ಸಿ ಯೋಳಾಕೆ . . .

“ಹಾ! ಮರ್ತೆಬಿಟ್ನಲ್ಲಾ: ರಂಗಸಾಮಪ್ಪ — ಗೋವಿಂದೂ ಸತ್ನಲ್ಲಾ ಬೆಳಗಿನ ಜಾವ್ದಾಗ, ಅದೇ ದಿನ ಸಂಜೇನಾಗ ತೀರ್ಕೊಂಬುಟ್ಟ.

“ಯಿಂಗಾಗೋಯ್ತು, ಚಿನ್ನಯ್ಯ, ಪೋದ್ವರ್ಸ್ದ ಕಾಮ್ನಬ್ಬ. ಯಜಮಾನ್ರು ಸಂತೋಸಾನೇ ಪೊಂಟೋಯ್ತಪ್ಪ ತಮ್ಮ ಸಾಯುತ್ಲೂ. ಮೂರ್ತಿಂಗ್ಳು ಬೀದೀಗೇ ಬರ್ಲಿಲ್ಲ. ಗಳ್ಡೀ ಕಡೆ ಮೊಕ ಇಡ್ಲಿಲ್ಲ. ಕಾಮಣ್ಣನ್ನ ಕುಂಡ್ರಿಸೋದು ಬೇಡಾಂತ ಯಜಮಾನ್ರೇ ಅಂದ್ಬಿಟ್ರು—ನಮಗಾಯ್ಬರ್ಲಿಲ್ಲಾಂತ. ಈ ಸಾರೆ ಲೇಶನ್ ಕೊಡಾಕಿಲ್ಲಾಂತ ಏಳ್ತಾರೆ ಸರ್ಕಾರ್ದೋರು. ಉಡುಗ್ರೇನೊ ಕೂಡಿಸ್ಬೇಕೂಂತಾರೆ. ಏನೂ ಯಿಸೇಸ ಇಲ್ದೆ, ಸಾಸ್ತ್ರಕ್ಕಾದ್ರೂ ಕೂಡಿಸಿದ್ರೆ ಸಾಕೂಂತಾರೆ . . .

"ಮಗನ್ನ ಕಳ್ಕೊಂಡ್ಮೇಲೆ ಅಂಕಮ್ಮನ್ಗೆ ವುಚ್ಚಿಡ್ದೋಯ್ತು. ಊರ್ಬಿಟ್ಟೇ ವೊಂಟೋದ್ಳು ಅಂಕಮ್ಮ. ಸಾಲ್ದೇನ್, ಚಿನ್ನಯ್ಯ, ಅನಾವುತಗ್ಳು? ಯಜಮಾನ್ರು ಯೋಳ್ದಂಗೆ ಜನಾಯೆಲ್ಲಾ ನೋಡಿ ನಗೋ ಅಂಗಾಗೋಯ್ತು ನಮ್ಬಾಳು. ಇದೆಲ್ಲಾ ಮರತ್ಬುಡೋಕಾಯ್ತದಾ, ಚಿನ್ನಯ್ಯ?"

"ಔದ್ ಸಿಕ್ರಂಗಪ್ಪಾ, ನಮ್ಗೇ ಬರ್ಬೇಕಾ ಈ ಎಲ್ಲಾ ಗಾಶಾರಾನೂ? ಇಸ್ಟ್ಕೂನೂ, ನಾನೇಳ್ತೀನೆ, ಎಳ್ಡು ವರ್ಸದಿಂದ ಅಣ್ಣಮನುತ್ಸವ ನಿಂತೋದ್ದಕ್ಕೇನೇವೇಯ. ಈ ಸಾರೆ ಅಣ್ಣಮನುತ್ಸವ ಶಂದಾಗ್ ನಡದ್ಬುಡ್ಲಿ—ಈ ಪೀಡೇ ಎಲ್ಲಾ ಕಳದೋಯ್ತದೆ. ಈಚೆಗಂತೂ ಈ ಆಳ್ಬಾವೀಲಿ ಅತ್ತತ್ ದಿವ್ಸಕ್ ಒಂದೊಂದೆಣ. ಏನ್ ಬೂತಾನೇ ಐತೋ, ದೆಯ್ಯಾನೇ ಐತೋ, ನಾವೆಸ್ಟ್ಕಂತ ಕಾಪ್ಲಿರಾಕ್ ಆಯ್ತದೆ, ಒಂದೇ ಕಡೆ? ಜಾರ್ಕೆ ಬಾಳ, ನೀರೆಲ್ಲಾ ಪಾಚಿ ಕಟ್ಕೋಗೈತೆ, ಬಾವ್ಯಾಗಿಳೀಬೇಡೀಂತ್ರಂದ್ರೆ ಕೇಳ್ತಾರಾ? ನಾನತ್ಕಡೆ ಓದ್ರೆ, ಇತ್ಕಡೆ ಇಳೀತಾರೆ. ಮನೇಲಿ ಯವಾರ ಗಿವಾರ ಮಾಡ್ಕೊಂಡ್ಬಂದು ಪರಾಣ ಕಳ್ಕೋತಾರೋ, ಇಲ್ದಿದ್ರೆ ಜನಾ ಎಲ್ಲಾ ಯೋಳೋವಂಗೆ ದೆಯ್ಯಾನೇ ಯೆಳ್ಕೊಂಡ್ಬುಡ್ತದೋ--ಆ ಸಿವನ್ಗೇ ಗೊತ್ತು" ಅಂದ, ಇದುವರೆಗೂ ಕತೆ ಕೇಳುತ್ತಿದ್ದ ಕಾವಲು ಚಿನ್ನಯ್ಯ.

೪

ಇಷ್ಟೆಲ್ಲಾ ಕೇಳುತ್ತಾ ಕುಳಿತಿದ್ದ ನನಗೆ, 'ಆ ದೆವ್ವದ ಗೋಣೀ ಮರದ ಹಿಂದಿನ ಹಾಳುಮನೆ ಯಾರದು? ಯಾಕೆ ಅದರಲ್ಲಿ ಯಾರೂ ವಾಸವಾಗಿರೋಲ್ಲ?' ಅಂತ ಕೇಳಬೇಕೂಂಬೋ ಕುತೂಹಲ ಹೆಚ್ಚಿ, 'ಚಿನ್ನಯ್ಯ? ನಿನಗೆ ಗೊತ್ತಿರಬೇಕಲ್ವೆ, ಆ ಗೋಣೀಮರದ ಹಿಂದಿರೋ ಆ ಹಾಳುಬಿದ್ದ ಕಲ್ಮನೆ? ಅದು ಯಾರ್ದು? ಯಾಕೆ ಅಲ್ಲಿ ಜನ ವಾಸ ಮಾಡೋಲ್ಲ?' ಅಂತ ಕೇಳಿಯೇಬಿಟ್ಟೆ.

ಚಿನ್ನಯ್ಯ ನನ್ನ ಕಡೆ ತಿರುಗಿ ನೋಡಿ, "ಯಾರೂ? ಗೇಟ್ ಬಾಗಲ್ಮನೇ ನಾಣಪ್ಪನೋರ ಮಕ್ಕಳಾ ನೀವು! ಸುಮ್ಕಿರಿ ಬುದ್ದಿ. ಈ

ಚಿಕ್ವಯಿಸ್ನಾಗ ಅದೆಲ್ಲಾ ಕಿವ್ಯಾಗಾಕ್ಕೊಬಾರ್ದು. ಜೀವಕ್ ದಿಗಿಲ್ತಟ್ಟೆ ಏನಾದ್ರೂ ಕೆಟ್ಟದಾಗ್ಬೋದು. ಜೇಡಿ, ಬುದ್ಧಿ, ನಿಮಗಾಯಿಶಾರ ಎಲ್ಲಾನೂವೇ. ನೆನಿಸಿಕೊಂಡ್ರೇ ನಮಗೇ 'ಜಲ್' ಅಂತದೆ ಎದೆ. ಈಟೊತ್ನಲ್ಲಿ ಅದರ ಗ್ಯಾಪ್ಕಾನೂ ಮಾಡ್ಬಾರ್ದು. ಚಿಕ್ಕೋರು ನೀವು. ಒತ್ತಾಯ್ತು, ಮನೇಗೋಗಿ ಬುದ್ದಿ. ಯಾರ್ಜೊತೇಲಿ ಬಂದ್ರಿ? ಸುಬ್ಬ ಯ್ಯನ್ ಜೊತೇಲಾ? ಅಯ್ ಸುಬ್ಬಯ್ಯ, ಚಿಕ್ಕುಡುಗರ್ನ ಇಲ್ಲೀಗೆಲ್ಲಾ ಕರ್ಕೊಂಬರ್ಬಾರ್ದೂಂತ ತಿಳಿಯಾಕಿಲ್ವ ನಿನ್ಗೆ?" ಅಂದ.

"ಆ ಚಿಕ್ಕಯ್ನೋರ್ ಗುಂಡ್ಗೆ ಯೆಂಗೈತೇಂತ ಗೊತ್ತಿಲ್ಲಾ ನಿನ್ಗೆ. ನೂರ್ ರೂಪಾಯ್ ಬಾಜಿ ಕಟ್ತೀನಿ ನಾನ್ ಬೇಕಾದ್ರೆ. ರಾತ್ರೆ ಸರ್ಹೊತ್ನಾಗ ಆ ಗೋಣೀಮರ ಅತ್ತಿ, ಅಲ್ಲಿ ನೀನೇನ್ ಗುರುತಿಟ್ಟೆ ರ್ತಿಯೋ ಅದನ್ನಾಗ ನ ತಂದ್ಕೊಟ್ರೆ ಒಪ್ಕೊಂತೀಯ ಅವರ ಧೈರ್ಯಾನ?" ಅಂದ ಸುಬ್ಬಯ್ಯ.

ಅದಕ್ಕೆ ಚಿನ್ನಯ್ಯ "ಸುಮ್ಕೆ ಮಾತಾಡ್ಬೇಡ, ಸುಬ್ಬಯ್ಯ, ಯಿಶಾ ರಾನೇ ತಿಳೀದೆ. ನಿನ್ಗೇನು ಗೊತ್ತೈತೇಳು, ಆ ಆಳ್ಮನೆ, ಈ ಗೋಣೀ ಮರದ ರಾಸ್ಯ? ಇಪ್ಪತ್ತೈದು ವೊರ್ಸದಿಂದ ಇದೇ ಸಾಕ್ರೀಲಿದ್ದೀನಿ ನಾನು. ಜಯಿನ್ರ ಪದ್ಮಯ್ಯಾ ಕಟ್ಸಿಸಿದ್ ಮನೆ ಅದು. ಸರಾಪ್ಕಟ್ಟೆ ಗೋವಿಂದ್ಸೆಟ್ರು ಅವ್ರ ತಂದೇವ್ರೆಸರ್ಗೆ ಕಟ್ಸಿಸಿದ್ದು ಆ ದೊಡ್ ಕಲ್ಕಟ್ಲೆ ಬಾವಿ. ಮೂರ್ಮಾಡಿ ಕಮಲಮ್ಮ ಕಟ್ಸಿದ್ದು ಆ ಸತ್ರ. ಇಸ್ಟನ್ನೂನೂ ಇನ್ನೂ ನಾನೇ ನೋಡ್ಕೊಂತಿದೀನಿ. ನಂಗ್ಗೊತ್ತಿಲ್ವಾ ಇದರ ಎಲ್ಲಾ ಯಿಶಾರ?" ಅಂದ.

"ಅಂಗಾರೆ, ಯೇಳು, ಚಿನ್ನಯ್ಯ. ನನ್ಗೂ ಬೋ ದಿನ್ದಿಂದ ನಿನ್ನೇ ಕೇಳ್ಬೇಕೊಂತಿತ್ತು. ನೀನೇಳಿದ್ರೇನೆ ಸೈ. ಲೋ ಚಿಕ್ರಂಗ, ಯಾರ್ನಾದ್ರೂ ಓಡ್ಸಿ ಮಿಠಾಯ್ ಲಚ್ಮೈಯ್ನಂಗ್ಡಿಯಿಂದ ಒಂದ್ರೂ ಪಾಯ್ಗೆ ಜಾಂಗೀರೂ ವಡೇಸೂರಪ್ಪನಂಗ್ಡೀಯಿಂದ ಒಂದೆಂಟಾಣೆ ಬಿಸಿಬಿಸಿ ಮಸಾಲ್ವಡೆ ತರ್ಸು. ಇವತ್ತು ಚಿನ್ನಯ್ಯನ್ಗೆ ಅಬ್ಬಾ ಮಾಡ ಸ್ಬಿಡೋಣ. ಯೇಳು, ಚಿನ್ನಯ್ಯ, ಆ ಆಳ್ಮನೆ ಕತೇನೆಲ್ಲಾ" ಅಂದ ಪುಟ್ಟಮಲ್ಲ.

"ಒಳ್ಳೇ ಗಾಶಾರಕ್ ಬಂದನಲ್ಲಪ್ಪಾ ನಾಸಿವತ್ತಿಲ್ಲಿಗೆ! ಬೇಡ, ಪುಟ್ಟಮಲ್ಲಪ್ಪಾ, ಆ ಯಿಶಾರಾನೆಲ್ಲಾ ಈಟೊತ್ನಲ್ಲಿ ಕೇಳ್ಬಾರ್ದು. ನೀವೆಲ್ಲಾ ಇನ್ನೂ ಚಿಕ್ಕೋರು ವಯಸ್ನಾಗ" ಅಂತ ಚಿನ್ನಯ್ಯ ಎಷ್ಟೋ ಹೇಳಿದ.

ಅದಕ್ಕೆ ಪುಟ್ಟಮಲ್ಲ "ಏನ್ ನಾವು ಯೆಂಗಸ್ರು ಕೆಟ್ಟೋದ್ವಾ ಯೆದರ್ಕೊಳ್ಳಾಕೆ! ಎಂತೆಂತ್ವೊ ಸಮಾಚಾರಗಳ್ನೆಲ್ಲಾ ಕೇಳಿದ್ದೀವಿ. ನೀನೇನೂ ನಮ್ಗೆ ಪುಕ್ಕಲುಟ್ಟಿಸ್ಬೇಡ. ಜಿಲೇಬಿ ವಡೆ ಬರ್ತದೆ. ಯೇಳು. ಇನ್ನೂ ಎಂಟ್ಗಂಟೆ ಒಡ್ದಿಲ್ಲ" ಅಂದ.

"ಅಂಗಾದ್ರೆ ನಿಮ್ದ್ಯಲ್ಲರ್ದು ಕಣಪ್ಪ. ಅಣ್ಣಮ್ನಾಯೀನೇ ದಿಕ್ಕು ನಮ್ಗೆಲ್ಲಾಗೂರ್. ಬಾಳ ದೊಡ್ಕತೆ ಅದು. ಯೆಂಗಪ್ಪಾ ಮೊದಲ್ಮಾಡ್ಲಿ?"

ಆಗ ಅಲ್ಲಿದ್ದವರು ನಾವು ಐದೇ ಜನ: ಚಿಕ್ಕರಂಗ, ಪುಟ್ಟಮಲ್ಲ, ತಿಮ್ಮಪ್ಪ, ಸುಬ್ಬಯ್ಯ, ನಾನು. ಚಿನ್ನಯ್ಯ ಎರಡು ನಿಮಿಷಗಳ ಕಾಲ ಏನೋ ಯೋಚನೆಮಾಡಿ, ಹೇಳುವುದಕ್ಕೆ ಮೊದಲಿಟ್ಟ.

ನನಗೆ ಮೈಯೆಲ್ಲಾ ಕಿವಿಯಾಯಿತು.

# ದೆಯ್ಯದ ಮನೆ

ಕಾವಲು ಚಿನ್ನಯ್ಯ ಹೇಳಿದ:

"ನಂಗ್ ಚೆನ್ನಾಗ್ ನೆಪ್ಪೈತೆ. ಕೆಲ್ಸಕ್ ಸೇರ್ಕೊಂಡಿನ್ನೂ ವರ್ಸ ವಾಗಿರ್ನಿಲ್ಲ. . . . ಜೈನ್ರು ಪದ್ಮಯ್ಯ ಕಟ್ಟಿಸ್ದ್ ಮನೆ ಅದು. ಆಗಲೇ ಆಳ್‌ಬಿದ್ದಿತ್ತು. ಆಯ್ಪುರದ ಮನೇಂತೇಳಿ ಯಾರೂ ಓಗಿ ಸಂಸಾರ ಅಲ್ಲಿ ಊಡ್ಲಿಲ್ಲ. ಅವನೆಣ್ತೀಗೆ ಚಯರೋಗ ಇತ್ತು. ವೈದ್ರೇಳಿದ್ರಂತೆ: 'ಒಳ್ಳೇ ಗಾಳೀ ಬೆಳ್ಕೂ ಇದ್ದು, ಸುದ್ವಾಗಿರೋಕಡೆ ಇದ್ರೆ ವಾಸಿಯಾಗ್ತದೆ. ಅಂಗಲ್ದೆ ಪೇಟೆ ಓಣೀಲಿರೋ ಗಲೀಜ್ಮನೆಗಳಲ್ಲಿದ್ರೆ ಈ ರೋಗ ವಾಸ್ಯಾಗಾಕಿಲ್ಲಾ' ಅಂತ. ಪದ್ಮಯ್ಯ ಇತ್ತಾತ್ಳೆ ತಾಮ್ರದ್ ಸಾಮಾನ್ ಯಾಪಾರಮಾಡ್ತಿದ್ದ. ದುಡ್ಡೂ ವೊಸ್ತಾಗಿತ್ತು. ಕಟ್ಟೇಸ್ದ—ಈ ಕೆರೇ ಏರಿಮ್ಯೇಲೆ, ಆ ದೊಡ್‌ಮಾಡೀ ಮನೇನ. ಮಕ್ಳಿರ್ನಿಲ್ಲ, ಪದ್ಮಯ್ಯನ್ಗೆ. ಸರಿ, ಇಲ್ಗೆ ಬಂದು, ಸಂಸಾರಾ ಊಡ್ದ್ರು. ಮೂರೊರ್ಸ ಸಂಸಾರಾ ನಡ್ಸೀದ್ರಂತೆ. ಆವಮ್ಮಂಗೆ ವಾಸೀ ಆಗ್ನಿಲ್ಲ. ತೀರ್ಕೊಂಬುಟ್ಳಂತೆ ಕೆಟ್ ನಕ್ಸತ್ರದಾಗ. ಯೆಣ್ತಿ ಸತ್ಮೇಕೆ, ಪದ್ಮಯ್ಯ, ತಲೇಮ್ಯಾಗ್ಬಟ್ಟೆ ಆಕ್ಕೊಂಬುಟ್ಟು ಒಂಟೋದ್ನಂತೆ— ವೊಂಬುಚಕ್ಕೋ, ಸ್ರವಣಬೆಳ್ಗೊಳಕ್ಕೋ.

"ಕೊಂಚ್ದಿನ ಆದ್ಮೇಕೆ ದಿಕ್ಕಿಲ್ದ ಆ ಮನೇದು ಕಿಟಕೀ, ಬಾಕಲು, ಎಲ್ಲಾ ಯಾರ್ಯಾರೋ ಪಟಂಗ್ರು ಕಿತ್ಕೊಂಡೋದ್ರಂತೆ. ಕೆಟ್ ನಕ್ಸತ್ರದಾಗ ಸತ್ಲಲ್ಲಾ ಆವಮ್ಮ, ಅದ್ಕೆ ಒಬ್ರೂ ಬರ್ನಿಲ್ಲ ಆ ಮನೇಗೆ. ಅಂಗೇ ಆಳ್ಬಿದ್ದೋಯ್ತು ಆ ಮನೆ. ಆಮೇಲೇನೇವೇಯೋ ನನ್ನಾಕವಲ್ಗಾಕಿದ್ರು ಕೋಟಿ ಆಪೀಸ್ನೋರು, ಐದ್ರೂಪಾಯ್ ಸಂಬ್ಳ ಗೊತ್ಮಾಡಿ. . . ಈಗ್ ನಾನ್ ಕೆಲ್ಸಕ್ಸೇರೇ ಇಪ್ಪತ್ತೆಂಟ್ವರ್ಸ ಆಗೋಯ್ತು. ಯಾರವ್ರೆ ನನ್ಗೆ? ಇರೋ ಒಬ್ಮಗ್ಳೂ ಸುಕವಾಗಿದ್ದಾಳೆ, ಅವಳ್ಗಂಡನತ್ರ, ಯಸ್ವಂತ್ಪುರದಲ್ಲಿ. ನಾನೇ ಆವಾಗಾವಾಗ ಓಗಿ ನೋಡ್ಕೊಂಡ್ಬರ್ತೀನಿ . . .

"ಬಿಸಿಲ್ಕಾಲ ಆಗ. ಯಾರೋ ಮದರಾಸ್ ಕಡೇಯಿಂದ ಬಂದ್ರು, ರೈಲಿಳಿದು—ಮಳೆಯಾಳೀ ಜನ. ಒಬ್‌ಗಂಡ್ಸು, ಅವನೆಣ್ತಿ, ಒಂದ್ ಕೈಮೊಗ—ಜೀಪ್ಣ ಉಡ್ಕ್ತ, ಈ ಊರ್ಗೆ. ತೋಟದಪ್ಪನ್ ಸತ್ರದಾಗ

ಇಳ್ಕೊಂಡ್ರಂತೆ. 'ಇಲ್ಲಿ ನಿಂಗಾಯತರ್ಗೇನೇ ಜಾಗಾ ಕೊಡೋದು, ವೋಗಿ' ಅಂತಂದ್ಬುಟ್ರಂತೆ. ಅಲ್ಲಿಂದ ಪೋಲೇಪಲ್ಯೋರ ಸತ್ರಕ್‌ಬಂದ್ರೆ, 'ನಿಪೇರಿ ನಡೀಸ್ತಿದ್ದೀವಿ. ಇಲ್ಲಿ ಜಾಗಾ ಸಿಕ್ಕಾಕಿಲ್ಲಾ'ಂತ ಅಂದ್ಬುಟ್ರಂತೆ. ಇನ್ ಪೂರ್ಣಯ್ಯನ್‌ಸತ್ರಕ್ಕೋದ್ರೆ, ಬ್ಯಾಂಚ್ರೆಲ್ಲಾ ಸೇರ್ಕೊಂಬುಟ್ಟು, 'ಆಗೋಕಿಲ್ಲಾ'ಂತಂದ್ಬುಟ್ರಂತೆ. ಅಂಗೇ ಇಂಗೇ ಎಲ್ಲೆಲ್ಲೋ ತಿರ್ಗಾಡಿ ಕಂಗಾಲಾಗಿ ನಮ್ಸತ್ರಕ್ಬಂದ್ರು. ಪಾರ್ಪತೇಗಾರ್ ಲಚ್ಮೀಪತಯ್ನೋರು ಊರಾಗಿರ್ನಿಲ್ಲ ಆ ದಿನ. ಅವ್ರಷ್ಟೆ ಇಲ್ದೆ ಯಾರ್ಗೂ ಇಳ್ಕೊಳ್ಳಾಕೆ ಜಾಗಾಕೊಡಾಕೆ ರೂಲೀಸ್ ಇಲ್ಲ. ಪಾಪ, ಅಲ್ಡಾಡೀ ಅಲ್ಡಾಡೀ ಅವ್ರೂನೂವೆ ಕಂಗಾಲಾಗೋಗಿದ್ರು. ಕೈಮೊಗ ಒಂದ್ಕಡೆ ಆಸಿವ್ಗೆ 'ಕಿರೋಂ'ತಳ್ತಿರೋದು. ನಾನು ಅವರ್ನ 'ಇಲ್ಲೇ ಕುಂತ್ಕೊಂಡಿರ್ರಿ, ಆಲ್ತಂದ್ಕೊಡ್ತೀನಿ ಮೊಗೀಗೆ'ಅಂತ ಜಲ್ದಿ ವರದಪ್ನೋರ್ ಮನೇಗೋಗಿ, ವರದಪ್ನೋರ ಎಣ್ತಿ ಅತ್ರ ಸಂಗ್ತೀನೆಲ್ಲ ತಿಳ್ಸಿ. . . , ಆಯಮ್ಮ—ವರದಪ್ಪ ನೆಣ್ತಿ ಚಿನ್ನದಂತಾ ಯೆಂಗ್ಸು—ಒಂದ್ ತಂಬ್ಗೆ ತುಂಬ ಬಿಸೀ ಆಸೀ ನಾಲ್ ತಂದುಕೊಟ್ಲು—ಆಯಮ್ಮನ್‌ಮನೆ ನೂರ್ಮನೆ ಆಗ್ಲಪ್ಪಾ . . . ಆ ಆಲ್ ತಗೊಂಡ್ಬಂದು ಕೊಟ್ರೆ . . . ಕಣ್ಣೀರ್ಬಿಡ್ತ ನನ್ಕೈಯಿಂದ ಇಸ್ಕೊಂಡು, ಆ ಮಳೆಯಾಳೀ ಯೆಂಗ್ಸು, ಕೂಸಿಗೊಟ್ಟೇ ತುಂಬ ಎರದು, ಇನ್ನೊಂದ್ಸಲಕ್ಕೇಂತ ಒಂದ್ಸೀಸಾಯ್ತುಂಬ ತುಂಬಿಸ್ಕೊಂಡು, ಮಿಕ್ಕಿದ್ದನ್ನ ಗಂಡನ್ಗೂ ಕೊಟ್ಟು, ತಾನೂ ಕುಡ್ದು, 'ಎನ್ನ ಪಣಂ?' ಅಂತಾ ನನ್ಕೇಳಿದ್ಲು. ನಾನು 'ಯಾರೋ ದರ್ಮಕ್ ಕೊಟ್ಟಾಲು, ದುಡ್ಬೇಡಾ' ಅಂತ ಸನ್ನೇಲೆ ಏಳ್ದೆ. ಆಮೇಕೆ ಓಟ್ಲಿಂದ ಅನ್ನಾ ತರೀಸ್ಕೊಟ್ಟೆ. ಅದ್ಕೆ ಅವ್ರೇ ದುಡ್‌ಕೊಟ್ರು. ಊಟಾ ಮಾಡಿದ್‌ಮೇಕೆ ಮನೀಗ್ಕೊಳ್ಳಾಕೆ ಜಾಗಾ ಕೇಳಿದ್ರು. ಕೊಟ್ಟದ್ರೆ ನನ್ನೇನೂ ಆನಿ ತ್ರಿರ್ನಿಲ್ಲ ಪಾರ್ಪತೇಗಾರ್ರು. ಆದ್ರೂ ರೂಲೀಸಿತ್ತಲ್ಲಪ್ಪಾ. . . . ಏನ್‌ಮಾಡೋಕೂ ತೋರ್ಬರ್ನಿಲ್ಲ. ಕಡೇಗೊಂದ್ ನಾಂದ್ರು ಆಚ್ಕೊಂಡು 'ನನ್ಜೊತೇಲಿ ಬನ್ನೀ'ಂತ ಅವರ್ನ ಕರ್ಕೊಂಡು ಕರ್ತಂದೆ, ಈ ಆಳ್ಮನೇಗೆ. ಮಾಡೀಮೇಗೆಲ್ಲಾ ಗುಡ್ಸಿ ಸುದ್ದಾಮಾಡ್ಕೊಟ್ಟು, ಒಂದೆಣ್ಣೆಬತ್ತೀನೂ ಅತ್ತೀಸ್ಕೊಟ್ಟು—'ಇವತ್ ರಾತ್ರಿ ಇಲ್ಲೇ ಇದ್ಕೊಳ್ಳಿ. ನಾಳೆ ನಂ ಪಾರ್ಪತೇಗಾರ್ ಬರೂತ್ಲೂ

ಸತ್ರದಾಗ ಜಾಗಾ ಕೊಡೀಸ್ತೀನೀ'ಂತ ಯೇಳಿ ನಾನ್ಬಂದ್ಬುಟ್ಟೆ. ಅವ್ರು ಆಸ್ಗೆ ಆಸ್ಕೊಂಡು ಅಲ್ಲೇ ಮನೀಕ್ಕೊಂಡ್ರು.

"ಬೆಳ್ಗಾಗತ್ಲೂ ಓಗಿ ನೋಡ್ದೆ. ಆ ಯೆಂಗ್ಸುತ್ವಾಟದ್ಬಾವೀಂದ ನೀರ್ತಂದ್ಕೊಂಡು, ಗಂಡಾಯೆಂಡ್ರೂ ಯಿಬ್ರೂ ಸೇರ್ಕಂಡು ಮನೇನೆಲ್ಲಾ ಗುಡ್ಸಿ, ತೊಳ್ದು, ಮನೇ ಮುಂದೆ ಸೆಗಣೀ ಆಕ್ಸಾರ್ಸಿ, ಬೋ ನಾಜೋಕ್ ಮಾಡ್ಬಿಟ್ಟಿದ್ರು, ಆಸ್ಕೊತ್ಗೇನೇ ಮನೇನೆಲ್ಲಾ. ಕೈಮಗ ಆಡ್ಕೋಂತಿತ್ತು ಪಡಸಾಲೇಲಿ. ನಾನ್ ಬಂದದ್ನೋಡಿ, ಆ ಯೆಂಗ್ಸು ಒಂದ್ತಟ್ಟೆ ತುಂಬ ಅವ್ರೂರಿಂದ ತಂದಿದ್ದ ತಿಂಡಿಗಳ್ನ ತಕ್ಕೊಂಬಂದು ನನ್ಮುಂದಿಟ್ಟು, 'ತಗೋಬೇಕೂಂ'ತ ನಗ್ನಗ್ತಾ ಯೇಳಿದ್ಲು. ನಾನು ರೋಟು ಮಾತ್ರ ತಕ್ಕೊಂಡು, 'ಸಾಕೂ'ಂತಂದ್ಬಿಟ್ಟೆ. ಆಯಮ್ಮ ಬಲವಂತ ಮಾಡಿದ್ಲು. ನೋಡು ಸಿಕ್ರಂಗಪ್ಪಾ. . . ನಂಗಿಸ್ಟು ವಯಸ್ಸಾಯ್ತು. . . ನನ್ ಜೀವ್ಮಾನ್ದಾಗೇ ನಾನ್ನೋಡಿಲ್ಲಾಪ್ಪ ಅಂತಾ ಲಕ್ಸಣ ಇದ್ದ ಯೆಂಗಸ್ನ. ಸಾಕ್ಸಾತ್ ಲಕ್ಸ್ಮಿ ಅಂಗಿದ್ಲು ಆಯಮ್ಮ. ಯೋಳ್ತಾರೆ— 'ಮಳೆಯಾಳಿ ಯೆಂಗಸ್ರು ಬೋ ಚೆಲುವೇರೂ'ಂತ . . .

"ಅಂತೂ ಇಂತೂ ಯೆಂಗೋ ಆ ಆಳ್ಮನೇನೇ ನಾಜೂಕ್ಮಾಡ್ಕೊಂಬುಟ್ಟು ಅಲ್ಲೇ ಸಂಸಾರ ಊಡ್ಬಿಟ್ರು. ನಂ ಪಾರ್ಪತೇಗಾರ್ರೂ ಯೇಳಿದ್ರು—'ಇದ್ಕೊಳ್ಳೀಳು. ಸದ್ಯ ಆ ಮನೇಗೆ ಯಾರೂ ಬರ್ತಿರ್ಲಿಲ್ಲ. ಇವ್ರಾದ್ರೂ ಇದ್ಕೊಂಡು ಒಂದು ಜೀವ್ಕಳೆ ತರ್ಲಿ ಆ ಮನೇಗೇ'ಂತ. . . ಆ ಗಂಡಸ್ಗೆ ಮರಗೆಲಸ ಬೋ ಚೆನ್ನಾಗ್ಬರ್ತಿತ್ತು. ಕಟ್ಗೆಅಂಗ್ಡಿ ದೊಡ್ ಮುನ್ಸಾಮಪ್ಪ ಮಾಡಿಮನೆ ಕಟ್ಟಿಸ್ತಿದ್ದ ಒಸ್ದಾಗಿ. ನಾನು ಆ ಮಳೆ ಯಾಳದೋನ್ನ ಕರಕೊಂಡೋಗಿ ಅವರತ್ರ ಕೆಲಸಕ್ ಸೇರಿಸ್ಬಿಟ್ಟೆ. ಅವನ್ಕೆಲಸ ನೋಡಿ, ಮೂಗಿನ್ಮೇಗೆ ಬೆಳ್ಳಿಟ್ಕೊಂಬುಟ್ಟ ದೊಡ್ಮುನ್ಸಾಮಪ್ಪ! ಯೇಳ್ದ—'ಇದ್ದಾವೆ ನಂ ಜನಾನೂ! ಯಾಕೆ, ಮುದ್ದೆ ಒಡೆಯಾಕೆ! ಸರಿಯಾಗಿ ತೋಪ್ಡ ತಳ್ಯಾಕ್ ಬರಾಕಿಲ್ಲ, ಅಂಕರ್ಸ ಎಸ್ಟು? ಇಂಥಾ ಪರಮಾಕ್ಸೆ ಕೆಲಸ ಎಲ್ಲಿಂದ್ಬರ್ಬೇಕೂಂ'ತ. . . . ಅಂಗೇ ಇಂಗೇ ಕುದುರ್ಕೊಂಬಿಡ್ತು ಅವ್ರ ಸಂಸಾರ. ಅಲ್ಲೊಂದಲಗೆ ಇಲ್ಲೊಂದಲಗೆ ಜಮಾಯ್ಸಿ, ಕದಾ ಕಿಟ್ಕಿ ಎಲ್ಲಾ ಮಾಡ್ಕೊಂಬುಟ್ರು, ಆ

ಆಳ್ಮನೇಗೆ. ಎಸ್ಟಾದ್ರೂ ಕೆಲಸ ಕಲ್ತೋನು! ಸುಕವಾಗಿತ್ತಪ್ಪಾ ಅವ್ರ ಸಂಸಾರ.

“ಯಿಂಗಿರೋವಾಗ, ನೋಡು ಪುಟ್ಮಲ್ಲಪ್ಪಾ, ಸಂತೋಸ್ವಾಗಿರೋರ್ನ ಕಂಡ್ರೆ, ದ್ಯಾವ್ರಿಗೂ ಒಟ್ಟೇ ಉರೀನಾ? ಅವ್ರೀ ಊರೀಗ್ಬಂದ್ ಎಳ್ಡೇ ತಿಂಗ್ಳಲ್ಲಿ ಕಾಣಿಸ್ಕೊಂಡ್ತು, ಕೆಟ್ಟಜರ, ಚಂದರ್ನಂಗಿದ್ ಆ ಚಿಕ್ಮಗೂಗೆ. ಔಸ್ದಿ ಏನ್ ಕಮ್ಮಿ ಮಾಡ್ಲಿಲ್ಲ. ಡಾಕ್ಟರ್ಗಳ್ಗೇನ್ ಕಮ್ಮಿ ಕರ್ಚು ಮಾಡ್ಲಿಲ್ಲ. ಸಂಪಾದ್ಸಿದ್ದೂ, ಅವರತ್ರಿದ್ದಿದ್ದೂ, ಎಲ್ಲಾ ಕರ್ಚ್ ಮಾಡಿದ್ರು—ಉಳಿಸಾಕಾಗ್ಲಿಲ್ಲಾಪ್ಪ ಆ ಚಿಕ್ ಜೀವಾನ. ತೀರ್ಕೊಂತು. ಆಯಮ್ಮನ್ ದುಃಖಾನ ನೋಡಾಕಾಗ್ಲ, ಯೋಳಾಕಾಗ್ದು. ಮಣ್ ಮಾಡಾಕ್ ಬಿಡುವೊಲ್ಳು ಸತ್ಮಗಾನ. ಯೆತ್ತ ಕಳ್ಳಲ್ವಾ ಅದು! ಸತ್ ಮಗಾನ ತೊಟ್ಲಲ್ ಆಕ್ಕೊಗ್ತಾಳೆ ಆಯಮ್ಮ. ಆಡೇಳ್ತಾಳೆ. ಎದೆ ಆಲ್ ಕುಡಸಾಕ್ ಓಗ್ತಾಳೆ. ಸತ್ಮಗ ಆಲ್ ಕುಡಿಯೋದ್ ಯೆಂಗಪ್ಪಾ? ಅದ್ನೋಡೀ ನೋಡಿ ಅಳ್ತಾಳೆ. ಬೋ ಕಸ್ಟ ಆಗೋಯ್ತಪ್ಪ ಆಯಮ್ಮನ್ನ ಸಮಾದಾನಮಾಡಿ, ಆ ಮಗೂನ ಮಣ್ಮಾಡಾಕೆ. . . . ತುಂಬಿದ ಅಮಾಸೆ, ಬೋ ಗಾಳೀಕಾಲ, ಆಶಾಡಮಾಸ ಅದು. . . .”

ಸುಬ್ಬಯ್ಯ—“ಇದೂ ಆಶಾಡ್ಮಾಸಾನೇ ಚಿನ್ನಯ್ಯ. ಬೋಶಾ ಬರೋ ಅಮಾವಾಸೇಗೇ ಇರಬೇಕು, ಆ ಮಗ ತೀರ್ಕೊಂಡದ್ದು.”

ಚಿನ್ನಯ್ಯ—“ಇಬ್ರೈದಿಬ್ರೈದು, ಸುಬ್ಬಯ್ಯ, ನೀನೇಳೋದು. ಯಾಕಂದ್ರೆ, ಮುಂದಕ್ಕೇಳ್ತೀನಿ, ಆ ಯಿಸಾರ ಎಲ್ಲಾ ಇನ್ನೂ ಬರ್ತಾಂಡ ಐತೆ. . . . ಗಂಡಾ ಎಂಡ್ರೂ ಮಗನ್ನ ಕಳಕೊಂಡ್ ದುಃಖ್ದಾಗ ಆವತ್ತೆಲ್ಲಾ ಗೋಳಾಡ್ತಿದ್ರು. ಇಬ್ರೂ ಉಪಾಸ, ನೀರೂ ಸಾ ಮುಟ್ಲಿಲ್ಲ. ಯಾರ್ಯಾರೋ ಬಂದ್ ಏನೇನೋ ಸಮಾದಾನಾ ಮಾಡ್ದ್ರೂ—ಏನೂ ಪರ್ಯೋಜನಿಲ್ದೆ ಓಯ್ತು. ಮಗೂ ಆಡ್ತಿದ್ ಆಟದ್ ಸಾಮಾನ್ಗೊಳ್ನಿಟ್ಕೊಂಡು ಆಯಮ್ಮ ದುಃಖಪಟ್ಟದ್ ನೋಡಿದ್ರೆ—‘ದೇವ್ರು ಈ ಮಕ್ಕಳ್ನ ಕೊಡೋದ್ಯಾಕೆ? ಕಿತ್ಕೊಳ್ಳೋದ್ಯಾಕೆ?’ ಅನ್ನಿಸ್ತು ಎಲ್ಲಾರ್ಗೂ. ಆವೊತ್ತು ನನ್ಗೂ ಊಟ ಸೇರ್ಲಿಲ್ಲಾಪ್ಪ. ರಾತ್ರಿ ಮಲೀಕ್ಕಂಡ್ರೆ ನಿದ್ದೆ ಬರ್ಲೊಲ್ದು. ಆ ಮಗೂನ ಗ್ಯಾಪ್ಕಾನೇ ಬರ್ತಿತ್ತಪ್ಪ. ಮನೇ ಬಾಕ್ಲತ್ರ ವೋಗೋ

ಅಸ್ಟೊತ್ಗೆ ಆ ಮಗಾ ನೆಗ್ತಾನೆಗ್ತಾ. . . ಚಂದರ್ನಂಗಿರೋದು. . . . ಆಯಮ್ನಂಗೇ ಆ ಮಗ. . . ಇನ್ನೂ ಬಾಯಿ ಮಾತ್ಬರದು. . . 'ತಾತಾ ತಾತಾ'ಂತ ಓಡ್‌ಬರ್ತಿತ್ತಪ್ಪ ನನ್‌ತಾವ್ಕೆ! ನೋಡು, ಸಿಕ್ರಂಗಪ್ಪಾ, ನಾನೂ ಈ ವಯಸ್ನಾಗ ಎಸ್ಟೋ ಸಾವ್ಗೋಳ್ ನೋಡಿದ್ದೀನಿ; ಆದ್ರೆ ಆಡಾಡ್ತಾ ನೆಗನೆಗ್ತಾ ಇರೋ ಎಳೇ ಮಕ್ಕಳ್ ಸಾವೈತಲ್ಲಾ—ಒಟ್ಯಾಗಿನ ಕಳ್ಳೆಲ್ಲಾ ಅಂಗೇ ಕತ್ತರಿಸ್ಕೊಂಡ್ ಈಚೇಗ್ ತರ್ತೈತಪ್ಪಾ. . .

"ಯೆಂಗೋ ಬೆಳಗಾಗುತ್ಲೆ ಎದ್ಬಿಟ್ಟು ಕೈಕಾಲ್ಗೋದ್ಮೇಲೆ . . . ಈ ಗಂಡ ಯೆಂಡರ್ಗತಿ ಏನಾಯ್ತೋಂತ ಸಂಕ್ಟ ಆಯ್ತು . . . ವೋದೆ, ಅವ್ರ ಮನೇತಾಕೆ. ಏನ್, ಸದ್ದೇ ಇಲ್ಲ! ಪಾಪ, ಸುಸ್ತಾಗಿ ಬಿದ್ಕೊಂಡವ್ರೇ ನೋಂತ ಒಂದ್ಗಂಟೆ ಬಿಟ್ಕೊಂಡೋಗಿ, ತಿರ್ಗ ನೋಡ್ದೆ —ಸದ್ದೇ ಇಲ್ಲ! ಬಾಕಲ್‌ತಟ್ದೆ— ಸದ್ದಿಲ್ಲ! ಕೂಗ್ದೆ, ತಿರ್ಗೂ ಬಾಕಲ್ತಟ್ದೆ—ಏನೂ ಸದ್ದಿಲ್ಲ! ಮಸ್ಲಾ ಮಗೂನ ಮಣ್ಮಾಡಿದ್ ತಾವ್ಕೆ: ಮಸಾಣಕ್ ಏನಾದ್ರೂ ಓದ್ರೋ ಏನೋಂತ ಬಾಕಲ್ನೂಕ್ದೆ—ಅಂಗೇ ತೆರೀತು! ಬಾಕ್ಲಾಕೇ ಇರ್ನಿಲ್ಲ! ಒಳ್ಗಡೆ ಬಟ್ಟೆ ಬರೆ ತೊಟ್ಲು ಬಟ್ಲು ಬಿದ್ದಿದ್ವು. 'ಮನೇನ ಯಿಂಗೂ ಬಿಟ್ಟೋಯ್ತಾರಾ! ಇವ್ರಿಗೇನ್ ಬುದ್ದಿ ಸೆಟ್ಗಲ್ವಾ? ಬೋಶಾ ಮಾಡಿ ಮ್ಯಾಗಿದ್ದಾರೋ ಏನೋ'ಂತನ್ಕೊಂಡು ಮೆಟ್ಲತ್ತಿ ಮಾಡೀ ಮ್ಯಾಕ್ ಅತ್ತೋಗಿ, ನೋಡ್ದೆ. ಅಲ್ಲೂ ಸದ್ದೇ ಇಲ್ಲ. ಮೆಟ್ಲು ಪಕ್ದಾಗೇ ಇದ್ದ ಬಾಕಲ್ನ ನೂಕಿ ನೋಡ್ತೀನಿ—ಸಿಕ್ರಂಗಪ್ಪಾ! ತಿಮ್ಮಯ್ನೋರಾ! ಸಿವನ್ಮೇಗಾಣೆ ಇಟ್ಕೊಂಡೇಳ್ತೀನಿ: ಆ ಮಳೆಯಾಳಿ ಗಂಡ್ಸು ಕುತ್ಗೇಗ್ ನೇಣಾಕ್ಕೊಂಡು ಅಗ್ಗದಿಂದ, ಸೂರ್ನಿಂದ ತೂಗ್ಬಿದ್ದಾನೆ. ನೋಡೂತ್ಲೂ ನನ್ತಲೆ ತಿರುಗ್ಬಂದ್ಬಿಡ್ತಪ್ಪ! ಘಟ್ಯಾಗಿ ಕಿಟ್ಕಿ ಕಂಬಿಗಳ್ನ ಇಡ್ಕೊಂಡ್ ನಿಂತ್ಕೊಣ್ದಿದ್ರೆ ಬಿದ್ದೇಬಿಡ್ತಿದ್ದೆ ಮಾಡೀಯಿಂದ ಕೆಳಕ್ಕೆ! ಚನ್ನಾಗಿ ನೋಡ್ದೆ! ಕೈಕಾಲು ನಡಕ ವುಟ್ಟೋಯ್ತಪ್ಪಾ ನನ್ಗೆ!

"ಅದೆಂಗಿಳದ್ನೋ ಮೆಟ್ಲುಗಳ್ನ,—ರಸ್ತೇಗೋಡ್ಬಂದಿದ್ದೇ ಘಟ್ಯಾಗ್ ಕೂಕ್ಕೊಂಬುಟ್ಟೆ ನಾಕೈದ್ಸಾರಿ: 'ನೇಣಾಕ್ಕೊಂಬುಟ್ಟಾನೆ ಬನ್ರಪ್ಪೋ' ಅಂತ. ಕೆರ್ಯಾಗಿದ್ ಎಂಟತ್ಜನ ಓಡ್ಬಂದ್ರು. ಅವರ್ಗೇಳ್ದೆ: 'ಮಳೆಯಾಳ ದೋನು ಮಾಡಿಮ್ಯಾಗ್ ನೇಣಾಕ್ಕೊಂಡ್ ಸತ್ತಾನೆ. ಅವನೆಣ್ತಿ

ಏನಾದ್ಲೋ!' ಅಂತ. ಓಡೋದೆ, ಉಪ್ಪಾರ್ಪೇಟೆ ಪೋಲೀಸ್ ಟೇಸನ್ಗೆ. ಇಬ್ರೇ ಇದ್ರು ಪೋಲೀಸ್ನೋರು. ಅವರ್ಗೇಳ್ದೆ. ಓಡ್ದ ಒಬ್ಬ, ಇನಿಸ್ಪೇಟ್ರನ್ನ ಕರ್ತರಾಕೆ. . . ನೂರಾರ್ಜನ ಸೇರ್ಬಿಟ್ಟಿತ್ತೂ ಅಸ್ಟೊತ್ಗೆ, ಆ ಆಳ್ ಮನೇತಾವ. ಎಲ್ಲಾರೂ ಓಗಿ ನೋಡಿದ್ರು, ನೇಣಾಕ್ಕೊಂಡೋನ್ನ.

"ನನಗ್ ಬಲೇ ದಿಗಿಲಾಯ್ತು, ಆಯಮ್ಮ ಎಲ್ಲೋದ್ಲೋಂತ? ಮಸಾಣಕ್ ಓದ್ರು ಜನ, ವುಡಕಾಕೆ. ಅಲ್ಲೆಲ್ಲಾ ವುಡಿಕಿಬಂದ್ರು, ಸಿಗ್ನಿಲ್ಲಾಂತ. ಸುತ್‌ಮುತ್ಲೂ ಊರೆಲ್ಲಾ ವುಡುಕ್ಸಿದ್ವಿ. ಏನೂ ಪರ್‍ಯೋಜನಿಲ್ದೆ ಓಯ್ತು. ಅಸ್ಟೊತ್ಗೆ ಇನೀಸ್ಪೆಟ್ರೂ ಬಂದಿದ್ರು, ಬೇದಿರಸ್ನಲ್ಲೇ. ಎಲ್ಲಾ ನೋಡಿದ್ರು, ಇಸಾರಿಸ್ದ್ರು. ನಂಗ್ ತಿಳಿದಿದ್ದೆಲ್ಲಾ ಯೋಳ್ದೆ—ಬರ್ಕೊಂಡ್ರು. ಯೆಣಾನ ಇಳ್ಸಿ, ಯಿಟ್ಟೋರ್‍ಯಾ ಆಸ್ಪತ್ರೇಗ್ ಕಳಿಸಿದ್ರು, ಪರೀಕ್ಸೆ ಮಾಡ್ಸಾಕೆ.

"ಅಸ್ಟೊತ್ಗೆ ಪೋಲೀಸ್ ಕಮೀಸನ್ರೂ ಬಂದ್ಬಿಟ್ರು. 'ಅವರ್ಗೆ ಇರೋಕೀ ಮನೇನ ಕೊಟ್ಟೋರ್‍ಯಾರೂ?' ಅಂತ ತನಿಕೆ ಬಂದುಬಿಡ್ತು. ನನಗ್ ಜೀವ ಪುಕಪುಕಾಂದೋಯ್ತು—ಎಲ್ ನನ್ ಸಾಕ್ರೀಗ್ ಕಲ್ ಬಿದ್ಬೋಯ್ತದೋ, ಎಲ್ಲಿ ಪಿಂಚಣಿ ಒಂಟೋಯ್ತದೋಂತ. ಅಸ್ಟೊತ್ಗೆ, ಮಾರಾಯ್ರು ನಂ ಲಸ್ಮೀಪತಯ್ನೋರು ತಂ ತಲೇಕೊಟ್ರು, 'ಆ ಮನೇಲಿ ಬೋ ದಿನ್ದಿಂದ ಯಾರೂನೂ ಇರ್‍ಲಿಲ್ಲ. ನಾಜೂಕ್ಬರ್‍ಲೀಂತಂತ ನಾವೇ ಕೊಟ್ಟಿದ್ವಿ' ಅಂತಂದ್ರು.

"ಇಸ್ಟೆಲ್ಲಾ ಆಯ್ತಲ್ಲಾ, ಆ ಯೆಂಗ್ಸು ಎಲ್ಲೋದ್ಲೋಂತ ಊರಾಗಿನ ಕೆರೆ ಕುಂಟೆ ಬಾವಿ ಎಲ್ಲಾನೂ ವುಡುಕ್ಸಿದ್ರೂ ಎಲ್ಲೂ ಕಾಣ್ಬರ್‍ಲಿಲ್ಲ. ಅಂಗೇನಾರೂ ಬಾವ್ಯಾಗೋ ಕೆರ್‍ಯಾಗೋ ಬಿದ್ದಿದ್ರೆ—ತೇಲ್ಬೇಕಾಗಿತ್ತಲ್ಲ ಯೆಣ? ಎಳ್ಡ್‌ಮೂರ್ ದಿನ ಆದ್ರೂ ಪತ್ತೇನೇ ಇಲ್ಲ! 'ಆ ಯೆಂಗ್ಸು ಈ ಊರ್ಬಿಟ್ಟೇ ಅವರೂರ್ಗೆ ವೊಂಟೋಗಿರ್ಬೇಕು, ರೈಲ್ನಲ್ಲೀ'ಂತ ಜನಗ್ಳು ಏಳ್ಕೊಂಡ್ರು. ಆದ್ರೆ ಆ ಪೋಲೀಸ್ ಇನಿಸ್‌ಪೇಟ್ರು ಇದ್ನಲ್ಲ—ಅವನು ಬೋ ಚೂಟಿ. 'ಬಾವ್ಯಾಗೇ ಬಿದ್ದು ಪರಾಣ ಕಳ್ಕೊಂಡವ್ಳೆ. ಕಲ್ಲೋ ಗುಂಡೋ ಕಟ್ಕೊಂಡ್ ಬಿದ್ದವ್ಳೆ. ಅದ್ಕೆ ಯೆಣ ತೇಲ್ಲಿಲ್ಲಾ. ಯಾವ ಬಾವ್ಯಾಗೇನು—ಗೋವಿಂದ್ಸೆಟ್ಟಿ ಬಾವ್ಯಾಗೇ ಬಿದ್ದಿರ್ಬೋದೂ'ಂತ

ಈಜುಗಾರ್ರನ್ನ ಕರ್ಸಿ, ಬಾವಿ ಎಲ್ಲಾ ಕೆದಕಿದರಪ್ಪಾ! ತೇಲ್ತು ನೋಡು ಯೆಣ! ಬಾವಿ ಒಳಗೆ ನೀರ್ನಲ್ಲಿ ಚಾಚ್ಕೊಂಡಿರೋ ಚಪ್ಡಿಕಲ್ಲಿನ ಕೆಳಗೆ ಸಿಕ್ಹಾಕ್ಕೊಂಡಿತ್ತಂತೆ. ನಾನೂ ನೋಡ್ದೇಪ್ಪಾ—ಬಾತ್ಕೊಂಡೋಗಿತ್ತು. ವಾಸ್ನೆ ಬಡೀತಾ ಇತ್ತು. ಆ ವಿಕಾರಾನಾ ಯೇಳಾಕಾಗಾಕಿಲ್ಲ. ಜೀವ ಅನ್ನೋ ಅಕ್ಕಿ ಆರೋದ್ ವ್ಯಾಗೆ ಏನೈತೆ ಈ ಸರೀರ?

"ಯಿಂಗಾಗೋಯ್ತಪ್ಪ, ನಗನಗ್ತಾ ಇದ್ದ ಸಂಸಾರದ ಗತಿ, ಎಳ್ಡೇ ತಿಂಗಳ್ನಾಗ. ಯೆಂತಾ ಸಂಸಾರಾಂತೀಯ ಸಿಕ್ರಂಗಪ್ಪಾ, ಸುಬ್ಬಯ್ಯಾ! ಗಂಡಾಯೆಂಡ್ರೂ ಮಗೂನ್ಸಂಗಾಟ ನೆಗ್ತಾ ನೆಗ್ತಾ, ಆಟ ಆಡ್ತಾ! ನಂಗೂನೂ ಎಸ್ಟೋ ದಿವ್ಸ ಬೋ ಪರಮಾಕ್ಸಿ ಅಡಿಗೆಮಾಡಿ ಊಟ ಮಾಡ್ತ್ಯಾಳೆ ಆಯಮ್ಮ. ನೆಸಿಸ್ಕೊಂಡ್ರೆ ಕಣ್ಣೀರ್ತುಂಬ್ತದೆ. ಯಾಕ್ ಕೇಳ್ತಿ, ಪುಟ್ಮಲ್ಲಪ್ಪಾ, ಈ ಕತೇನ ನನ್ನೇಳೂಂತ!" ಎಂದು ಕಾವಲು ಚಿನ್ನಯ್ಯ ಕಣ್ಣಲ್ಲಿ ನೀರು ತಂದುಕೊಂಡ.

ಚಿನ್ನಯ್ಯನಿಗೇ ಏನು, ನಮ್ಮೆಲ್ಲರ ಕಣ್ಣುಗಳಲ್ಲೂ ನೀರು ತುಂಬಿತ್ತು.

ಚಿನ್ನಯ್ಯ ಒಂದು ಸಲ ಬಟ್ಟೆಯಿಂದ ಕಣ್ಣೊರಸಿಕೊಂಡು, ಹೇಳುತ್ತಿದ್ದ ವಿಷಯುವನ್ನು ಮುಂದುವರಿಸಿದ:

"ಆದ್ರೆ, ಆ ಗಂಡ್ಸು ನೇಣ್ ಯಾಕ್ ಆಕ್ಕೊಂಡಾ? ಯೆಂಡ್ರು ಬಾವ್ಯಾಗ್ ದುಮುಕಿದ್ನ ನೋಡಿದ್ನಾ? ಆ ಸಂಕಟಕ್ ನೇಣಾಕ್ಕೊಂಡ್ನಾ? ಇಲ್ಲೆ ಇದ್ರೆ, ಗಂಡಯೆಂಡ್ರು ಇಬ್ರೂ ಒಪ್ಗೆ ಮಾಡ್ಕೊಂಡು, 'ನೀ ಬಾವ್ಯಾಗ್ ಬೀಳು, ನಾ ನೇಣಾಕ್ಕೋಂತೀನಿ' ಅಂತಂದ್ಕೊಂಡ್ರಾ? ಗಂಡನೂ ಯಾಕ್ ಬಾವೀಗ್ ಬೀಳ್ಲಿಲ್ಲಾ? ಅವ್ಳು ಬಾವ್ಯಾಗ್ ಬೀಳೋಕ್ಮೊದಲೇನೇ ಇವನು ನೇಣಾಕ್ಕೊಂಡ್ನಾ? ಇಲ್ದಿದ್ರೆ, ಅವ್ಳು ಬಾವ್ಯಾಗ್ ಬಿದ್ಮೇಲಾಕ್ಕೊಂಡ್ನಾ? ಯೆಣ್ತಿ ಬಾವ್ಯಾಗ್ ಬೀಳೋದನ್ನ ತಡೆಯೋಕ್ ಆಗ್ತಿರ್ಲಿಲ್ವಾ ಆ ಗಂಡಸ್ಗೆ? ಯೆಣ್ಣುಜೀವಾನಾ ಆ ಗಂಡಸಿನ್ದ, ಮನೇಲಿ ಯೆಂಗಸನ್ನೊಬ್ಳೇ ಬುಟ್ಬುಟ್ಟು ತಾನ್ ನೇಣಾಕ್ಕೊಳ್ಳಾಕೆ? ಏನೋಪ್ಪ ಸಿವನೇ ಬಲ್ಲ—ಎಂಗಾಯ್ತೂಂಬೋದ್ನ."

"ಆಮ್ಯಾಕ್ ಪೋಲೀಸ್ ಕೇಸೇನಾಯ್ತು, ಚಿನ್ನಯ್ಯಾ?" ಅಂದ ಚಿಕ್ಕರಂಗಪ್ಪ.

ಕಾವಲು ಚಿನ್ನಯ್ಯ ಮುಂದೆ ಹೇಳಿದ:

“ಏನಾಗೋದು ಸಿಕ್ರಂಗಪ್ಪಾ! ದಾದಿಲ್ಲಾ ಪಿರ್ಯಾದಿಲ್ಲಾ ಆಕೇಸ್ಗೆ! ಅದಂಗೇ ಬಿದ್ಬೋಯ್ತು. ಒಂದ್ ತಿಂಗಳಾದ್ಮೇಕೆ ಆ ಯೆಂಗಸಿನ್ತಂದೆ ಮಗ್ಳಿಂದ ಕಾಜಗಾನೇ ಬರ್ಲಿಲ್ಲಾಂತ್ರೇಳಿ ವ್ರಡುಕ್ಕೊಂಡ್ಬಂದ್ರು. ಈ ಊರಿಗ್ಬಂದ್ಮ್ಯೇಲೆ ಎಳ್ಡು ಕಾಜ್ಗ ಬರ್ದಿದ್ಲಂತೆ ತಂದೇಗೆ. ಆಮೇಕೆ ಅವ್ರು ಎಸ್ಟು ಕಾಜ್ಗಾ ಆಕಿದ್ರೂ ಒಂದಕ್ಕೂ ಜವಾಬೇ ಬರ್ಲಿಲ್ವಲ್ಲಾಂತ ಇಲ್ಲಿಗೇ ವುಡುಕ್ಕೊಂಬಂದ್ರು. ಎಲ್ಲಾ ಇಸಾರ್ಸಿ ಗೋಳಾಡ್ತಾ ಗೋಳಾಡ್ತಾ ವೊಂಟೋದ್ರು, ಬಂದ ದಾರಿ ಯಿಡ್ಕೊಂಡು.

“ಅಂಗೇ ಇಂಗೇ ಎಳ್ಡ್ವರ್ಸ ಕಳದೋಯ್ತು. ಈ ಊರಾಗ ಪಿಳೇಕುರೋಗ ಕಾಣಿಸ್ಕೊಂಡ್ತು. ಅಬ್ಬಬ್ಬಾ! ಎಸ್ಟು ಜನ ಸತ್ರಪ್ಪಾ! ಆಳ್ಪೇಪ್ಯಾಟ್ಯಾಗ ಉಟ್ಕೊಯ್ಸಿಬಿಡ್ತು. ದಿನಕ್ಕೆ ಅದಿನೈದು ಇಪ್ಪತ್ತು ಸಾವುಗ್ಳು! ಆ ಪ್ಯಾಟ್ಯೋರೆಲ್ಲಾ ಮನೇಬಿಟ್ಟು, ಬಾಕಿಲ್ಬಿಟ್ಟು, ಜೀವ ಉಳಿದ್ರೆ ಸಾಕೂಂತ ಎಲ್ಲೆಲ್ಗೋ ಓಡೋದ್ರು. ಸರ್ಕಾರ್ದೋರೂನೂ ಟಾಂಟಾಂ ಆಕಿಸ್ಬಿಟ್ರು — ಆಳ್ಪೆಪ್ಯಾಟ್ಯೋರು, ಅಕ್ಕಿಪ್ಯಾಟ್ಯೋರು, ಮಿಸೀನ್ ಪ್ಯಾಟ್ಯೋರು, ಎಲ್ಲಾರೂನೆ ತಕ್ಸಣ ಮನೆಗಳ್ಬಿಡಬೇಕೂಂತ. ನಂ ಸತ್ರ, ತೋಟದಪ್ಪನ ಸತ್ರ, ಪೂರ್ಣಯ್ಯಿನೋರ ಸತ್ರ, ಎಲ್ಲೆಲ್ಲೂ ಭರ್ತೀನೆ ಜನ. ಮಂಟಪಗಳಲ್ಲೂ ಜನಾನೇ, ಗಿಡದಡೀಗೂ ಜನಾನೇ. ಪಜೀತಿ ಇಟ್ಬೋಯ್ತು ಪ್ಯಾಟೇ ಎಲ್ಲಾ. ಅಣ್ಣಮ್ಮನ್ ತೇರು ನಡೆಸಿದ್ಮೇಲೇನೇ ಸೊಲ್ಪ ತಾಬಂದೀಗ್ಬಂತು ಪಿಳೇಕು. ಸರ್ಕಾರ್ದೋರ್ಗೇನು ನಂಬ್ಕೆ ಇಲ್ವಾ ದ್ಯಾವ್ರಲ್ಲೀ? ಅವ್ರೇ ನಡಸಿದ್ರಪ್ಪಾ ಉತ್ಸಾವ್ವನ. ದುಪ್ಟೀ ಕಮೀಸನ್ರೇ ಖುದ್ದಾಗಿ ಬಂದಿದ್ರು. ಊರ್ಗೆ ಊರ್ಗೇ ಊಟ ಆಕ್ಸಿದ್ರಪ್ಪ—ಸಾಂತಿ ಆಗ್ಲೀಂತ. ಜನಗಳ್ಗೆಲ್ಲಾ ತುಸ ಧೈರ್ಯಾನೂ ಬಂತು. ಪ್ಯಾಟೆಪ್ಯಾಟೇನೆಲ್ಲಾ ಕಿಲೀನ್ ಮಾಡಿಸಿದ್ರು. . . ಆಗೊಂದ್ ಯಿಸಾರ ನಡೀತಪ್ಪಾ. ಮರ್ತುಬಿಡ್ತಿದ್ದೆ ಯೋಳಾಕೆ. ಏನೂಂತಿಯಾ. . .

“ಆಳ್ಪೇಪ್ಯಾಟೆ ಸಂಸಾರ ಒಂದು, ಯೆಂಗಸ್ರು ಮಕ್ಕಳ್ನ ಊರಿಗ್ಕಳಿಸ್ಬಿಟ್ಟು, ಅಣ್ತಮ್ದೀರಿಬ್ರೂ ಆ ಆಳ್ಮನೇಗೆ ಓಗ್ಸೇರಿಕೊಂಡ್ರು, ಬೇರೆ ಎಲ್ಲೂ ಜಾಗ ಸಿಕ್ದೆ. ಊರಿಗೊಸಬ್ರೂಂತ ಕಾಣ್ತು. ಯಾಕೇಂದ್ರೆ—

ಅವ್ರಿಗಾಮನೆ ಸಮಾಸಾರಾನೇ ಗೊತ್ತಿರ್ಲಿಲ್ಲ. ನಾನೆಸ್ಟೋ ಯೇಳ್ದೆ—'ಅಲ್ಲಿಬರ್ಬೇಡಿ. ರಾತ್ರಿ ಒತ್ತು ಅಲ್ಲಿ ಮನೀಕೋಬೇಡೀ'ಂತ. ಅವ್ರಂದ್ರು: 'ಆ ಮನೇಯಾಗಿರೊಲ್ಲ. ಪಕ್ಕದ್ ತ್ವಾಟದ ಮಂಟಪದಾಗೇ ಇರ್ತೇವೀ' ಅಂತ. 'ಅಂಗಾದ್ರೆ ಸರೀ'ಂತಂದೆ ನಾನು. ಯಾಕೇಳ್ಳಪ್ಪ ಅವ್ರಿಗಾ ಮನೆ ಸಮಾಸಾರಾನಾ, ಅವ್ರು ಬಯಪಟ್ಕೊಳ್ಳಾಕೆ?

"ಆವತ್ಗೆ ಸರ್ರ್ಯಾಗಿ ಎಳ್ಡೊರ್ಸ ಆಗೋಗಿತ್ತಪ್ಪ ಆ ಮನೇಲಿ ಸಾವ್ಗೊಳ್ ನಡ್ದು. ಲೆಕ್ಕಾಸಾರ ಆಕ್ದಂಗೆ ಅದೇ ಅಮಾವಾಸೆ, ಆಸಾಡ್ ಮಾಸ. ಬಲ್ಕೋಡ, ಬಲ್ಗಾಳಿ ಆ ದಿನ. ಸಂಜೆ ಬೇಗ್ನೆ ಊಟಾ ಮುಗೀಸ್ಕೊಂಡು ಬೆಚ್ಗೆ ದ್ಕೊಂಡು ಸತ್ರದ ಬಾಗಿಲಾಕ್ಕೊಂಡು ಮನೀ ಕ್ಕೊಂಬುಟ್ಟೆ.

"ಸುಮಾರು ರಾತ್ರಿ ಕಳ್ದು ಎಳ್ಡ್ಗಂಟೆ ಮೂರ್ಗಂಟೆ ಇರಬೈದು—ಸತ್ರದ ಬಾಗಿಲ್ನ ಯಾರೋ ಧಿಮಿಧಿಮಿಧಿಮಿಧಿಮೀಂತ ಗುದ್ದಿದ್ರು. ಬೆಚ್ಚಿ ಬಿದ್ದೆದ್ದು, ನಾಂದ್ರಾ ಅಚ್ಚಿಸ್ಕೊಂಡು ಬಾಗಿಲ್ತೆಗೀತೀನಿ. . . . ಇಬ್ಬರ್ ನಿಂತವ್ರೇ, ಗಂಡಸ್ರು, ಬಾಕ್ಲತ್ರ, ನಡಗ್ತಾ. ನಾಂದ್ರ ಮಕಕ್ಕಿಡ್ದು ನೋಡ್ದೆ. ಆ ಆಳ್ಮನೇಲಿಳ್ಕೊಂಡಿದ್ದ ಅಣ್ತಮ್ದೀರವ್ರು. ಬಾಳ ದಿನ ಕಾಯ್ಲೆ ಬಿದ್ರೆ ಯೆಂಗಿರ್ತದೋ ಮಕ ಅಂಗೇ ಇತ್ತು. 'ಇದ್ಯಾಕಾ? ಬೆಳಿಗ್ಗೆ ಸೆಂದಾಗಿದ್ರಲ್ಲಾ! ಇಸ್ಟ್ರಲ್ಲೆ ಏನಾಯ್ತು ಇಬ್ಬರ್ಗೂ'ಂತ ನನಗೆ ದಿಗಿಲಾಯ್ತು. . . . ಮಾತಾಡೊಲ್ರು. ನಡಗ್ತಾ ನಿಂತ್ಕೊಂಡವ್ರೆ. . . 'ಏನ್ ಸಳೀನಾ?' ಅಂತ ಕೇಳ್ದೆ. 'ಅಲ್ಲಾ'ಂತ ತಲೆ ಅಲ್ಲಾಡಿಸ್ದ್ರು. 'ಒಳಕ್ ಬನ್ನೀ'ಂತಂದೆ. ಯೇಳಿದ್ದೇ ತಡ, ನನ್ನೂಕ್ಕೊಂಡೇ ಬಂದು, ಒಳಕ್‌ಬಂದ್ಬಿದ್ಬಿಟ್ರು ನನ್ ಆಸ್ಗೆ ಮೇಲ್ನೇವೆ, ಕುಂತ್ಕೊಂಡು ಅಳೋದಕ್ ಸುರುಮಾಡ್ಬಿಟ್ರು ಅಸ್ಟು ದೊಡ್ಗಂಡಸ್ರು.

"ಏನೋ ಅನಾವ್ತ ನಡ್ದೋಗಿರ್ಬೇಕೂಂತ ನನಗ್ನಂಬ್ಕೆ ಆಗೋಯ್ತು — ನಾಂದ್ರಾ ದೊಡ್ಡುಮಾಡಿಟ್ಟು, 'ಯಾಕ್ರಪ್ಪಾ? ಏನಾಯ್ತು? ಯಾಕಿಸ್ಟ್ ಗಾಬ್ರಿ ಬಿದ್ದಿದ್ದೀರೀ'ಂತ ಕೇಳ್ದೆ.

"ಅವ್ರಲ್ಲಿ ದೊಡ್ಡೋನು ಸೊಲ್ಪೊಲ್ಪ ಸುದಾರಿಸ್ಕೊಂಡು ಯೇಳ್ದ: 'ನಿನ್ಮಾತು ಕೇಳ್ದೆ ಕೆಟ್ಟೋದ್ವಿ ನಾವು. ದೆಯ್ಯದ್ ಮನೇಂತ ಯಾಕ್

ಏಳ್ನಿಲ್ಲ ನೀನೂ! ತ್ವಾಟದ್ ಮಂಟಪದಾಗೇ ಮನೀಕ್ಕೋಬೇಕಂದಿದ್ವಿ. ರಾತ್ರಿ ಅನೀ ಆಕ್ತಿತ್ತು, ಗಾಳಿ ಭರೋಂತ ಬೀಸ್ತಿತ್ತು. ಬೋ ಸಳಿ ಆಗೋಯ್ತು. ಕಂಬ್ಳಿ ಒದ್ಕೊಂಡ್ರೂ ಸಳಿ ತಡ್ಯೋದಿಕ್ಕಾಗ್ನಿಲ್ಲ. . . . ಸಿಕ್ಕೋನಂದ—'ಅಣ್ಣಯ್ಯ, ಆ ಮನ್ಯಾಗೇ ಮನೀಕೊಳ್ಳೋಣ. ಈ ಸಳೀಲಿ ನಿದ್ದೆ ಬರಾಕಿಲ್ಲಾ'ಂತ. 'ಅಂಗೇ ಆಗ್ಲಪ್ಪಾ'ಂತ ಎದ್ದು ಇಬ್ರೂ ಓದ್ವಿ. ಕೆಳಗಿನ್ ಪಡಸಾಲೇಲೇ ಒಂದ್ ಕೈಯೆಣ್ಣೇ ದೀಪಾನ ಅಚ್ಚಿ ಇಟ್ಕೊಂಡು, ಸಾಪೇ ಬಿಚ್ಕೊಂಡು, ಮೇಲೆ ಜಮ್ಕಾನ ಆಸ್ಕೊಂಡು, ಕಂಬ್ಳಿಗ್ಳೊದ್ಕೊಂಡು ಮನೀಕ್ಕೊಂಡ್ವಿ. ಅಲ್ಲೂ ಸಳೀನೆ. ಏನ್ ಬಾಕ್ಲೊ ಕಿಟ್ಕಿ ತಾಟೂ ಐತಾ ಆ ಮನೇಗೆ? ಒಂದೋ ಎಳ್ಡೋ ಇದ್ದ ಮುರುಕಲು ಕಿಟ್ಕಿ ಕದ 'ಪಟ—ಪಟಾ'ಂತ ಒಡ್ಕೋಂತಿತ್ತು. ಸಿಳ್ಳಾಕ್ದಂಗೆ ಗಾಳಿ ಬೀಸ್ತಿತ್ತು. ಜೊತೇಗ್ ಮಳೇನೂ ಸುಮಾರಾಗಿ ಬೀಳ್ತಿತ್ತು. ಇನ್ನಾ ಸಿಡ್ಲೂ ಮಿಂಚೂ ಯೋಳೋಕ್ಕಾಗಾಕಿಲ್ಲ, ಅದರಾರ್ಭಟ. . . . 'ಅಯ್ಯೋ ದೇವ್ರೇ! ಇದ್ಯಾಕಿಂತಾ ಕಸ್ಟ ಬಂತಪ್ಪಾ! ಈ ವೂರಿನ ಯಾಪಾರ ಇಲ್ಡಿದ್ರೆ ಓಗ್ಲಿ, ನಾಳೆ ವೂರ್ಗೆ ಓಗ್ಬಿಡಾಣಾ'ಂತ ನಿರ್ದರಿಸಿಕೊಂಡು, ಮಸೀಕ್ಕೊಂಡ್ವಿ. . . . ನಿದ್ದೆ ಬರುವೊಲ್ಟು. ಪೂರ್ಣಯ್ಯನ್ ಸತ್ರದ ಗಂಟೇಲಿ ಅನ್ನೊಂದೂ ಬಡೀತು, ಅನ್ನೆಳ್ಡೂ ಬಡೀತು. . . . . ಸುರೂ ಆಯ್ತಪ್ಪ, ನಮಿಗ್ಗಾ ಸಾರ. . . .'

"ನಾನ್ ಕೇಳ್ದೆ: 'ಯಾಕ್ರಪ್ಪಾ? ಏನಾಯ್ತೇಳಿ? ಇದ್ಯಾಕೆ, ಇನ್ನಾಯಿಂಗ್ ನಡಗ್ತಿದ್ದೀರಿ? ಇಲ್ಲಿ ಬೆಚ್ಚಗೈತಲ್ಲಾ'ಂತ. ಆದ್ಕೆ ಅವ್ರೇಳಿದ್ರು: 'ಸಳಿ ಅಲ್ಲಪ್ಪಾ. ಗುಂಡ್ಗೇನೆ ನಡಗ್ತಾ ಐತೆ. ಜರಾ ಬಂದಂಗೈತೆ, ಜತೇಗೆ ಕೈಕಾಲ್ಗೂ ಬಂದಂಗಾಯ್ತದೆ. ಕಣ್ಣಿಗ್ ಬಿತ್ತಪ್ಪಾ, ಇಬ್ರಿಗೂ, ಕತ್ತಲಾಗಿದ್ರೂ! ಬೆಳ್ಳೇ ಅಚ್ಚ ವೊದ್ಕೊಂಡಿತ್ತಪ್ಪಾ! ನಮ್ಮಾಸ್ಗೆ ಪಕ್ದಲ್ಲೇ ನಡ್ಡೋಯ್ತಪ್ಪಾ! ಎಜ್ಜೇ ಸಬ್ದ ಕೂಡಾ ಕೇಳಿದ್ವಪ್ಪಾ! ನಡುಗೋಯ್ತು ನಮ್ಮಿಬ್ಬರ್ಗೂ ಪಂಚಪರಾಣಗೋಳು. ಜೀವ ಉಳದ್ರೆ ಸಾಕೂಂತ, ಅಲ್ಲಿಂದ ಓಡ್ಬಂದ್ವಿ! ಮನೇಯಿಂದ ಬಾಕಲ್ಗೆ ಎತ್ತಿ ಬಿಸಾಕ್ದಂಗಾಯ್ತು ಇಬ್ಬರ್ನೂ! ಇನ್ನೆಂಗಪ್ಪಾ ಒತ್ಕಳ್ಯೋದು, ಬೆಳಗಾಗೋ ತನಕ? ನೀ ಮನೀಕ್ಕೋಬೇಡಪ್ಪಾ! ನಮ್ಗೆ ಜೀವ ಓಗ್ಬಿಟ್ಟೇತು!'

“ನಾನೇಳ್ದೆ—‘ಸಾಂತವಮಾಡ್ಕೊಳ್ರಪ್ಪಾ ಒಸಿ ಮನಸ್ನ. ಅದ್ಕೇ ನಾನೇಳಿದ್ದು—ಆ ಆಳ್ಮನೇಲಿರ್ಬೇಡೀಂತ, ಎಳ್ಡೆಳ್ಡ್ ಸಾರ್ತಿ. ಎಳ್ಡೊರ್ಸ ದಿಂದ್ ಆಳ್ಬಿದ್ದೈತೆ. ಒಬ್ರಿಗಾದ್ರೂ ಎದೆ ಇಲ್ಲ, ಅಲ್ಲೋಗಿರಾಕೆ. ಎಳ್ಡ್ ಒರ್ಸದಿಂದ ಇದೇ ದಿನ್ದಾಗ ಮೂರ್ ಜೀವ, ಗಂಡ ಯೆಣ್ತಿ ಒಂದ್ ಕೈಮಗ, ಒಂದೇ ದಿನ ಪರಾಣ ಕಳ್ಕೊಂಡಿದ್ ಗೊತ್ತಿಲ್ವಾ ನಿಮ್ಗೆ? ಊರ್ಗೆಲ್ಲಾ ಗೊತ್ತೈತೆ. ನೀವು ನಿಲ್ಲೋದಕ್ ಜಾಗಾ ಇಲ್ದೆ ಆ ಪಕ್ಕದ್ ಮಂಟಪದಲ್ಲಿದ್ದಾಗ, ಯೆಂಗಪ್ಪ ಏಳ್ಲಿ ಈ ಸಮಾಸಾರಾನ? ಅದೂ ಅಲ್ದೆ, ಆ ಮನೇಲಿರಾಕಿಲ್ಲ, ಮಂಟಪ್ದಾಗೇ ಇರ್ತೀವಿ ಅಂದಿದ್ರ ಮ್ಯಾಗೆ ಸುಮ್ನಾಗೋಗ್ಬಿಟ್ಟೆ ನಾನೂ. ಏನಾಯ್ತು ನಿಮ್ಗೆ? ಯಿವರವಾಗೇಳಿ. ಏನ್ಕಂಡ್ರಿ? ಏನ್ಕಾಣಿಸ್ಕೊಂಡ್ತು? ಸದ್ಯಕ್ ಬದಿಕಿಬಂದ್ರುಲ್ಲಾ! ಕುತ್ಗೆ ಗಿತ್ಗೆ ಕಿಮಿಚಾಕಿದ್ಗಿದ್ರೆ ಏನ್ಗತೀ? ಒಬ್ಬೊಬ್ರೇ ಇದ್ದಿದ್ರೆ ಅಂಗೂನೂ ಆಗೋಗ್ಬಿಡ್ತಾಸಿತ್ತೋ ಏನೋ!’ ಅಂದೆ.

“ಅವ್ರಲ್ಲಿ ಸಿಕ್ಕೋನು ಇನ್ನಾ ನಡಗ್ತಾನೇ ಇದ್ದ. ದೊಡ್ಡೋನು ತಮ್ಮನ್ನ ಎದೇಗ್ಕಟ್ಕೊಂಡು, ‘ಇನ್ನೇನ್ ಎದರ್ಕೆ ಇಲ್ವೋ, ಸಿಕ್ಕೋನೆ. ಸಮಾದಾನಮಾಡ್ಕೊಳ್ಳೋ’ಂತ ಯೇಳ್ತಾ ನನಗೇಳ್ದ— ‘ನೀನು ಬಲೇ ತೆಪ್ಮಾಡ್ದೆ, ಸಿನ್ನಯ್ಯ. ನಮುಗಾ ಸಮಾಸಾರ ಒಂದೂನೂ ತಿಳೀದು. ಯೋಳ್ಬೇಡ್ವಾ ನೀನು? ಅನ್ನಾಯವಾಗಿ ನಮ್ಜೀವ ಓಗಿದ್ರೆ, ಆ ಪಾಪ ನಿನ್ ತಲೇಗೇ ಸುತ್ತಿರೋದು.’

“ನಾನಂಡೆ—‘ಸಿವಸಿವಾ! ಸಿವಸಿವಾ! ಓಯ್ತು ಪಾಪ. ಏನ್ರಪ್ಪಾ, ನೀವಿಬ್ರೂ ಮಂಟಪ್ದಾಗೇ ನಾವ್ ಮನೀಕ್ಕೊಂತೀವೀಂತ ಯೋಳಿದ್ದರ ಮ್ಯಾಕೇನೇ ನಾನ್ಸುಮ್ನಾದೆ. ನೀವು ಆ ಆಳ್ಮನೇಲೇ ಇರ್ತೀವೀಂತೇಳಿದ್ರೆ ಕಂಡಿತ್ವಾಗಿ ತಿಳಿಸ್ತಿದ್ದೆ ಸಮಾಸಾರಾನೆಲ್ಲಾ. ಪಕ್ಕದ ಮಂಟಪ್ದಲ್ಲೇ ಇರೋರ್ಗೆ ಯಾಕಾರ ಯೋಳ್ಬೇಕು ಆ ಕೆಟ್ಸಂಗ್ತೀ ನಾಂತ ಸುಮ್ನಾಗ್ಬಿಟ್ಟೆ. ಸದ್ಯಕ್ಬದಿಕಿ ಬಂದ್ರುಲ್ಲಾಪ್ಪಾ! ಅಣ್ಣಮ್ನೇ ಸಂರಕ್ಸನೆ ಮಾಡಿದ್ದು ನಿಮ್ಮಿಬ್ಬರ್ನೂ, ನಂತಾಯಿ! ಬೆಳಿಗ್ಗೆ ತಾಣ ಮಾಡಿ, ಆಯಮ್ಮನ್ಗುಡೀಗೋಗಿ ಶೆಂದಾಗ್ ಪೂಜೆಮಾಡಿಸ್ರಿ. ಅಲ್ದೆ, ಅಂಗೇ ಗಾಳಿಅನುಮಂತರಾಯನ್ ಗುಡಿಗೂ ಓಗಿ, ಕಾಯೊಡ್ದು

ನಮಸ್ಕಾರಮಾಡಿ, ದಾರ ಕಟ್ಟಿಸ್ಕೊಳ್ರಿ ಇಬ್ರೂನೂ, ಪೂಜಾರ್ರ ಕೈಯಿಂದ.'

"ಸಿಕ್ಕೋನು ಇನ್ನೂ ಎದಕರ್ಕೊಂಡೇ ಗಡಗಡಾಂತ ನಡಗ್ತಿದ್ದ. ಐದೈದ್ ನಿಮ್ಸಕ್ಕೊಂದ್ಸಾರಿ 'ಬ್ಬ-ಬ್ಬ-ಬ್ಬಾ'ಂತಿದ್ದ. ಅಣ್ಣ ಯೇಳ್ತಿದ್ದ—'ಈಗೇನಿಲ್ಲೋ ಸಿಕ್ಕೋನೇ. ನೋಡು, ಈಗ ಸತ್ರಕ್ಬಂದಿದ್ದೀವಿ. ನೋಡು, ನಾಂದ್ರಾ ಅಚ್ಚೈಲ್ತೆ. ಸಿನ್ನಯ್ಯ ಇಲ್ಲೇ ಕುಂತವ್ನೆ ಅತ್ರ. ಅಲ್ನೋಡು, ಸತ್ರದಾಗ ಎಲ್ಲಾರೂ ಮನೀಕ್ಕೊಂಡವ್ರೆ. ಇನ್ಯಾಕ್ ಬಯಬೀಳ್ತೀಯಾ? ಒದ್ಕೊಂಡು ಗೋಡೇಗೊರಕ್ಕೊಂಡು ಕುಂತ್ಕೋ. ಇನ್ ನಿದ್ದೆ ಎಲ್ಬರ್ತದೆ? ಎಂಗ್ಬರ್ತದೇ?' . . . .

"ಆಮೇಕವ್ನಂದ—'ನೋಡು, ಸಿನ್ನಯ್ಯ. ರಾತ್ರಿ ಎಂಟ್ಗಂಟೇಗೇನೆ ಸೀನಪ್ಪನೋಟಲ್ಗೋಗಿ ಊಟಾಮಾಡ್ಕೊಂಡು, ಬಂದು ಬಿದ್ಕೊಂಡ್ವಿ ವಂಬತ್ಗಂಟೆ ಸುಮಾರ್ಗೆ, ಮಂಟಪ್ದಲ್ಲಿ. ಮಳೀ ಜೋರಾಯ್ತು, ಗಾಳೀನೂ ಎಚ್ಚಾಯ್ತು. ಇನ್ ಮಿಂಚೋ ಗುಡ್ಗೋ. . . ಬೂಮೀನೇ ನಡಗಿಸ್ತಿತ್ತು. ಮಂಟಪ್ದಾಗ ಆಗ್ನಿಲ್ಲ ಇರಾಕೆ. ಅದ್ರಿಂದ ಆ ಆಳ್ಮನೇಗೆ ಓದ್ವಿ ಮನೀಕ್ಕೋಣಾಕೆ. ಎಣ್ಣೆ ಅಣ್ತಿ ಆಚ್ಕೊಂಡು, ನೆಲ ಸುದ್ದಮಾಡ್ಕೊಂಡು, ಆಸ್ಕೊಂಡ್ ಮನೀಕ್ಕೊಂಡ್ವಿ. . . . . ನಿದ್ದೇಬರ್ಲ್ನೇ ಇಲ್ಲ. ನಾವ್ ಮನೀಕ್ಕೊಂಡಿದ್ದಿದ್ದು ಕೆಳಗಿನ್ ಪಡಸಾಲೇಲಿ. ಕಾಲ್ದಶೆ—ಬೀದೀ ಕಡೆ ಅಯ್ತಲ್ಲಾ ಆ ಕೋಣೇಗೋಗೋ ಬಾಕ್ಲು; ತಲ್ದಶೆ—ಮಾಡೀ ಮೇಲಕ್ಕತ್ತೋಗೋ ಮೆಟ್ಲು. . .ಅನ್ನೊಂದೊಡೀತು, ಅನ್ನೆಳ್ಡೊಡೀತು. ಸುಮಾರ್ ಒಂದ್ಗಂಟೆ ಸಮಯ. ಮಳೆ ನಿಂತೋಗಿತ್ತು. ಗುಡ್ಗೂನೂ ಮಿಂಚೂ ನಿಂತಿತ್ತು. ಗಾಳಿ ಮಾತ್ರ ಅಂಗೇ ಬೀಸ್ತಿತ್ತು. ನಂಗೆ ಸ್ವೊಲ್ಪ ಮಂಪ್ರು ಆಯ್ತು. . . . ಸಿಕ್ಕೋನೆಬ್ಬಿಸ್ದ— 'ಅಣ್ಣಯ್ಯ, ಅಣ್ಣಯ್ಯ. ಏಳಣ್ಣಯ್ಯ, ಯಾರೋ ಮಾಡಿ ಮೆಟ್ಲತ್ತಿ ಓದ ಸಬ್ದ ಆಯ್ತೂಂತಂದ. ನಾನ್ ನಿದ್ಗಣ್ಣಲ್ಲೇ ಅವನ್ಗೆ ಏಳ್ದೆ—'ಏ! ಏನೋ ಬೆಕ್ಕೋ ನಾಯೋ ಇರ್ಬೇಕು. ಸುಂಕೆ ಮನೀಕ್ಕೊಳ್ಳಪ್ಪಾ'ಂತಂದೆ. 'ಇಲ್ಲ ಅಣ್ಣಯ್ಯಾ, ಬೆಕ್ಕು ನಾಯಿ ಓದ್ರೆ ಸಬ್ದ ಗೊತ್ತಾಗಾಕಿಲ್ವಾ? ಯಾರೋ ಮನಸ್ರೇ ಅತ್ತೋದಂಗೆ ಸಬ್ದ ಆಯ್ತು. ಕಡ್ಡೀ ಗೀಸಿ ಕೈದೀಪ ಅತ್ಸಪ್ಪಾ'ಂತಂದ.

ನಾನು ಕಡ್ಡೀ ಗೀಸಿ ದೀಪ ಅತ್ಸೋದಕ್ ಓಗ್ತೀನಿ—ಅಣತೇಲಿ ಒಂದ್ ತೊಟ್ಟು ಎಣ್ಣೇನೂ ಇಲ್ಲ. ಇಲೀನೋ ಯೆಗ್ಣಾನೋ ಎಲ್ಲಾ ನೆಕ್ಕಿ ಕಿಲೀನ್ ಮಾಡಿಬಿಟ್ಟೈತೆ. ಬತ್ತೀನೂ ಮೂರೂ ಮುಕ್ಕಾಲ್ ಪಾಲ್ ತಿಂದ್ಬಿಟ್ಟೈತೆ. ಇನ್ನೇನ್ಮಾಡೋದು? ಆ ಉಳ್ದ ಬತ್ತೀಗೆ ತಿರ್ಗಿ ಕಡ್ಡೀ ಗೀರಿಕ್ಕಿ, ಇಬ್ರೂ ಮಾಡೀ ಅತ್ತ ನೋಡಿದ್ವಿ. ಬೆಕ್ಕೂ ಇಲ್ಲ, ನಾಯೂ ಇಲ್ಲ, ಯಾರೂ ಇಲ್ಲ. ನಾಯೋ ಬಂದಿರ್ಬೇಕೂಂತಂದ್ಕೊಂಡು ಬಂದು ತಿರ್ಗಿ ಮಸೀಕ್ಕೊಂಡ್ ಬಿಟ್ವಿ . . . ದೀಪ ಬತ್ತಿ ಎಲ್ಲಾ ಸುಟ್ಟೋರೋಗ್ಬಿಡ್ತು ನಂ ಗಾಸಾರಕ್ಕೆ. ನಮ್ಮತ್ರ ಒಂದ್ದೀಪ ಇಲ್ಲ, ಒಂದ್ಲಾಂದ್ರ ಇಲ್ಲ. ಅಂಗೇ ಮಸೀಕ್ಕೊಂಡಿದ್ವಿ. ಪುನಾ ಸದ್ದಾಯ್ತು—ಯಾರೋ ಮಾಡಿ ಅತ್ತೋದಂಗೆ. ಈ ಸರ್ತಿ ನಾನೂ ಎದ್ದೇ ಇದ್ದೆ. ಮೆಟ್ಲಲ್ಲಿ ಬೆಕ್ಕು ನಾಯಿ ಅತ್ತೋದ್ರೆ, ಈ ತರ ಸಬ್ದ ಆಗೋಕಿಲ್ಲ. ನಾನು ದೈರ್ಯ ಮಾಡ್ಕೊಂಡು, 'ಯಾರದು? ಮಾಡೀಗೆ ಅತ್ತೋದೋರೂ'ಂತ ಕೂಗ್ದೆ. ಜವಾಬಿಲ್ಲ. ಯಾಕೋ ನಮ್ಗೂ ಎದೆ ಪುಕಪುಕಾಂತಂತು. ನಂ ಬಟ್ಟೆಬರೆ ಕದಿಯಾಕ್ಯಾರೋ ಕಳ್ಳಗಿಳ್ಳ ಬಂದಿರ್ಬೇಕೂಂತ ಪಕ್ಕದಾಗಿನ್ ಬಿದರ್ ದೊಣ್ಣೇನ ಅತ್ರಕ್ಕೆಳ್ಕೊಂಡು, ಅಂಗೇ ಕಾದ್ವಿ. ಏನ್ ಸದ್ದೇ ಇಲ್ಲ. . . . ಕಾಲ್ಗಂಟೆ ಆಗಿರ್ಬೋದು. ಆಮೇಕೆ, ನಮ್ ಕಾಲ್ದ ಶೇಗಿದ್ದ ಕೋಣೇಲಿ ಒಂದ್ ಸಿಕ್ಮಗ ಅಳ್ತಿದ್ ಸದ್ದು ಕೇಳ್ಬಂತು. ಸಿಕ್ಕೋನು ನನ್ರಟ್ಟೆ ಯಿಡ್ಕೊಂಡು ಕೇಳ್ದ, ನನ್ಕಿವೀಲಿ—'ಕೇಳಿಸ್ಲಿಲ್ವಾ ನಿಂಗೆ, ಮಗ ಅತ್ತಂಗೇ?' ಅಂತ. ನಾನಂದೆ—'ಒಂದೊಂದ್ಸಲ ಗುಳ್ಳೇನರಿ ಕೂಗಿದ್ರೆ ಅಂಗೇ ಕೇಳಿಸ್ತದೇ' ಅಂತ . . . ಸೊಲ್ಪ ಪೊತ್ತಾಯ್ತು. ಕೋಣೇಲಿ ಮಗ ಅಳ್ತಿರೋ ಸಬ್ದ ನಮ್ಗೆ ಶೆನ್ನಾಗ್ಕೇಳ್ಬಂತು. ನಮ್ಮಿಬ್ಬರ್ಗೂ ಸಸ್ತಾತ್ರ ಉಡುಗೋಯ್ತು. ಸಿಕ್ಕೋನು ನನ್ರಟ್ಟೇನ ಬದ್ದವಾರ್ಗಿಡ್ಕೊಂಬುಟ್ಟ. ಅಸ್ಟ್ರಲ್ಲೇ ಒಂದು ಯೆಂಗ್ಸಿನ್ ದ್ವನಿ 'ಎಂಡೇ ಮಗನೇ! ಎಂಡೇ ಮಗನೇ!' ಅಂತ, ಅದೇನ್ ಬಾಸೇನೋ ತಿಳೀಲಿಲ್ಲಾಪ್ಪ, ಅಂಗಂತ ಕೂಗ್ತಾ ಕೂಗ್ತಾ, ಕಾಲಿಗ್ಕರ ಮೆಟ್ಕೊಂಡು ನಮ್ಮಾಸ್ಗೆ ಪಕ್ದಲ್ಲೇ, ತೀರ ಪಕ್ದಲ್ಲೇ ನಡ್ದೋಯ್ತಪ್ಪ—ಚಕ್ ಚಕ್ ಚಕ್ ಚಕ್ ಅಂತ ಕೆರಾ ಆಕ್ಕೊಂಡು, ನೆಲಕ್ಗೀಚ್ಕೊಂಡು ನಡೀತಿದ್ರೆ ಎಂಗಾಯ್ತದೆ ನೋಡು ಸದ್ದು, ಅಂಗೇ ಆಯ್ತಪ್ಪ! ಉದ್ದಕ್ಕೆ

ತೆಳ್ಗೆ ಬೆಳ್ಗೆ ಆಚ್ಚಡ ಒದ್ಕೊಂಡೋದಂಗಾಯ್ತು! ಎಂಟೆತ್ ಯೆಜ್ಜೆ ನಡ್ದೋಗಿ ಕೋಣೆ ಒಳಕ್ಕೆ ಓದಂಗಾಯ್ತು! ನಾವಿಬ್ರೂ ಆ ಸಳೀನಾಗ ಬೆವತೇ ಓಗ್ಬಿಟ್ವಿ. ಆಮೇಲಾ ಕೋಣೇಲಿ ತೊಟ್ಲು ತೂಗ್ತಾ ತೂಗ್ತಾ ಲಾಲೀ ಆಡೂ ಕೇಳ್ತಪ್ಪಾ. ಇಲ್ಲಿ ನಮಗೆ ಎದೇನೇ ನಿಂತೋಯ್ತು. ಕೈಕಾಲು ಒಂದೂ ಸೋದೀನಾನೇ ಇರ್ನಿಲ್ಲ. ಸಿಕ್ಕೋನು ಫಟ್ಯಾಗ್ ಕಿರಚ್ಕೊಂಬುಟ್ಟ! ಆಗ ನೋಡು, ನಮ್ಮಿಬ್ಬರ್ಗೂ ಅಲ್ಲಿಂದ ಎಸ್ಡಂಗಾ ಯ್ತಪ್ಪಾ, ಬಾಕಲ್ಗಾಚೇ. ಎಂಗೋಡ್ಬಂದ್ವೋ ಇಲ್ಗೆ, ನಮ್ಗೇ ತಿಳೀ ದಪ್ಪಾ! . .ಇನ್ನೇನಪ್ಪಾ ಗತಿ? ಎಬ್ಬಿಸಪ್ಪಾ ಯಾರ್ನಾದ್ರೂ! ಸಿಕ್ಕೋನ್ಗೆ ಇನ್ನೂ ಗ್ನಾನಾನೇ ಬಂದಿಲ್ಲ! ತೆಪ್ಪೋದಂಗೈತೇ'ಂತ ಅಸ್ಟು ದೊಡ್ ಗಂಡ್ಸು ಅಳೋದಕ್ ಸುರುಮಾಡ್ದ . . . . ಸತ್ರದಾಗಿದ್ದೋರು ಒಬ್ರೊ ಬ್ರಾಗಿ 'ಏನಾಯ್ತೂ? ಏನಾಯ್ತೂ?' ಅಂತ ಎದ್ಬಿಟ್ರು. ನಾನೂ ಆ ಮೂರ್ಗಂಟೆ ರಾತ್ರ್ಯಾಗ ನಾಂದ್ರಾ ಆಚ್ಕೊಂಡೋಗಿ, ನರಸಿಂದೇವರ್ ಗುಡಿ ಪೂಜಾರಿ ವರದಪ್ಪನೋರ್ನ ಕರ್ಕೊಂಬಂದು, ಆಸ್ಮೊತ್ನಲ್ಲಿ ಅವ್ರಿ ಬ್ರೀಗೂ ಮಂತ್ರ ಆಕ್ಸಿ, ನರಸಿಂದೇವ್ರ ರಕ್ಸೆಕಟ್ಟಿಸ್ದ ಮೇಗೇನೇ ಗ್ನಾನ ಬಂತು, ಸಿಕ್ಕೋನ್ಗೆ.

"ಅದ್ಕೇವೇಪ್ಪ, ಆ ಆಳ್ಬಿದ್ ಮನೇ ತಾವ—ಮನೇತಾವೇನೂ, ಆ ರಸ್ತೇಲೇ—ಓಡಾಡಾಕಿಲ್ಲ ಜನಗ್ಳು, ರಾತ್ರಿ ಆದ್ರೆ. ಆಯ್ತಲ್ಲಪ್ಪಾ ಎಲ್ಲಾ ಸಮಾಸಾರಾನೂ. ನೆನ್ನೆ ನಡದಂಗೈತೆ ನನ್ಗಂತೂನೂ. ಆಗ್ಲೇ ಎಸ್ಟೋ ವರ್ಸಗಳಾಗೋಯ್ತು. . . . ಇನ್ ಓಗ್ರಪ್ಪಾ ನೀವೆಲ್ಲಾ ಮನೆ ಸೇರ್ಕೊಳ್ಳಿ. ಇದ್ನೆಲ್ಲಾ ಕೇಳಿ ಕೆಟ್‌ಕನಸಾಗ್ಬೌದು. ಓಗ್ತಾ ಆಂಜನೇ ಯನ್ ಗುಡೀಗೋಗಿ ನಮಸ್ಕಾರ ಆಕಿ ಕುಂಕ್ಮ ಆಚ್ಕೊಂಡೋಗಿ. ಎಂಗೋ ಏನೋ! . . .ಇನ್ನರ್ತೀನೇಪ್ಪಾ—ಸಿಕ್ರಂಗಪ್ಪಾ, ಪುಟ್ಮಲ್ಲಪ್ಪ, ತಿಮ್ಮಯ್ನೋರಾ, ಸುಬ್ಬಪ್ಪಾ—ಈ ಐನೋರ್ ಉಡುಗನ್ನ ಯಾಕ್ ಕರಕೊಂಡ್ ಬಂದೇಪ್ಪಾ, ಈ ಸಣೀ ಕತೇನೆಲ್ಲಾ ಕೇಳಾಕೆ? . . . . ಬರ್ತೀನ್ರಪ್ಪಾ. ನಮಸ್ಕಾರ ಎಲ್ಲ್ರಗೂ. ಒಂಬತ್ಗಂಟೆ ಒಡಿದಿದ್ದೇ ತಿಳೀ ನಿಲ್ವೇ! ಇನ್ನು ಪಾರುಪತೇಗಾರ್ರಿಗೆ ಏನ್ಸಮಾದಾನ ಏಳೋದಪ್ಪಾ ನಾನೂ?"—ಅಂತ ಹೇಳುತ್ತಾ ಕಾವಲು ಚಿನ್ನಯ್ಯ ಹೊರಟ.

'ಕೋ, ಚಿನ್ನಯ್ಯ, ನಿನ್ ಪಾಲು ಜಿಲೇಬಿ ವಡೆ ತಕ್ಕೊಂಡೋಗು' ಎಂದು ಚಿಕ್ಕರಂಗಪ್ಪ ಚಿನ್ನಯ್ಯನಿಗೆ ಕೈತುಂಬ ಕೊಟ್ಟು ಕಳುಹಿಸಿದ. ಅಷ್ಟುಹೊತ್ತಿಗೆ ಆ ಜಿಲೇಬೀ ವಡೇ ಎಲ್ಲಾ ತಣ್ಣಗಾಗಿಹೋಗಿತ್ತು. ಅದನ್ನೇ ತಿನ್ನುತ್ತಾ ಕುಳಿತುಕೊಂಡೆವು.

* * * *

ತಿನ್ನುತ್ತಾ ತಿನ್ನುತ್ತಾ, ಪುಟ್ಟಮಲ್ಲ ಮಾತಿಗೆ ಮೊದಲುಮಾಡಿ, "ಚೆನ್ನಾಗಿ ಯೇಳ್ತಾನೆ ಚಿನ್ನಯ್ಯ ಕತೇನ, ಗುಂಡ್ಗೆ ಜಲ್ ಅನ್ನೋ ವಂಗೆ!" ಅಂತಂದ.

ಚಿಕ್ಕರಂಗಪ್ಪ "ಕತೆ ಅಲ್ಲ, ಪುಟ್ಟಮಲ್ಲ ಅದು. ಎಲ್ಲಾನೂ ನಡದ ಸಮಾಸಾರಾನೇ. ಚಿನ್ನಯ್ಯ ಎಂದೂ ಸುಳ್ಳು ಯೇಳೋನಲ್ಲ. ಇದ್ದಿದ್ನ ಇದ್ದಂಗೆ ಯೇಳ್ದ." ಅಂದ.

"ಈ ಸಮಾಸಾರಗ್ಳು ಎಲ್ಲಾ ನಂಗೂ ಗೊತ್ತಿತ್ತು. ಆದ್ರೆ ಇಸ್ಟು ಯಿಂಗಡವಾಗಿ ತಿಳಿದಿರ್ನಿಲ್ಲ" ಅಂದ ತಿಮ್ಮಪ್ಪ.

ಪುಟ್ಟಮಲ್ಲ—"ಇಗಾ, ಇಂತಾ ಕತೆಗಳ್ನ ನೀವೂ ನಚ್ಚಿಬಿಡಿ. ಮೊದ್ಲೇ ನಂ ಜನ ಪುಕ್ಲು. ಇನ್ನೂ ದಿಗಿಲ್ಬಿದ್ದೋಗೋಕೆ!" ಅಂದ.

ಸುಬ್ಬಯ್ಯ—"ಈ ಪ್ಯಾಟೇಲೇ ಉಟ್ಟೋರ್ನಾವು. ನಮುಗ್ಗೊತ್ತಿಲ್ವಾ ಇದು ಸುಳ್ಳೋ ನಿಜಾನೋ ಅನ್ನೋದು. ಏನ್ಮಾತಾಡ್ತೀಯ, ಪುಟ್ಟಮಲ್ಲ!"

ಪುಟ್ಟಮಲ್ಲ—"ಒಂದ್ವಿಸ್ಯ ಇನ್ನೊಬ್ರ ಕಿವೀಗ್ ಬಿದ್ರೆ, ಅದು ಎಳ್ಡಾಯ್ತದೆ. ಇಂಗೇ ಮೂರ್ಜನದ ಕಿವೀಗ್ ಬಿದ್ರೆ, ಅದಕ್ಕೆ ಕಿವಿ ಬಾಲ ಎಲ್ಲಾ ಉಟ್ಕೊಂಬುಡ್ತದೆ. ಕೊನೇಗೆ, ಆದದ್ದೇ ಒಂದಾದ್ರೆ ಜನಗ್ಳು ಏಳ್ಕೊಳ್ಳೋದೇ ಇನ್ನೊಂದಾಯ್ತದೆ."

ತಿಮ್ಮಪ್ಪ—"ಮೂರ್ಜನ ಯಾರೇಳಿದ್ರಪ್ಪಾ? ಚಿನ್ನಯ್ಯ ಲಾಗಾಯತ್ನಿಂದ ಇಲ್ಲೇ ಇರೋನು. ಅವನ್ಮಾತ್ನಲ್ಲಿ ಸರ್ಕಾರ್ದೋರ್ಗೂ ನಂಬ್ಕೆ ಐತೆ. ಈ ಪ್ಯಾಟೇಲಿ ಏನ್ ಸಮಾಸಾರ ಕೇಳ್ ಬೇಕಾದ್ರೂ ಪೋಲೀಸ್ ಇನಿಸ್ಪೇಟ್ರು ಮೊದಲು ಚಿನ್ನಯ್ಯನ್ನೇ ಕರ್ಸಿ ಕೇಳ್ತಾರೆ. ಚಿನ್ನಯ್ಯನ್ಗೆ ಸುಳ್ಳು ಯೇಳಾಕೇ ಬರೋಕಿಲ್ಲ."

ಪುಟ್ಟಮಲ್ಲ—"ಆ ಮಳೆಯಾಳಿ ಸಂಸಾರ ಸತ್ತಿರ್‍ಬೋದು, ಆ ಮನೇಲಿ. ಯೆಂಗ್ಸ್ರೂ ಬಾವೀಗ್ಬಿದ್ ಸತ್ತಿರಬೌದು. ಗಂಡ್ಸ್ರೂ ನೇಣಾಕ್ಕೊಂಡ್ ಸತ್ತಿರಬೌದು. ಆದ್ರೆ, ಆ ಮೂರ್ಜೀವಾನೂ ದೆವ್ವಗಳೇ ಆಗಿ ಆ ಮನೇಗೇ ಕುಂತವ್ರೇ ಅಂಬೋದು ನಂಬಾಕಾಗಾಕಿಲ್ಲ. ಆ ಮನೇಲಿ ಮನೀಕ್ಕೊಂಡಿದ್ದ ಅಣ್ತಮ್ದೀರಿಬ್ರೂ ಏನಾರ ಕೆಟ್ ಕನಸು ಕಂಡಿರಬೇಕು, ಬಯಬಿದ್ದಿರಬೇಕು. ಏನೋ, ದೆಯ್ಯಗಳಂತೆ, ದೆಯ್ಯಗಳು! ಒಳ್ಳೇದಪ್ಪಾ. . . ನೀವ್ಯಾರಾದ್ರೂ ಕಣ್ಣಾರ ಕಂಡಿದ್ದೀರಾ, ದೆಯ್ಯಗಳ್ನ? ಅಜ್ಜೀ ನಮ್ಗೆ ಕಥೆ ಯೋಳಾಕ್ಕಿಲ್ವಾ ಬ್ರಮ್ಮರಾಕ್ಸಸನ್ದು—ಕೇಳಿದ್ದೀವಪ್ಪ ನಾವೂನೂ ಚಿಕ್ಕಂದ್ನಾಗ ಇಂಥಾ ಎಸ್ಟೋ ಕತೆಗಳ್ನ."

ತಿಮ್ಮಪ್ಪ—"ಪುಟ್ಟಮಲ್ಲ, ನೀನಿನ್ನೂ ಚಿಕ್ಕೋನು. ನಿಂಗೆ ರಕ್ತ ಚೆನ್ನಾಗೈತೆ. ಮೈಯಾಗ ತ್ರಾಣ ಚೆನ್ನಾಗೈತೆ. ನಿನ್ ನಂಬ್ಕೆ ಅಂಗೇ ಇರ್ಲಪ್ಪಾ, ಸಾವಿರ ವರ್ಸ. ನಂಗ್ನೋಡು—ನಿನ್ಗಿಂತ ಎರಡ್ರಸ್ಟು ವಯಸ್ಸಾಗೈತೆ. ಈಗ ಚಿನ್ನಯ್ಯ ಏಳಿದ್ದಿಕ್ಕಿಂತ ಎದೆ ನಡಗೋ ಸಮಾಸಾರಗ್ಳು ಎಸ್ಟೋ ನಡ್ದೋಗೈತೆ, ನಾ ಕಂಡಂಗೆ."

ಪುಟ್ಟಮಲ್ಲ—"ದೆಯ್ಯ ಎಲ್ಲಂತು ತಿಮ್ಮಪ್ಪ. ಸತ್ತೋರೆಲ್ಲಾನು ದೆಯ್ಯಗ್ಳೇ ಆದ್ರೆ, ಲಾಗಾಯ್ತಿನಿಂದ ಸತ್ತೋರ ದೆಯ್ಯಗಳು, ಈ ಪರಪಂಚದಲ್ಲಿರೋ ಜನಗಳ್ಗಿಂತ ಸಾವಿರ ಸಾವಿರ ಪಾಲು ಎಚ್ಚಾಗಿರಬೇಕಲ್ವಾ? ಒಂದೊಂದ್ಮನೇಗೂ ಒಂದೊಂದ್ಸಾವಿರ ದೆಯ್ಯಗ್ಳು ಆಯ್ತದೆ ಅಲ್ಲೀಗೆ."

ತಿಮ್ಮಪ್ಪ—"ಸತ್ತೋರೆಲ್ಲಾ ದೆಯ್ಯಗಳಾಗೋಕಿಲ್ಲ, ಪುಟ್ಟಮಲ್ಲ. ತಿಳಿದೋರು ಯೋಳ್ತಾರೆ: ಯೆಚ್ಚಾಗಿ ಆಸೆ ಇಟ್ಕೊಂಡು ಸಾಯೋರೂ, ಇಂತಾದ್ದು ತನೀಗ್ಸಿಕ್ಲಿಲ್ವೇ, ಇಂತಾದ್ದು ತನೀಗಾಗ್ಲಿಲ್ವೇ ಅಂತಂತ ಕೊರಗೀ ಕೊರಗೀ ಸಾಯೋರೂ, ಎಚ್ಚು ಅಣ ಕೂಡಾಕೀ ಕೂಡಾಕೀ ತಾನೂ ಅನುಬವಿಸ್ದೆ, ಇತರಗೂ ಕೊಡ್ದೆ, ದಾನಾ ದವರ್ಾ ಮಾಡ್ದೆ, ಯಾಗರ್ೂ ಏನ್ ಉಪಕಾರಾನೂ ಮಾಡ್ದೆ, ಸಾಯೋವಾಗ 'ಅಯ್ಯೊ, ಸತ್ತೋಯ್ತೀನಲ್ಲಾ, ಈ ಅಣಾನೆಲ್ಲಾ ಬುಟ್ಬುಟ್ಟೋ'ಂತ ಅನ್ನೋರೆಲ್ಲಾ ದೆಯ್ಯಗ್ಳೇ ಆಗ್ತಾರೆ."

ಪುಟ್ಟಮಲ್ಲ—"ದೆಯ್ಯ ಇಥೇಂತ ನಂಬೋರು ನಂಬ್ಲಿ. ನಾನ್ ನಂಬಾಕಿಲ್ಲ. ನಂಗೆ ಯಾವೆದರ್ಕೇನೂ ಇಲ್ಲ. ಇವತ್ ರಾತ್ರೀನೇ ಬೇಕಾದ್ರೆ, ನಾನೊಬ್ನೇ ಆ ಆಳ್ಮನೇಲಿ ಮನೀಕ್ಕೊಂತೀನಿ. ನೀವ್ ಪಂದ್ಯ ಕಟ್ಟಿ."

ಚಿಕ್ಕರಂಗಪ್ಪ— "ಯಮಗುಂಡ್ಗೆ ಕಣಪ್ಪಾ ಪುಟ್ಟಮಲ್ಲಂದು. ದೇವ್ರು ಸಾವಿರ ವರ್ಸ ಇಟ್ಟಿರ್ಲಪ್ಪ ನಿನ್ನ."

ತಿಮ್ಮಪ್ಪ—"ಪುಟ್ಟಮಲ್ಲ, ನೀನಿನ್ನೂ ಚಿಕ್ಕೋನು. ದೊಡ್ಡೋರ್ ಮಾತ್ಗೆ ಗೋರ್ವ ಕೊಡ್ಬೇಕು."

ಪುಟ್ಟಮಲ್ಲ—"ಯಾತರ್ಮಾತು ತಿಮ್ಮಪ್ಪ? ಅಂಗಾರೆ, ನಿಮ್ಮನ್ ಕಂಡ್ರೆ ನಂಗ್ ಇಸ್ವಾಸ ಇಲ್ವಾ? ಮರ್ವಾದೆ ಇಲ್ವಾ? ಇಂತಾ ಬೆಪ್ಕತೆ ಕೇಳಿದ್ರೆ, ಸಿಟ್ ಬರ್ತ್ಯೆತೊ ಇಲ್ವೊ ಏಳು."

ಸುಬ್ಬಯ್ಯ—"ಅಂಗಾರ್ರೆ, ಪುಟ್ಟಮಲ್ಲ, ನೀನಾ ಮನೆಯಾಗ ಮನೀಕ್ಕೊಂತೀಯಾ?"

ಚಿಕ್ಕರಂಗಪ್ಪ—"ನೀನ್ಗಾನಾ ಅಂಗ್ಮಾಡಿದ್ರೆ, ನಾವು ನೂರ್ನೂರು ರೂಪಾಯಿ ತಲಾ ಬಾಜಿ ಕಟ್ತೇವಿ. ಎಂಗೇ, ತಿಮ್ಮಪ್ಪ? ಸುಬ್ಬಯ್ಯ? ಮುನ್ನೂರು ರೂಪಾಯ್ಗೆ ಚಿನ್ನದ್ತೋಡಾ ಮಾಡ್ಸಿಬಿಟ್ಟು, ಯಜಮಾನ್ರ ಕೈಯಿಂದಾನೆ ನಿನಿಗಾಕಿಸ್ತೀವಿ."

ತಿಮ್ಮಪ್ಪ, ಸುಬ್ಬಯ್ಯ—"ಅಂಗೇನೆ ಸೈ."

ಪುಟ್ಟಮಲ್ಲ—"ನಾನೂ ಸೈಯ್ಯೇ. ಏನ್ ಇವತ್ತೇ ಆಗ್ಲೋ?"

ಚಿಕ್ಕರಂಗಪ್ಪ—"ಇವತ್ತು ಬೇಡ. ಇದು ಎಂಗೂ ಆಸಾಡ್ ಮಾಸಾನೇ. ನಾಳೆ ಬರೋ ಅಮಾಸ್ಸೇನೆ ಅವ್ರು ಸತ್ತಿದ್ದಿನಾಂತ ಯೋಳ್ದ ಚಿನ್ನಯ್ಯ. ಆವೊತ್ತೇ ಯಾಕಾಕ್ಬೊಡ್ದು?"

ಪುಟ್ಟಮಲ್ಲ—"ಏನ್ ಅಮಾಸ್ಸೇಂತ ಎದರಿಸ್ತೀರೋ ನನ್ನ? ಅಮಾಸ್ಸೇನೇ ಆಗ್ಲೇಳು. ನೀವೆಂಗೇಳಿದ್ರೆ ಅಂಗೇ. ನಿಮ್ ಮುನ್ನೂರ್ ರೂಪಾಯಿ ನನ್ನ ಕೈಗೆ ಬಂದುಬಿಡ್ತೂಂತಂದ್ಕೊಳ್ಳಿ."

ತಿಮ್ಮಪ್ಪ—"ನಾವ್ಕೊಡೋ ಮುನ್ನೂರು ಮೂರ್ಸಾವ್ರ ಆಗ್ಲೀ ನಿನಗೆ, ಪುಟ್ಟಮಲ್ಲ. ಅಸ್ಟೇ ಅಲ್ಲ--ನಿನ್ ಸೋಬಣಕ್ಕೆ ಒಂದ್ಜತೆ

ರೇಸ್ಮೆ ದೋತ್ರ, ನಿನ್ನೆಣ್ತೀಗೆ ಒಂದ್ ಕಾಸಿ ಪೀತಾಂಬ್ರ ನಮ್ ಗರಡೀ ಕಡೆಯಿಂದ ಉಡುಗ್ರೆ ಕೊಡಿಸ್ತೀವಿ."

ಪುಟ್ಟಮಲ್ಲ—"ಬರೋ ಅಮಾವಾಸೇಗೇನೇ ಆಗ್ಲಿ. ಎಸ್ಟೊತ್ಗೆ? ಎಂಗೆ? ನಾನಲ್ಲಿ ಮನೀಕ್ಕೊಂಡಿದ್ದೀಂಬೋದ್ನ ನೋಡೋರ್‍ಯಾರು?"

ಸುಬ್ಬಯ್ಯ, ಚಿಕ್ಕರಂಗಪ್ಪ, ತಿಮ್ಮಪ್ಪ ಸ್ವಲ್ಪಹೊತ್ತು ಯೋಚನೆ ಮಾಡಿ, ತಮ್ಮತಮ್ಮಲ್ಲೇ ಮಾತಾಡಿ ನಿರ್ಧರಿಸಿಕೊಂಡು, ಅನಂತರ . . .

ತಿಮ್ಮಪ್ಪ—"ಯಾರಪ್ಪಾ ನೋಡೋರೂಂತೀಯಾ? ಇಕೋ, ನಾವೊಂದ್ ನಿರ್ದಾರಕ್ಬಂದಿದ್ದೀವಿ, ಮೂರ್ಜನಾನೂ. ಏನಾದ್ರೂ ಗುರ್ತಾಕ್ಬಿಟ್ಟು, ನಿನ್ಕೈಗೆ ಮೂರು ಕಬ್ಬಿಣದ್ ಮೊಳೆ ಕೊಡ್ತೀವಿ. ಅದ್ನ ನೀನು ಬರೋ ಅಮಾವಾಸ್ಸೇ ರಾತ್ರಿ ಅನ್ನೆಳ್ಡು ಗಂಟೇ ಮೇಕೆ, ನೀನು ವೊಬ್ನೇ ಆ ಮನೇಗೋಗಿ, ಬೀದಿ ಕಡೆ ಕೋಣೇಲೊಂದ್ಮೊಳೆ, ಕೆಳ್ಗಿನ್ ಪಡ್ಸಾಲೇಗೊಂದ್ಮೊಳೆ, ಮಾಡೀ ಅತ್ತಿ ಮೆಟ್ಲು ಪಕ್ದಾಗಿರೋ ಬಾಗಿಲ್ ಕಡೆ ಗೋಡೇಗೊಂದ್ಮೊಳೆ ಬಡದ್ಬುಟ್ಬರಬೇಕು. ನಾವ್ ಆವತ್ತಿನ ದಿನ ಅನ್ನೊಂದ್ಗಂಟೇಗೆ ಸರ್‍ಯಾಗಿ ಕೊಡ್ತೀವಿ ನಿನ್ಕೈಗೆ ಮೊಳೆಗಳ್ನ, ಸುಬ್ಬಯ್ಯನ ಮನೇಲಿ. ನಿನ್ಜೊತೇಗೆ ಆವತ್ರಾತ್ರಿ ಕಮಲಾ ಸತ್ರದ ವರ್ಗೂ ಯಾರಾದ್ರೂ ನಂಪೈಕಿ ಬರ್‍ತಾರೆ. ನೀನ್ ಮೊಳೆ ವೊಡದ್ಬಿಟ್ಟು ಬಂದು ಸುಬ್ಬಯ್ಯನ್ ಮನೇಲೇ ಮನೀಕ್ಕೊ. ಬೆಳಗಾಗೂತ್ಲೂ ನಾವೆಲ್ಲ ಒಟ್ಟಗ್ಸೇರಿ ಈ ಆಳ್ಮನೇತಾವ್ಕ ಬಂದು, ನೀನೊಡೆದಿರೋ ಮೊಳೆಗಳ್ನ ಆಜಮಾಸಿ ಮಾಡ್ತೀವಿ. ಇದು ನಿನ್ಗೆ ಒಪ್ಗೆ ತಾನೆ? ನೀನು ರಾತ್ರಿ ಆ ಮನೇಗೋಗೋವಾಗ ಕೈಯಾಗ ಬೆಂಕಿಪಟ್ಣ, ಇನ್ಯಾತರ್‍ದಾನ ಬೆಳಕು ಗಿಳಕು ಏನೂ ತಕ್ಕೊಂಡೋಗ್ಬಾರ್‍ದು— ಕತ್ಲಾಗೇ ಓಗ್ಬೇಕು, ಕತ್ಲಾಗೇ ಬರ್‍ಬೇಕು. ಇದ್ಮಾತ್ರ್ಕೊಡ್ಬೇಕು."

ಪುಟ್ಟಮಲ್ಲ—"ಸೈ. ಒಪ್ಗೇನೆ. ಇದೋ, ಬಾಸೆ ಮಾಡ್ತೀನಿ, ದೇವ್ರ ಎಸರ್ಮೇಗೆ."

ಸುಬ್ಬಯ್ಯ—"ಮಾತೇ ಬಾಸೆ ಇದ್ದಂಗೆ ನಂ ಪುಟ್ಟಮಲ್ಲನತ್ರ. ಗಂಡಸಂದ್ರೆ ಇಂಗಿರ್‍ಬೇಕಪ್ಪಾ! ಅದ್ಕೇ ಯಜಮಾನ್ರು ಯಾವಾಗ್ಲೂ ಯೋಳ್ತಿರೋದು—'ಛಾತಿ ಐತೋ ಪುಟ್ಟಮಲ್ಲಂಗೆ! ದಿಲ್ ಕಚ್ಚಾ ಅಲ್ಲ

ಅವನೂ'ಂತ. ಈ ಸಾರಿ ಬತ್ತದುಲ್ಲಿನ ಗೊಲ್ಸು ಆಕ್ತಾರಂತೆ, ಪುಟ್ಟಮಲ್ಲ, ನಿನ್ಕಾಲ್ಗೆ. ಬೆಂಗಳೂರ‍್ರೂ, ದಂಡೂ, ಎಳ್ಡಕ್ಕೂ ಸವಾಲ್ ನಿಂದು. ಆ ಕೃಪಾಶಿಂಗೂ ಒಂದ್ ಜಂಬಾ ಕೊಸ್ತಾನೇ ಕೊಸ್ತಾನೇ, ಪುಟ್ಟಮಲ್ಲಾ. ನೀನವನ್‌ಗಾನಾ ಈ ಸಾರಿ ಎತ್ತಿ ಕುಕ್ಬಿಡು. ವೊಟ್ಟೆತುಂಬಾ ಆಲ್ ಕುಡೀತೀವಿ ನಾವೆಲ್ಲಾರೂ, ನಿನ್ನೆಸರೇಳಿ. ಆಕ್ಲಿ ಯೆಜಮಾನ್ರೂನೂ ಮೀಸೇಮೇಲ್ ಕೈ."

ಚಿಕ್ಕರಂಗಪ್ಪ—"ಇನ್ನೇಳ್ರಪ್ಪಾ. ಸಳಿ ಜೋರಾಯ್ತು. ಅತ್ಗಂಟೆ ಒಡೀತೋ ಏನೋ."

ಎಲ್ಲರೂ ಎದ್ದು ಮನೇ ದಾರಿ ಹಿಡಿದೆವು.

ಮನೆಗೆ ಹೋಗುತ್ತಲೇ, ಆಯಿತು ಬೇಕಾದಷ್ಟು ಆಶೀರ್ವಾದ ನನಗೆ. ಇನ್ನುಮೇಲೆ ಹೊತ್ತುಮಾಡಿಕೊಂಡು ಬರೋದಿಲ್ಲಾಂತ ಆಣೆ ಇಟ್ಕೊಂಡೆ. ಆದ್ರೆ ಅದು ಆ ಹೊತ್ತಿಗೆ ಮಾತ್ರ. ಪುನಃ ಯಥಾಪ್ರಕಾರಾನೇ, ನಾಯಿಬಾಲ.

# ಆಷಾಢ ಬಹುಳ ಅಮಾವಾಸ್ಯೆ

ಆಷಾಢ ಬಹುಳ ಚತುರ್ಥಿ ದಿನವೇ ಮೇಲಿನ ಮಾತುಕತೆ ಎಲ್ಲಾ ನಡೆದು, ಪುಟ್ಟಸುಬ್ಬ ಒಪ್ಪಿಕೊಂಡದ್ದು. ಇದರಲ್ಲಿ ಮಾತಿಗೆ ತಪ್ಪುವವರು ಯಾರೂ ಇರಲಿಲ್ಲ. ಆ ರಾತ್ರಿಯೇ ಮನೆಗೆ ಬರುವಾಗ ಸುಬ್ಬಯ್ಯ ನನ್ನ ಹತ್ತಿರ ಕೈಮೇಲೆ ಕೈ ಹಾಕಿಸಿಕೊಂಡು, 'ಯಾರತ್ರದರ್ಗಲ್ಲೂ ಈ ಸುದ್ದಿ ಎತ್ಕೊಡ್ದು, ತಿಳಿಸ್ಕೊಡ್ಬ್ಯಾ'ಂತ ಭಾಷೆ ತೆಗೆದುಕೊಂಡ. ಸುಬ್ಬಯ್ಯ ಹೆದರಿಸಿಯೂಬಿಟ್ಟ ನನ್ನ—'ಈ ಸುದ್ದಿ ನಿನ್ನಿಂದಾಗಾನ ಏನಾದ್ರೂ ಹೊರಕ್ಬಂದ್ರೆ, ಹೂತೇ ಆಕ್ಬಿಡ್ತೇವೆ ನಿನ್ನಾ'ಂತ. ಸುಬ್ಬಯ್ಯನಲ್ಲಿ ನನಗೆ ವಿಶೇಷ ಗೌರವ ಇತ್ತು, ಹೆದರಿಕೆಯೂ ಇತ್ತು. ಸುಬ್ಬಯ್ಯ ಖದೀಮ. ಒಳ್ಳೇ ಮಾತಿಗೆ ಬಂದರೆ, ಅವನಂಥ ಒಳ್ಳೆಯ ಮನುಷ್ಯನೇ ಇಲ್ಲ. ತನ್ನ ಜೀವ ಬೇಕಾದರೂ ತೆರುತ್ತಿದ್ದ, ಸಮಯಕ್ಕೆ. ನ್ಯಾಯವಿಲ್ಲದ ಕಡೆ, ತನ್ನ ಜೀವಾನೇ ಆಗಲಿ ಅಥವಾ ಇತರರ ಜೀವಾನೇ ಆಗಲಿ, ಅವನಿಗೆ ಲೆಕ್ಕ ವಿಲ್ಲ. ಹೀಗಾಗಿ, ಸುಬ್ಬಯ್ಯ ಅಂದರೆ ನಮ್ಮ ಪೇಟೆಗೇ ಗೌರವ.

ಹತ್ತು ದಿನ ಕಳೆದೂ ಹೋಯಿತು. ಅಮಾವಾಸ್ಯೆ ಬಂದೇ ಬಂತು. ಅಮಾವಾಸ್ಯೆ ದಿನದ ಹಿಂದಿನ ದಿನವೇ, ಅಂದರೆ ಚತುರ್ದಶಿ ದಿನವೇ, 'ದಿನ-ವಾರ-ನಕ್ಷತ್ರ-ತಿಥಿ' ಹೇಳುವ ಒಬ್ಬ ಬ್ರಾಹ್ಮಣ ಬಂದು, ನನ್ನ ಅಜ್ಜಿಯ ಕೈಯಿಂದ ಅಕ್ಕಿ, ಬೇಳೆ, ತೆಂಗಿನಕಾಯಿ, ಬೆಲ್ಲ, ಬಾಳೇಹಣ್ಣು ಎಲ್ಲಾ ದಾನವಾಗಿ ಪಡೆದು, 'ನಾಳೆ ಭಾನುವಾರ, ಸಂಪೂರ್ಣ ಅಮಾವಾಸ್ಯೆ; ಮೂಲಾ ನಕ್ಷತ್ರ, ಸೂರ್ಯಗ್ರಹಣ; ಗ್ರಸ್ತ ಆರೂವರೆ ಗಂಟೆಗೆ, ಮೋಕ್ಷ ಒಂಬತ್ತೂಕಾಲು ಗಂಟೆಗೆ. ಶುದ್ಧಮಂಡಲ ದರ್ಶನ ಒಂಬತ್ತೂವರೆ ಗಂಟೆಗೆ. ಸ್ನಾನಮಾಡಿ ಅಡಿಗೆ ಮಾಡಬಹುದು, ಹತ್ತುಗಂಟೆಗೆ. ಧನುರ್ರಾಶಿಯುವರು ಖಂಡಿತ ಶಾಂತಿಮಾಡಿಕೊಳ್ಳಬೇಕು. ಅನಧ್ಯಯನ. ಕ್ರೂರದಿನಾ'ಂತ ಹೇಳಿಬಿಟ್ಟು ಹೋಗಿದ್ದ. ನಾನು ಹುಟ್ಟಿದ್ದು ಪೂರ್ವಾಷಾಢ ನಕ್ಷತ್ರ. ನನ್ನದು ಧನುರ್ರಾಶಿ. ಆ ದಿನ ನಮ್ಮ ತಂದೆಯವರು ಶಾಸ್ತ್ರಿಗಳನ್ನ ಕರೆಸಿ, ಮನೆಯಲ್ಲಿ ಆಯುಷ್ಯಹೋಮ, ನವಗ್ರಹ ಜಪ, ಹೋಮ, ಎಲ್ಲಾ ಮಾಡಿಸಿದರು, ನನಗಾಗಿ. 'ಈ ದಿನ ಮನೇಬಿಟ್ಟು

ಹೊರಗೆ ಹೋಗಕೂಡದು' ಎಂದು ಅಪ್ಪಣೆ ಆಗಿಹೋಯಿತು, ನನಗೆ. ನನಗೋ, ಅವತ್ತೆಲ್ಲಾ 'ಸುಬ್ಬಯ್ಯನ್ನ ಯಾವಾಗ ನೋಡ್ತೀನೂ? ಏನೆಲ್ಲಾ ಏರ್ಪಾಡು ನಡೆದಿದೇ'ಂಬೋ ಯೋಚನೆಯೇ ಹೊರತು, ಬೇರೆ ಏನೂ ಬೇಕಾಗಿರಲಿಲ್ಲ.

ಸಂಜೆ ಆಗುತ್ತಲೂ ಮೆಲ್ಲಗೆ ಅಜ್ಜಿಯನ್ನು ಪುಸಲಾಯಿಸಿ, 'ನನ್ ಸ್ನೇಹಿತ ಸೂರಿ ಮನೇಲಿ ಇಂಡಿಯಾ ಭೂಪಟ ಹೊಸ್ದಾಗಿ ತರ್ಸಿದ್ದಾರಂತೆ. ಪಕ್ಕದ್ಮನೇ ತಾನೇ—ನೋಡ್ಕೊಂಡ್ ಬಂದ್ಬಿಡ್ತೀನೆ ಅಜ್ಜೀ, ಹತ್ತೇ ನಿಮಿಷ್ದಲ್ಲೀ'ಂತ ಹೇಳಿ, ಮನೆಯಿಂದ ನುಣಿಚಿಕೊಂಡು, ನಾನು ಮಧ್ಯಾಹ್ನ ನಾಲ್ಕು ಗಂಟೆ ಮೇಲೆ ಸೂರಿಯ ಮನೆಗೆ ಹೋಗಿ ಭೂಪಠವನ್ನು ನೋಡಿಕೊಂಡು, ನೆಟ್ಟಗೆ ಸುಬ್ಬಯ್ಯನ ಮನೆಗೆ ಹೋದೆ.

ಸುಬ್ಬಯ್ಯ ಆಗತಾನೇ ಎಲ್ಲಿಯೋ ಹೊರಗೆ ಹೋಗಿದ್ದವನು ಮನೆಗೆ ಬಂದಿದ್ದ. ನನ್ನನ್ನು ನೋಡುತ್ತಲೂ 'ಕೆಂಡ'ವಾದ. ನಾನು ಕೇಳಿಕೊಂಡೆ—, 'ಸಿಟ್ಟುಮಾಡಬೇಡ, ಸುಬ್ಬಯ್ಯ, ನಾನ್ಯಾಗರ್ೂ ಬಾಯಿಬಿಟ್ಟಿಲ್ಲ ಸಮಾಚಾರಾನಾ'ಂತ. ಸುಬ್ಬಯ್ಯ ಹೇಳಿದ—'ಒಳ್ಳೇದು. ಎಲ್ಲಾ ಏರ್ಪಾಡಾಗೋಗ್ಯತೆ. ಬೆಳಿಗ್ಗ ಆಸ್ಕೂಟ್ಗೇ ನಿಂಮನೇ ಮುಂದೆ ಬರೋವಾಗ ತಿಳಿಸ್ತೀವಿ ಎಲ್ಲಾ ಸಮಾಸಾರಾನು. ಈಗ 'ಗಂ' ಅಂತ ಮನೇಗೋಗು' ಅಂದ.

ನೆಟ್ಟಗೆ ಮನೆಗೆ ಹೋದೆ. ನಾನು ಬೇಗ ಮನೆಗೆ ಬಂದದ್ದು ನೋಡಿ ನಮ್ಮಜ್ಜಿಗೆ ಬಹು ಸಂತೋಷವಾಯಿತು. ಆ ದಿನ ಮಧ್ಯಾಹ್ನ ಹೊತ್ತು ಹೋಗಿ ಊಟ ಮಾಡಿದ್ದರಿಂದ ರಾತ್ರಿ ಏನೂ ಊಟ ಮಾಡದೆ ಮಲಗಿಕೊಂಡೆ. ಯೋಚನೆಯೆಲ್ಲಾ ಸುಬ್ಬಯ್ಯನ ಮನೇಲಿ, ಆ ಹಾಳುಬಿದ್ದ ಮನೇಲಿ. ಏನು ಮಾಡಿದರೂ, ಹೇಗೆ ಹೇಗೆ ಮಲಗಿಕೊಂಡರೂ ನಿದ್ರೆ ಬರವೊಲ್ಲದು.

ನಮ್ಮ ಮನೆಯಲ್ಲಿ ಆಗ ಒಂದು 'ಬಿ—ಟೈಂಪೀಸ್' ಇತ್ತು. ಅದನ್ನು ತಲೆದೆಸೆಯಲ್ಲಿಟ್ಟುಕೊಂಡು, ಐದೈದು ನಿಮಿಷಕ್ಕೆ, ಹತ್ತು ಹತ್ತು ನಿಮಿಷಕ್ಕೆ ಒಂದೊಂದು ಸಲ ನೋಡುವುದಕ್ಕೆ 'ಷುರು.' ಮನೆಯವರೆಲ್ಲಾ ಮಲಗಿ, ದೊಡ್ಡವರು ಗೊರಕೆ ಹೊಡೆಯುವುದಕ್ಕೂ 'ಷುರು.'

ನನಗಂತೂ ನಿದ್ದೆಯೇ ಬರಲಿಲ್ಲ. ಗಡಿಯಾರದ 'ಟಿಕ್ ಟಿಕ್' ಎಲ್ಲಾ ಎಣಿಸಿದೆ.

ಹತ್ತು ಹೊಡೆಯಿತು . . . ಹನ್ನೊಂದೂ ಹೊಡೆಯಿತು.

* * * *

ನನ್ನ ಮನಸ್ಸಿನಲ್ಲಿ ಯೋಚನೆಗಳು ಮೊದಲಾದುವು . . .

ಇಷ್ಟು ಹೊತ್ತಿಗೆ ಎಲ್ಲರೂ ಸುಬ್ಬಯ್ಯನ ಮನೇಲಿ ಸೇರಿದ್ದಾರೆ. ಮಾತುಕತೆಗಳು ನಡೆದಿವೆ . . . ಅಗೋ, ಪುಟ್ಟಮಲ್ಲ ಹೊರಟ, ಸುಬ್ಬಯ್ಯನ ಮನೆಯಿಂದ. ಜೊತೇಲಿ ಸುಬ್ಬಯ್ಯ ಇದ್ದಾನೆ. ಇನ್ನೇನು, ನಮ್ಮ ಮನೆ ಮುಂದೇನೆ ನಡೆದ್ಹೋಗ್ತಾರೆ . . . ನಡೆದ್ಹೋಗುವ ಶಬ್ದ ಕೇಳಿ ಬರ್‍ತಿದೆ. ಹೆಜ್ಜೆಗಳು ಹತ್ರಹತ್ರ ಬರ್‍ತಿವೆ. ಅದೋ, ಅವರೇ ನಡೆದ್ಹೋಗ್ತಿದ್ದಾರೆ. ನನಗೆ ಚೆನ್ನಾಗಿ ಕೇಳಿಬರ್‍ತಿದೆ . . . . ಅದೋ, ಮನೆ ದಾಟಿ ಮುಂದಕ್ಹೋದ್ರು . . . ಹೋದ್ರು . . . ಹೋದ್ರು . . . ಈಗ ಹೆಜ್ಜೆ ಸದ್ದು ಕೇಳ್ತಿಲ್ಲ . . .

ಇನ್ನೈದು ನಿಮಿಷ . . . ಇಷ್ಟು ಹೊತ್ತಿಗೆ ಆಂಜನೇಯನ ದೇವಸ್ಥಾನದ ಬಳಿಗೆ ಬಂದಿದ್ದಾರೆ. ಪುಟ್ಟಮಲ್ಲ ತನ್ನ ಕೈಯಲ್ಲಿ ತಂದಿದ್ದ ತೆಂಗಿನಕಾಯನ್ನು ಇಗೋ ಈಗ ಒಡೆಯುತ್ತಿದ್ದಾನೆ. ಕರ್ಪೂರ ಹಚ್ಚಿದ, ಕೈಮುಗಿದ, ಕಣ್ಮುಚ್ಚಿದ, ಧ್ಯಾನಮಾಡಿದ . . .

ಮುಂದಕ್ಕೆ ಹೊರಟ. ಜೊತೇಲಿ ಸುಬ್ಬಯ್ಯ ಇದ್ದಾನೆ . . .

ಕಮಲಾಛತ್ರದ ಹತ್ತಿರಕ್ಕೆ ಹೋಗುತ್ತಿದ್ದಾರೆ. ಸುಬ್ಬಯ್ಯ ಧೈರ್ಯ ಹೇಳುತ್ತಿದ್ದಾನೆ . . .

ಇಗೋ, ಕಮಲಾಛತ್ರದ ಹತ್ತಿರ ನಿಂತುಕೊಂಡು ಇಬ್ಬರೂ ಮಾತಾಡುತ್ತಿದ್ದಾರೆ. ಪುಟ್ಟಮಲ್ಲ ಸುಬ್ಬಯ್ಯನ ಕೈಯಿಂದ ಮೊಳೆಗಳನ್ನ ತೆಗೆದುಕೊಳ್ಳುತ್ತಿದ್ದಾನೆ . . .

ಹನ್ನೆರಡು ಗಂಟೆಗೆ ಆರೇ ನಿಮಿಷ ಇದೆ, ಅಷ್ಟೆ . . .

ಸುಬ್ಬಯ್ಯ ಹೇಳುತ್ತಿದ್ದಾನೆ– 'ಪುಟ್ಟಮಲ್ಲ, ನಾನಿಲ್ಲೇ ಕಾದಿರ್‍ತೇನೆ. ಬೇಗ ಮೊಳೆಗಳ್ನ ಹೊಡೆದು ಬಂದುಬಿಡು. ನರಸಿಂಹ ದೇವರನ್ನ

ಧ್ಯಾನಮಾಡ್ತಾ ಹೋಗು. ಇಗೋ, ನಿನ್ನೆತ್ತೀಲಿ ಆಂಜನೇಯನ ಭಂಡಾರಾನೂ ಇದೆ. ಕುತ್ತಿಗೆ ತಾಬೀಜಿನಲ್ಲಿ ಆಂಜನೇಯನೇ ಇಧಾನೆ. ಯಾವ ಭಯಾ ತಾನೇ ಏಕೆ? ನಿನ್ನ ಕೂದಲು ಅಲ್ಲಾಡೋಲ್ಲ. ಬೇಗನೆ ಬಂದ್ಬಿಡು, ನಾನಿಲ್ಲೇ ಕಾದಿರ್ತೀನೇ'ಂತ . . .

ಹೊರಟ, ಪುಟ್ಟಮಲ್ಲ, 'ಜೈ ಹನುಮಾನ್!' ಅನ್ನುತ್ತಾ. ಕಮಲಾ ಛತ್ರದ ಪಕ್ಕದ ಓಣೀಲಿ ಹೊರಟ . . .

ಕೆರೇ ಏರಿಮೇಲೆ ಹೋಗೋದಕ್ಕೆ ಮೆಟ್ಲು ಹತ್ತುತ್ತಿದ್ದಾನೆ . . . ಹತ್ತಿದ . . . ಹೊರಟ, ಬಲಕ್ಕೆ ತಿರುಗಿಕೊಂಡು . . . ಸೀರುಪುಚ್ಚೀಕಾಯಿ ಗಿಡಗಳನ್ನ ದಾಟಿಹೋದ . . . ಗೋಣೀಮರದ ಹತ್ತಿರಕ್ಕೆ ಬಂದ . . . ಬಲಕ್ಕೆ ತಿರುಗಿದ . . .

ಇದೋ ಹನ್ನೆರಡು ಗಂಟೆ. ಕತ್ತಲೋ ಕತ್ತಲು. ತುಂಬಿದ ಅಮಾವಾಸ್ಯೆ. ಮಧ್ಯರಾತ್ರಿ. ಆ ದಾರಿಯಲ್ಲಿ ಒಂದು ಲಾಂದ್ರದ ಕಂಬವೂ ಇಲ್ಲ. ಸಾಲದ್ದಕ್ಕೆ ನಕ್ಷತ್ರಗಳ ಬೆಳಕೂ ಇಲ್ಲ. ತುಂಬ ಮೋಡ ಮುಚ್ಚಿಕೊಂಡಿದೆ. ಎದುರಿಗೆ ಏನಿದೆ, ಏನಿಲ್ಲ – ತಿಳಿಯುವುದು ಕಷ್ಟ. ನೆಪ್ಪಿನ ಮೇಲೆ ಹೆಜ್ಜೆಯಿಟ್ಟುಕೊಂಡು ಹೋಗಬೇಕು. ದಾರಿಯಲ್ಲಿ ಬೇಕಾದಷ್ಟು ಹಾವುಗಳಿವೆ, ಕ್ರಿಮಿಕೀಟಗಳಿವೆ. ದಾರಿಯನ್ನು ಬಿಟ್ಟು ಸ್ವಲ್ಪ ಆಚೆ ಈಚೆ ಹೋದರೆ ಲಾಂಟಾನಾ, ನಾಗಕತ್ತಾಳಿ ಪೊದೆಗಳು. ಜೊತೆಗೆ ಎಂದೂ ಇಲ್ಲದಷ್ಟು ಗಾಳಿ, ಮನುಷ್ಯನನ್ನೇ ತೂರಿಕೊಂಡು ಹೋಗುವಷ್ಟು ಬಿರುಸಾಗಿ ಬೀಸುತ್ತಿದೆ . . .

ನೆಪ್ಪಿನ ಮೇಲೆ ಹೆಜ್ಜೆಯಿಟ್ಟುಕೊಂಡು ಹೋಗುತ್ತಿದ್ದಾನೆ, ಪುಟ್ಟಮಲ್ಲ. ಯಮಗುಂಡಿಗೆ ಪುಟ್ಟಮಲ್ಲನದು. ಆಂಜನೇಯ ಅವನ ಎದೆಯಲ್ಲೇ ಕುಳಿತಿದ್ದಾನೆ. ಮತ್ತೆ ಭಯವೆಂದರೆ ಏನು!? . . .

ಹಾಳುಮನೆಯನ್ನು ಸೇರಿಯೇಬಿಟ್ಟ!

ಬೀದಿಯ ಕಡೆಗೆ ಇರುವ ಎರಡು ಮೆಟ್ಟಿಲುಗಳನ್ನು ಹತ್ತಿದ, ಒಂದೊಂದಾಗಿ. ನಾಲ್ಕು ಮೆಟ್ಟಿಲುಗಳು. ಮುಂದಕ್ಕೆ ಕಾಲಿನಿಂದ ತಡವರಿಸಿ ನೋಡಿ, ಇನ್ನು ಮೆಟ್ಟಿಲುಗಳು ಇಲ್ಲ ಎಂದು ನಿರ್ಧರಿಸಿದ . . . ಕಾಲಿನಲ್ಲಿ ಚಡಾವು ಮೆಟ್ಟಿದ್ದಾನೆ . . .

ಪಡಸಾಲೆಯೊಳಕ್ಕೆ ಹೋದ. ಕೈಯಿಂದ ತಡವರಿಸಿ ಗೋಡೆಯನ್ನು ಮುಟ್ಟಿದ . . .

ಬೀದಿಯ ಕಡೆಯ ಕೋಣೆಯ ಬಾಗಿಲನ್ನು ಹುಡುಕುತ್ತಿದ್ದಾನೆ. ಸಿಕ್ಕಿತು ಬಾಗಿಲು. ಒಳಕ್ಕೆ ಹೋದ . . .

ಗಾಳಿ 'ಸುಯ್ಯೋಂ' ಎಂದು ಬೀಸುತ್ತಿದೆ. ಪುಟ್ಟಮಲ್ಲ ಹಾಕಿಕೊಂಡಿದ್ದ ಷರಟು 'ಪಟಪಟ' ಬಡಿಯುತ್ತಿದೆ. ಎದೆ ಮಾತ್ರ ಶಾಂತವಾಗಿದೆ. ಯಾವುದೋ ಒಂದೆರಡು ಮುರುಕಲು ಕಿಟಿಕಿ ಬಾಗಿಲು ರಪರಪನೆ ಬಡಿದುಕೊಳ್ಳುತ್ತಿವೆ. ನೂರಾರು ಸಾವಿರಾರು ಕಪಟದ ಹಕ್ಕಿಗಳು ಪುಟ್ಟಮಲ್ಲ ಒಳಕ್ಕೆ ಬಂದದ್ದನ್ನು ನೋಡಿ, 'ಕೀಚ್ ಕೀಚ್' ಶಬ್ದ ಮಾಡುತ್ತಾ, ರೆಕ್ಕೆಗಳನ್ನು ಬಡಿಯುತ್ತಾ ಆಚೆ ಈಚೆ ಹಾರಾಡುತ್ತಿವೆ. ಮನೆಯ ಮೇಲೆಯೋ ಅಥವಾ ಎದುರಿನ ಹುಣಿಸೇಮರದ ಮೇಲೆಯೋ 'ಕಿಚಕಿಚ' ಎಂದು ಹಾಲಕ್ಕಿಗಳ ಕೂಗು . . .

ಈ ಭೀಕರ ರಾತ್ರಿಯಲ್ಲಿ, ಅತಿಭೀಕರ ಸನ್ನಿವೇಶದಲ್ಲಿ, ಪುಟ್ಟಮಲ್ಲ ಒಂದು ಮೊಳೆಯನ್ನು ಕೈಸುತ್ತಿಗೆಯಿಂದ ಗೋಡೆಗೆ ಹೊಡೆಯುತ್ತಿದ್ದಾನೆ.

ಥಪ್—ಥಪ್! . . . ಥಪ್—ಥಪ್! . . .

ಎರಡು ನಿಮಿಷ ಆಯ್ತು . . . ಐದು ನಿಮಿಷ ಆಯ್ತು . . .

ಥಪ್—ಥಪ್! . . . ಥಪ್—ಥಪ್! . . .

ಇದೇನು, ಒಂದು ಮೊಳೆ ಹೊಡೆಯುವುದಕ್ಕೆ ಐದು ನಿಮಿಷವೇ! . .

ಇನ್ನೇನು ಮುಗಿಯಿತು . . .

ಇಲ್ಲ! ಮುಗಿಯಲೇ ಇಲ್ಲ! . . .

ಇನ್ನೂ . . . ಥಪ್—ಥಪ್! . . . ಥಪ್—ಥಪ್! . . .

ಇದೇನು, ಹತ್ತು ನಿಮಿಷವಾದರೂ ಇನ್ನೂ ಒಂದೇ ಮೊಳೆ ಹೊಡೆಯುತ್ತಾ ಇದ್ದಾನೆ, ಪುಟ್ಟಮಲ್ಲ!

* * * *

ಅಷ್ಟರಲ್ಲಿ ನನ್ನ ಅಜ್ಜಿಗೆ ಎಚ್ಚರವಾಗಿ, "ಯಾಕೋ ವೆಂಕಟೇಶ, ಇನ್ನೂ ನಿದ್ದೇನೆ ಮಾಡ್ಲಿಲ್ಲ? ದೀಪ ಅಷ್ಟು ದೊಡ್ಡದು ಮಾಡಿಟ್ಕೊಂಡ್ರೆ ನಿದ್ರೆ ಬರುತ್ತೇನೊ? ಸಣ್ಣದು ಮಾಡಿ, ದೂರ ಇಟ್ಟು, ರಾಮಾ ಕೃಷ್ಣಾ

ಅಂತ ಮಲಕ್ಕೊಳ್ಳೋ'ಂದ್ರು. ಪುಟ್ಟಮಲ್ಲನ ಜತೆಯಲ್ಲೇ ಹೋಗಿದ್ದ ನನ್ನ ಒಳಜೀವ ತತ್‌ಕ್ಷಣ ನನ್ನಲ್ಲಿ ಬಂದು ಸೇರಿಕೊಂಡಿತು. ನಾನು—'ಏನೂ ಇಲ್ಲ ಅಜ್ಜಿ. ಯಾಕೋ ನಿದ್ದೆ ಬರ್‍ಲಿಲ್ಲ. ಕತೆ ಓದ್ತಾ ಇದ್ದೆ' ಅಂದೆ. ಅಜ್ಜಿ ಅಂದಳು—'ಕಣ್ಣು ಮುಚ್ಚಿ ಮಲಗಿಕೋಪ್ಪಾ. ಅರ್ಧ ರಾತ್ರಿ ಹೊತ್ತು. ಕೆಟ್ಟ ಗಾಳಿಗಳು ಸಂಚಾರ ಮಾಡೋ ಹೊತ್ತು. ಅಮಾವಾಸ್ಯೆ ಕೆಟ್ಟದಿನ.' ನಾನು ದೀಪ ಚಿಕ್ಕದು ಮಾಡಿ, ದೂರ ಇಟ್ಟು, ಅಜ್ಜಿ ಹೇಳಿದ ಹಾಗೆ ಕಣ್ಮುಚ್ಚಿ ಮಲಗಿಕೊಂಡೆ . . .

ಆದರೂ ಪುಟ್ಟಮಲ್ಲ ಇನ್ನೂ ಮೊಳೆ ಹೊಡೀತಾನೇ ಇದ್ದ: ಥಪ್—ಥಪ್ ! . . . ಥಪ್—ಥಪ್ ! . . . ಶಬ್ದ ನಿಲ್ಲಲೇವೊಲ್ಲದು.

ಆಗ ನನ್ನಜ್ಜಿ ನನ್ನ ಬಳಿಗೆ ಎದ್ದುಬಂದು, "ಯೇನೋ ಮಗೂ, ಏನೇನೋ ಕನವರಿಸುತ್ತಿದ್ದೀ? ಭಯಬಿದ್ದಹಾಗೆ ಕಾಣ್ತೀಯಲ್ಲೋ! ತಾಳು, ನಾನು ನಿನ್ಹತ್ರಲೇ ಹಾಸಿಗೆ ಎಳ್ಕೋತೀನೆ. ನಿಮ್ಮ ತಂದೇನ ಎಬ್ಬಿಸಲೇನೋ?' ಎಂದು ಕೇಳಿದಳು. ನಾನು 'ಸುಮ್ನಿರು, ಅಜ್ಜಿ. ನಾನು ಕನವರಿಸಲೂ ಇಲ್ಲ, ನೆನವರಿಸಲೂ ಇಲ್ಲ. ಏಕೋ ನಿದ್ರೆ ಬರ್‍ಲಿಲ್ಲ ಅಷ್ಟೆ.' ಅಂದೆ. ಪಕ್ಕಕ್ಕೆ ಹೊರಳಿ ಮಲಗಿಕೊಂಡೆ . . .

ಆದರೆ ಅದೇ 'ಥಪ್—ಥಪ್ ! . . . ಥಪ್—ಥಪ್ ! . . .' ನಿಲ್ಲಲೇ ಇಲ್ಲ, ಪುಟ್ಟಮಲ್ಲ ಮೊಳೇ ಹೊಡೀತಿರೋ ಶಬ್ದ.

ಆಗ ನನಗೊಂದು ಯೋಚನೆ ಮೊದಲಾಯಿತು. ನಾನು ಮಲಗಿರುವ ಸ್ಥಳಕ್ಕೂ ಆ ಹಾಳು ಬಿದ್ದಿರುವ ಮನೆಗೂ ಏನಿಲ್ಲವೆಂದರೂ ಒಂದು ಮೈಲಿ ದೂರದ ಮೇಲಾಗುವುದು. ಪುಟ್ಟಮಲ್ಲ ಆ ಮನೆಯಲ್ಲಿ ಮೊಳೆ ಹೊಡೆಯುತ್ತಿದ್ದ ಶಬ್ದ ಇಲ್ಲಿಗೆ ಹೇಗೆ ಕೇಳಿಬರುತ್ತಿದೆ? ನನಗೆ ಬಹು ಆಶ್ಚರ್ಯವಾಯಿತು.

ಹೊರಳಿ, ಎದೆ ಮೇಲಾಗಿ ಮಲಗಿಕೊಂಡೆ. ಅಕಸ್ಮಾತ್ತಾಗಿ ನನ್ನ ಬಲಗೈ ನನ್ನೆದೆಯ ಮೇಲಕ್ಕೆ ಹೋಗಿ, ಸ್ವಲ್ಪ ಹೊತ್ತು ಅಲ್ಲೇ ಇತ್ತು. ಥಫ್‌ಥಫ್ ಅಂತ ಬಡಿದುಕೊಳ್ಳುತ್ತಿದ್ದುದು ನನ್ನ ಎದೆ! ನನ್ನ ಕೈಕಾಲು ನಡುಗುತ್ತಿದ್ದುದು ತಿಳಿದುಬಂತು. ಕಣ್ಣು ಮುಚ್ಚಿದರೆ ಸಾಕು, ಭೀಕರವಾದ ವಿಕಾರವಾದ ಕನಸುಗಳು. ಎಲ್ಲೆಲ್ಲೂ ರಾಕ್ಷಸರೇ, ಭೂತಗಳೇ,

ಪಿಶಾಚಿಗಳೇ! ತೊಟ್ಟಿಲು ತೂಗುತ್ತಿರುವ ಪಿಶಾಚಿಗಳು! 'ಲಾಲಿ' ಹಾಡು ಹಾಡುತ್ತಿರುವ ಪಿಶಾಚಿಗಳು! ತೊಟ್ಟಿಲು ಹಗ್ಗ ಬಿಚ್ಚಿಕೊಂಡು ಉಯ್ಯಾಲೆಯ ಕೊಕ್ಕೆಗಳಿಗೆ ಹಗ್ಗ ಕಟ್ಟಿ, ಅದನ್ನು ತಮ್ಮ ಕುತ್ತಿಗೆಗೆ ನೇಣು ಹಾಕಿಕೊಳ್ಳುತ್ತಿದ್ದ ಪಿಶಾಚಿಗಳು! ಆ ನೇಣು ಹಾಕಿಕೊಂಡ ಪಿಶಾಚಿಗಳನ್ನು ಇತರ ಪಿಶಾಚಿಗಳು ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಉಯ್ಯಾಲಾಡಿಸುತ್ತಾ 'ಲಾಲಿ' ಹೇಳುತ್ತಿದ್ದ ಪಿಶಾಚಿಗಳು! ಆ ಗೋವಿಂದ ಶೆಟ್ಟಿ ಬಾವಿಯಲ್ಲಂತೂ ನೂರಾರು ಪಿಶಾಚಿಗಳು ನೀರಿನೊಳಕ್ಕೆ 'ಧಡಾರ್' ಅಂತ ಧುಮುಕೋದು! ತಿರುಗೀ ನೀರಿನಿಂದ ಮೇಲಕ್ಕೆದ್ದು ಬರೋದು, ತಿರುಗೀ ಬಾವಿಗೆ ಧುಮುಕೋದು! ಬೇಡಪ್ಪಾ ಬೇಡ ಆಗಿಹೋಯಿತು ನನ್ನ ಜೀವ.

ರಾತ್ರಿಯೆಲ್ಲಾ ನಮ್ಮ ತಂದೆಯವರು ನನ್ನ ಹಾಸಿಗೆಯ ಬಳಿ ಕುಳಿತು 'ರುದ್ರ' ಹೇಳುತ್ತಿದ್ದರಂತೆ.

* * * *

ಹೇಗೋ ಬೆಳಗಾಯಿತು. ಏಳುವುದಕ್ಕೆ ಹೋಗುತ್ತೇನೆ—ತಲೆ ಗಿರ್ರೆಂದು ಸುತ್ತುತ್ತಿದೆ. ಎದೆಯಲ್ಲಿ ಏನೋ ಸಂಕಟ. ಅಜ್ಜಿ ಬಂದು, 'ಯಾಕೋ? ಹುಷಾರಾಗಿಲ್ವೇನೋ? ರಾತ್ರಿಯೆಲ್ಲಾ ಅದೇನೇನೋ ಪೇಚಾಟ ನಿಂದು? ಎಲ್ಲೆಲ್ಲೋ ತಿರಗ್ತೀಯಪ್ಪ, ಎಲ್ಲೆಲ್ಲೋ ಅಲೀತಿ. ಸಂಜೆ ಆಗುತ್ಲೂ ಮನೇಗೆ ಬರೋಲ್ಲ. ಏನಾದರೂ ಕಂಡು ಹೆದರ್ಕೊಂಡ್ಯೇನೋ?' ಅಂತ ಕೇಳಿದ್ಳು. ನಾನು ಕಳ್ಳನ ಹಾಗೆ ನಗುತ್ತಾ, 'ಏನೂ ಇಲ್ಲ. ಇದೋ ಎದ್ದೆ. ಟಿಫಿನ್ ಏನ್ಮಾಡಿಟ್ಟಿದ್ದೀಯಾ?' ಅಂತ ಕೇಳ್ದೆ. 'ದೋಸೆ' ಅಂತ ಉತ್ತರ ಬಂತು, ಹಾರಿಹೋಯಿತು ಎಲ್ಲಾ ಸುಸ್ತೂ, ತಲೆ ತಿರುಗೋದು ಎಲ್ಲಾ. ಎದ್ದು ಹಲ್ಲುಜ್ಜಿ, ಮುಖವನ್ನು ತೊಳೆದು, ಸ್ನಾನಮಾಡಿ, ಉಪಾಹಾರ, ಕಾಫಿ, ಹೊಟ್ಟೆಗೆ ಬಿದ್ಮೇಲೆ, ಯಥಾಪ್ರಕಾರ ಆಗಿಹೋಗಿಬಿಟ್ಟೆ ನಾನು.

ಆಗ ಸುಮಾರು ಏಳುಗಂಟೆ. 'ಇದ್ಯಾಕೆ? ಸುಬ್ಬಯ್ಯ ಎಲ್ಲಾ ಹೇಳ್ತೇನೆ ಅಂದೋನು ಇನ್ನೂ ಬರ್ಲೇ ಇಲ್ವಲ್ಲಾ? ಬಹುಶಃ ಮರೆತು ಬಿಟ್ಟನೋ ಏನೋ, ಅಲ್ಲೇ ಹೋಗಿ ಪುಟ್ಟಮಲ್ಲನ ಬಂಗಾರದ ತೋಡಾ

ಆದ್ರೂ ನೋಡ್ಕೊಂಡೇ ಬರೋಣ. ಸುಬ್ಬಯ್ಯನ ಮನೆಗೆ ಹೋದರೆ ಸರಿ' ಅಂದುಕೊಂಡು, ಮನೇಗೇಟು ದಾಟಿ ಬೀದಿಯ ಬಳಿಗೆ ಬಂದೆ.

ಯಾರೋ ಮೇಲ್ಬೀದಿಯಿಂದ ಇಬ್ಬರು ಹೆಂಗಸರು ನಮ್ಮ ಮನೇ ಮುಂದೇನೇ ಓಡಿಹೋದರು. ಹೆಂಗಸರು ಓಡಿಹೋಗುವುದು ಬಹು ಅಪರೂಪ. ಅಷ್ಟರಲ್ಲಿ ಇನ್ನಿಬ್ಬರು ಗಂಡಸರೂ ಇನ್ನೊಬ್ಬ ಹೆಂಗಸೂ ಓಡಿಹೋದರು. ಏಕೋ? ಏನೋ? ಯಾರನ್ನು ಕೇಳುವುದು?

ಮೇಲಿನಿಂದ ಚಿಕ್ಕನರಸಿಂಹಯ್ಯನ ಮಗ ನಾರಾಯಣಿ ಓಡಿ ಬರ್ತಿದ್ದ. ನನಗೆ ಅವನ ಪರಿಚಯ ಚೆನ್ನಾಗಿತ್ತು. ಹತ್ತಿರ ಬರುತ್ತಲೇ ಕೇಳಿದೆ—'ನಾರಾಯ್ಣೀ! ನಾರಾಯ್ಣೀ! ಏಕೋ? ಏನೋ? ಏಕ್ ಓಡ್ತಾ ಇದ್ದೀ? ಜನಗಳೆಲ್ಲಾ ಎಲ್ಲಿಗೆ ಓಡ್ತಾ ಇದ್ದಾರೋ?" ಅಂತ.

ನಾರಾಯಣಿ ಅಂದ—'ಅಯ್ಯೋ! ತಿಳಿದಿಲ್ವಾ ನಿನ್ಗೆ? ಪುಟ್ಟಮಲ್ಲ! ಪುಟ್ಟಮಲ್ಲಪ್ಪಾ! ಒಂಟೋದ್ನಂತಪ್ಪಾ! ಆ ಆಳ್ಮನೇಲಿ ಸತ್ತೋಗಿ ದಾನಂತಪ್ಪಾ! ಅದ್ಕೆ ಎಲ್ಲಾ ಓಡೋಗ್ತಿದಾರೆ! ಬಾ, ಓಗೋಣಾ' ಅಂತಂದ.

ಏನು ಮಾಡುತ್ತಿದ್ದೇನೆ ಎಂಬ ವಿವೇಚನೆಯೇ ಇಲ್ಲದೆ, ನಾನೂ ಓಡಿದೆ ನಾರಾಯಣಿಯ ಜತೆಯಲ್ಲಿ.

ಊರಿಗೆ ಊರೇ ಓಡಿಬರುತ್ತಿತ್ತು. ನಮ್ಮ ಹಿಂದೆ, ನಮ್ಮ ಮುಂದೆ, ಗಂಡಸರೂ ಹೆಂಗಸರೂ ಹುಡುಗರೂ ಮಕ್ಕಳೂ ಎಲ್ಲರೂ ಓಡಿಬಂದರು. ಕೆರೆಕಟ್ಟೆಯೆಲ್ಲಾ ತುಂಬಿಹೋಗಿತ್ತು ಜನ. ಎಳ್ಳು ಚೆಲ್ಲಿದರೆ ನೆಲಕ್ಕೆ ಬೀಳದಷ್ಟಿತ್ತು ಜನ.

ಆಗ ಸುಮಾರು ಎಂಟುಗಂಟೆ. ಹೇಗೋ ನೂಕಿಕೊಂಡು ನುಣಿಚಿ ಕೊಂಡು ಆ ಹಾಳುಮನೇ ಹತ್ತಿರ ನೇರಿದೆವು.

ಯಜಮಾನರು ಒಂದು ಕಡೆ ನೆಲದ ಮೇಲೆ ಕುಳಿತುಕೊಂಡು, ಎರಡು ಕೈಗಳಿಂದಲೂ ತಲೆಯನ್ನು ಹಿಡಿದುಕೊಂಡು. ಅಧೋವದನರಾಗಿ ಕುಳಿತಿದ್ದಾರೆ, ಕಣ್ಣುಗಳಲ್ಲಿ ನೀರು. ಸುತ್ತಲೂ ನಾಲ್ಕಾರು ಸ್ನೇಹಿತರು ಕುಳಿತಿದ್ದಾರೆ ಅವರ ಕಣ್ಣುಗಳಲ್ಲೂ ನೀರು. . . . ಹಾಳುಮನೆಯ ಬಾಗಿಲ ಬಳಿ ಒಬ್ಬ ವಯಸ್ಸಾದ ಹೆಂಗಸು ನೆಲದ ಮೇಲೆ ಬಿದ್ದಿದ್ದಾಳೆ.

ನಡುನಡುವೆ ಎದ್ದು ಕುಳಿತುಕೊಳ್ಳುತ್ತಾಳೆ. ಆಕಾಶವನ್ನು ನೋಡಿ ಅಳುತ್ತಾಳೆ. ಆಕೆಯ ಜೊತೆಯಲ್ಲಿ ಎಂಟು ಹತ್ತು ಸಮವಯಸ್ಸಿನ, ಹೆಚ್ಚು ವಯಸ್ಸಿನ ಹೆಂಗಸರು ಅಳುತ್ತಿದ್ದಾರೆ. ಬಿದ್ದಿರುವ ಹೆಂಗಸನ್ನು ಎತ್ತಿ ಕೂಡಿಸುತ್ತಾರೆ. ಎಲ್ಲರ ಮುಖಗಳಲ್ಲೂ ದುಃಖ ತುಂಬಿದೆ. ನೆಲದ ಮೇಲೆ ಬಿದ್ದು ಬಿದ್ದು ಅಳುತ್ತಿದ್ದಾಕೆಯೇ ಪುಟ್ಟಮಲ್ಲನ ತಾಯಿ. ಆಕೆ ಸಂಕಟಪಡುವುದು ನೋಡುವುದಕ್ಕೆ ಬಹು ಘೋರವಾಗಿದೆ. . . .ಮನೆ ಮೆಟ್ಟಲುಗಳ ಮೇಲೆ—ಒಂದು ಕೊನೆಯಲ್ಲಿ ಸುಬ್ಬಯ್ಯ, ತಿಮ್ಮಪ್ಪ, ಚಿಕ್ಕರಂಗಪ್ಪ ಮೂವರೂ ಕೂತಿದ್ದಾರೆ. ಪಕ್ಕದಲ್ಲಿ ಇಬ್ಬರು ಪೋಲೀಸ್ ಕಾನ್ಸ್ಟೇಬಲರು. ಇಬ್ಬರು ಪೋಲೀಸ್ ಇನ್ಸ್‌ಪೆಕ್ಟರುಗಳು ಆಚೆಕೊನೆ ಯಲ್ಲಿ ಏನೇನೋ ಮಾತನಾಡುತ್ತಿದ್ದಾರೆ ಒಬ್ಬ ಕಾನ್ಸ್ಟೇಬಲ್ ಮೆಟ್ಟಲುಗಳ ಬಳಿ ಲಾಠಿಯನ್ನು ಹಿಡಿದು ನಿಂತಿದ್ದಾನೆ. ಒಳಕ್ಕಾಗಲಿ ಮೆಟ್ಟಲಿನ ಮೇಲಕ್ಕಾಗಲಿ ಯಾರನ್ನೂ ಬಿಡುವಂತೆಯೇ ಇಲ್ಲ. ಬಹುಶಃ ದೊಡ್ಡ ಆಫೀಸರುಗಳು ಇನ್ನೂ ಬಂದಿಲ್ಲವಾಗಿ ಕಾಯುತ್ತಿರ ಬಹುದು.

ಪುಟ್ಟಮಲ್ಲನ ತಾಯಿ, ಹತ್ತುನಿಮಿಷಕ್ಕೆ ಒಂದೊಂದು ಸಲ 'ಅಯ್ಯೋ ಪುಟ್ಟಮಲ್ಲಾ! ಅಯ್ಯೋ ಪುಟ್ಟಮಲ್ಲಾ! ಬಾಪ್ಪಾ! ಬಾರೋ! ಎದ್ದು ಬಾರೋ! ನಿನ್ನೆಣ್ತಿ ಲಕ್ಸ್ಮೀ ಬಂದೌಳೋ! ಅಳತಾ ಔಳೋ! ಬಾರೋ ಮಗನೇ! ಇನ್ನೊತ್ತೇ ದಿನಕ್ಕಿತ್ತಲ್ಲೋ ನಿನ್ ನೋಬಣ! ಆ ಸಂತೋಸಾ ನಾವ್ಯಾರೂ ನೋಡ್ಕೂಡ್ದೂಂತ ಓಗ್ಬಿಟ್ಟೇನೋ! ಇನ್ನೆಂಗೆ ಮನೆ ತುಂಬಿಸ್ಕೊಳ್ಳೋ ನೊಸೇನ? ಲಕ್ಸ್ಮೀ ಅಂಗೌಳಲ್ಲೋ, ಇನ್ನೆಂಗೆ ನೋಡ್ತಾ ಇರ್‍ಲೋ! ಅಪ್ಪಾ! ಮಸಾಣಾ ಆಗೋಯ್ತಲ್ಲೋ ನಿನ್ನಮನೆ! ಸಿವ್ನೇ! ನನ್ ಭಾಗ್ಯಾನ ಯಾಕ್ಕಿತ್ಕೊಂಡೆ? ನಿನ್ನ ದಿನಾನಿತ್ಯ ಪೂಜೆ ಮಾಡ್ತಿದ್ನಲ್ಲೋ ಪುಟ್ಟಮಲ್ಲ! ನಿನ್ನ ಪೂಜೆಮಾಡ್ದೆ ಮನೇಯಿಂದಾಚೆ ಒರಡ್ತಿರ್‍ಲಿಲ್ವಲ್ಲೋ ಸಿವನೇ! ನನ್ ತಾಳಿ ಕಿತ್ಕೊಂಡಿದ್ದೂ ಸಾಲ್ದೆ, ನನ್ ವಂಸಾನೂ ನಿರ್ಮೂಲ ಮಾಡಿದೆಲ್ಲೋ! ಸಿವನೇ! ನಿಂಗ್ ಮಕ್ಳಿಲ್ವಾ? ಎಣ್ತಿ ಇಲ್ವಾ? ಅವ್ರಿಗೆ ನನ್ಸಂಕ್ಟ ಬರಾಕಿಲ್ವಾ! ಅವ್ರೂ ನನ್ನಂಗಾಗಾ ಕಿಲ್ವಾ? ನನ್ಬಿಟ್ಬಿಟ್ಟು ಅವನ್ನ ಕಿತ್ಕೊಂಡ್ಯಲ್ಲೋ! ನನ್ಹೊಟ್ಟೆ ಉರಿದ

ಹಾಗೆ ನಿನ್‌ಹೊಟ್ಟೇನೂ ಉರಿಯಾಕಿಲ್ವಾ!' ಅಂತ ಕಲ್ಲೂ ಕರಗುವ ಹಾಗೆ ಆಕೆ ಅಳುತ್ತಿದ್ದಳು.

ಪುಟ್ಟಮಲ್ಲ ಹೇಗೆ ಸತ್ತ ಎಂಬೋದನ್ನ ಯಾರನ್ನ ಕೇಳೋದು? ಕೆಲವರು ಹೇಳುತಾರೆ ಅಲ್ಲಲ್ಲೆ—'ದೆವ್ವ ಕತ್ತಿವಿಚಾಕ್ಬಿಟ್ಟೈತೋ'ಂತ, 'ಮೊಳೇನ ಸುತ್ಗೇಯಿಂದ ತಲೇವಳೀಕೆ ಬಡಿದೈತೇ'ಂತ, 'ಒಟ್ಯಾಗಿನ ಕಳ್ಳಿಲ್ಲಾ ಬಗೆದಾಕೈತೇ'ಂತ, 'ಏನೋಪ್ಪ, ರಕ್ತ ರಕ್ತ ಕಾರ್ಕೊಂಡು ಸತ್ತ್ರೋಗವ್ನೇ'ಂತ, 'ನಾಗ್ರಾವೋ ಏನೋ ಕಚ್ಚಿ ಸತ್ತ್ರೋಗವ್ನೇ'ಂತ, 'ಯಾರೋ ಸಾಯಿಸಿಬಿಟ್ಟು ಗೋಡೇಗೆ ಮೊಳೆ ಒಡೆದು ನೇತಾಕಾರೇ' ಅಂತ— ಒಬ್ಬೊಬ್ಬರು ಒಂದೊಂದು ವಿಧವಾಗಿ ಹೇಳಿಕೊಳ್ಳುತ್ತಿದ್ದರು.

ನಾನು ನಾರಾಯಣಿಗೆ ಹೇಳಿದೆ—'ಎದುರಿಗಿರೋ ಆ ದೊಡ್ ಹುಣಿಸೇಮರ ಹತ್ತಿದರೆ, ಮಹಡೀಮೇಲೆ ಏನಾಗಿದೆಯೋಂತ ನೋಡ ಬಹುದು. ಯಾರ್‍ಯಾರೋ ಹತ್ತಿ ನೋಡುತಿದಾರೆ. ನೀನಾದರೆ ನನಗಿಂತ ಚೆನ್ನಾಗಿ ಮರ ಹತ್ತಬಲ್ಲೆ. ನೋಡಿಕೊಂಡು ಬಂದು ನನಗ್ಹೇಳು"ಅಂತ.

ನಾರಾಯಣಿ ಮರ ಹತ್ತುವುದರಲ್ಲಿ ಕೋತಿಗೆ ತಮ್ಮ. ಅಷ್ಟು ಜನ ಮರ ಹತ್ತುತ್ತಿರುವುದನ್ನು ಕಂಡು, ಮರದ ರೆಂಬೆ ಮುರಿದು ಏನಾದರೂ ಅಪಾಯವಾಗಬಹುದೆಂದು ಊಹಿಸಿ, ಅಲ್ಲಿದ್ದ ಪೋಲೀಸ್ ಇನ್ಸ್‌ಪೆಕ್ಟರ್ 'ಇಳೀರಿ, ಮರದಿಂದ ಕೆಳಕ್ಕೇ' ಅಂತ ಗದರಿಸುತ್ತ ಬಂದರು. ಅಷ್ಟರಲ್ಲಿ ನಾರಾಯಣಿ ನೆಗೆದೇಬಿಟ್ಟಿದ್ದ ಕೊನೇ ರೆಂಬೇಗೆ. ಅಲ್ಲಿಂದ ಎಲ್ಲವನ್ನೂ ಚೆನ್ನಾಗಿ ನೋಡಿಯೇ ಬಂದ. ಆವನು ಮರದಿಂದ ಕೆಳಗೆ ದುಮುಕಿದ ಕೂಡಲೇ ನನ್ನ ಬಳಿಗೆ ಓಡಿಬಂದ. ಸರಿ, ನಮ್ಮ ಸುತ್ತಲೂ ಕೋಟೇ ಕಟ್ಟಿಬಿಟ್ಟಿತು ಜನಸಂದಣಿ.

ನಾರಾಯಣಿ ಹೇಳಿದ—'ಪುಟ್ಟಮಲ್ಲ ಹಾಕಿಕೊಂಡಿರೋ ಷರ್ಟಿನ ಒಂದು ಭಾಗ ಗೋಡೆ ಮೊಳೇಗೆ ಸಿಕ್ಕಿಕೊಂಡಿದೆ. ಹರಿದೂ ಹೋಗಿದೆ ಷರ್ಟು. ಪುಟ್ಟಮಲ್ಲ ಕಾಲು ಮಡಿಚಿಕೊಂಡು ಮುಕಮಡಿಯಾಗಿ ಬಿದ್ದಿದಾನೆ. ತಲೆ ಹಿಂಭಾಗ ಮಾತ್ರ ಕಾಣತ್ತೆ. ಮುಖ ಕಾಣ್ತಾ ಇಲ್ಲಾ'ಂತ.

ಅಷ್ಟರಲ್ಲಿ ಕುದುರೆಗಾಡಿಯಿಂದ ಯಾರ್‍ಯಾರೋ ಆಫೀಸರುಗಳು ಬಂದಿಳಿದರು. ಅವರೆಲ್ಲಾ ಮಹಡಿ ಹತ್ತಿಹೋಗಿ, ಬಹಳ ಹೊತ್ತಿನವರೆಗೆ

ಅಲ್ಲೆಲ್ಲಾ ನೋಡಿ, ಕೆಳಗಡೆ ಇಳಿದು ಬಂದು, ಮನೆಯೆಲ್ಲಾ ನೋಡಿ, ಕಡೆಗೆ ಸುಬ್ಬಯ್ಯ, ತಿಮ್ಮಪ್ಪ, ಚಿಕ್ಕರಂಗಪ್ಪ ಇವರುಗಳನ್ನು ನೋಡಿ, ಪೋಲೀಸ್ ಇನ್ಸ್‌ಪೆಕ್ಟರ್ ಹತ್ತಿರ ಏನೇನೋ ಹೇಳಿ, ಬಂದ ಗಾಡೀಲೇ ಕುಳಿತುಕೊಂಡರು. ಅಷ್ಟು ಹೊತ್ತಿಗೆ ಇಪ್ಪತ್ತು ಮೂವತ್ತು ಬಾರ್ ಸಿಪಾಯಿಗಳೂ ಬಂದೂಕು ಸಮೇತ ಬಂದರು. ಆಫೀಸರುಗಳು ಗಾಡಿಯಲ್ಲಿ ಹೊರಟು ಹೋದರು. ಆಸ್ಪತ್ರೆಯಿಂದ ಹೆಣ ಸಾಗಿಸುವ ಗಾಡಿ ಬಂತು. ಪುಟ್ಟಮಲ್ಲನ ಹೆಣ ಇಳಿಸಿ ಕೆಳಕ್ಕೆ ತಂದು, ಒಂದೇ ನಿಮಿಷ ಅವನ ತಾಯಿಗೆ ತೋರಿಸಿ, ಗಾಡಿಯೊಳಗೆ ಇಟ್ಟುಬಿಟ್ಟು, 'ಆಸ್ಪತ್ರೇಲಿ ಶವ ಪರೀಕ್ಷೆ ಮಾಡಿಸ್ದಮೇಲೆ ಹೆಣಾನ ಕೊಡ್ತೀವಿ. ಆಸ್ಪತ್ರೆ ಹತ್ತಿರಕ್ಕೆ ಬನ್ನೀ' ಅಂತ ಹೇಳಿಬಿಟ್ಟು, ಹೆಣದ ಗಾಡಿಯನ್ನ ಆಸ್ಪತ್ರೇಗೆ ತೆಗೆದು ಕೊಂಡು ಹೋದರು. ಹಿಂದೆಯೇ ನಾಲ್ಕಾರು ಜಟಕಾ ಗಾಡಿಗಳಲ್ಲಿ ಪುಟ್ಟಮಲ್ಲನ ತಾಯಿ, ಬಂಧುಗಳು, ವಿಕ್ಟೋರಿಯಾ ಆಸ್ಪತ್ರೆಗೆ ಹೊರಟು ಹೋದರು. ಯಜಮಾನರೂ ಇನ್ನೂ ಕೆಲವರು ಇನ್ನೆರಡು ಜಟಕಾದಲ್ಲಿ ಆಸ್ಪತ್ರೆಗೆ ಹೊರಟರು. ಇಬ್ಬರು ಪೋಲೀಸಿನವರು ಆಚೆ ಈಚೆ, ನಡುವೆ ಸುಬ್ಬಯ್ಯ, ತಿಮ್ಮಪ್ಪ, ಚಿಕ್ಕರಂಗಪ್ಪ ಇವರೂ ಹೊರಟರು. ಇವರ ಹಿಂದೆ ಎರಡು ಬಾರ್ ಸಿಪಾಯಿಗಳು—ಹತ್ತಿರದಲ್ಲೇ ಇದ್ದ ಸೆಂಟ್ರಲ್ ಜೈಲ್ ಕಡೆಗೆ. ನನಗಂತೂ ನನ್ನನ್ನೂ ಎಲ್ಲಿ ಹಿಡಿದುಕೊಂಡು ಹೋಗುತಾರೋ ಎಂದು ಹೆದರಿಕೆ ಹುಟ್ಟಿತು. ಅಲ್ಲಿಂದ ದೂರ ಓಡಿಹೋಗಿ ಒಂದು ದೊಡ್ಡ ಮರದ ಹಿಂದೆ ಅವಿತುಕೊಂಡೆ. ಎಷ್ಟಾದರೂ ಪುಕ್ಕಲು. ಹಾಗೂ ಅಷ್ಟು ಚಿಕ್ಕ ವಯಸ್ಸಿನಲ್ಲೇ ಧೈರ್ಯ ಎಲ್ಲಿ ಬರಬೇಕು ನನಗೆ?

ಆಷಾಢ ಬಹುಳ ಅಮಾವಾಸ್ಯೆ ಹೀಗೆ ಮುಗಿಯಿತು.

*  *  *  *

ಇನ್ನು ಉಳಿದ ಸಮಾಚಾರ ಬಹು ಸ್ವಲ್ಪ.

ಚಿಕ್ಕರಂಗಪ್ಪನ ತಮ್ಮನಿಂದ ತಿಳಿದುಬಂದ ಸಂಗತಿ—ಇದು:

ತಿಮ್ಮಪ್ಪ, ಚಿಕ್ಕರಂಗಪ್ಪ, ಸುಬ್ಬಯ್ಯ ಈ ಮೂರು ಜನರೂ ಸೇರಿದ್ದರಂತೆ ಸುಬ್ಬಯ್ಯನ ಮನೆಯಲ್ಲಿ, ಅಮಾವಾಸ್ಯೆ ದಿನ ರಾತ್ರಿ, ಹತ್ತು ಗಂಟೆಗೆ. ಪುಟ್ಟಮಲ್ಲ ಬಂದನಂತೆ ಹತ್ತೂವರೆ ಗಂಟೆಗೆ. ಎಲ್ಲರೂ

ಸೇರಿ, ಅರ್ಧ ಗಂಟೆ, ಮುಕ್ಕಾಲು ಗಂಟೆ ಹೊತ್ತು ಮಾತ್‍ನಾಡತಾ ಇದ್ದರಂತೆ. ತಿಮ್ಮಪ್ಪ ಕೆಂಪಿನ ತೋಡಾನ ತಂದಿದ್ದನಂತೆ, ಮುನ್ನೂರೈವತ್ತು ರೂಪಾಯಿನದು. ಅದರಲ್ಲಿ ಪುಟ್ಟಮಲ್ಲನ ಹೆಸರು ಕೆತ್ತಿಸಿಬಿಟ್ಟು ಮಾರನೇ ದಿನಾನೇ ಯಜಮಾನರ ಕೈಯಿಂದ ತೊಡಿಸಿಬಿಡೋದು, ಪುಟ್ಟಮಲ್ಲ ಗೆದ್ದರೆ ಅಂತ ಮಾತಾಡ್ಕೊಂಡಿದ್ರಂತೆ. ಆಮೇಲೆ ತಿಮ್ಮಪ್ಪ ಅವರ ಮನೇಗೆ ಹೊರಟ್ಹೋದ್ನಂತೆ. ಚಿಕ್ಕರಂಗಪ್ಪ, ಪುಟ್ಟಮಲ್ಲ ಇಬ್ಬರೂ ಮನೆಯಿಂದ ಹೊರಟರಂತೆ, ಹನ್ನೊಂದು ಗಂಟೆ ಆದಮೇಲೆ. ಸುಬ್ಬಯ್ಯ ಮನೇಲೇ ಇದ್ದುಬಿಟ್ಟನಂತೆ. ಚಿಕ್ಕರಂಗಪ್ಪ ಪುಟ್ಟಮಲ್ಲನ ಜೊತೇಲಿ ಕಮಲಾಛತ್ರದ ವರೆಗೂ ಹೋಗಿ, ಅಲ್ಲಿ ಸ್ವಲ್ಪ ಹೊತ್ತು ಮಾತಾಡ್ತಾ ನಿಂತ್ಕೊಂಡ್ರಂತೆ ಇಬ್ಬರೂ. ಹನ್ನೆರಡು ಗಂಟೆ ಹೊಡೀತಿರೋವಾಗ ಚಿಕ್ಕರಂಗಪ್ಪ ಪುಟ್ಟಮಲ್ಲನ ಕೈಗೆ ಮೂರು ದೊಡ್ಮೊಳೇನೂ ಸುತ್ತಿಗೇನೂ ಕೊಟ್ಟು, 'ಬೇಗ ಬಂದ್ಬಿಡು, ಪುಟ್ಮಲ್ಲ. ನೀನು ಬರೋವರ್ಗೂ ನಂಜೀವ ಇರೋಕಿಲ್ಲ. ಬೇಗ್ಬಂದ್ಬಿಡೂಂ'ತಂದನಂತೆ. ಪುಟ್ಟಮಲ್ಲ ಹೇಳಿದನಂತೆ ಚಿಕ್ಕರಂಗಪ್ಪನಿಗೆ—'ನೀನು ಓಗು. ಸುಬ್ಬಯ್ಯನ ಮನೇಲಿರು. ಅತ್ನಿಮಿಸ್ದಲ್ಲಿ ಬಂದ್ಬಿಡ್ತೇನೇ'ಂತ. ಚಿಕ್ಕರಂಗಪ್ಪ ಹೇಳಿದನಂತೆ—'ನಾನಿಲ್ಲೇ ಇರ್ತೇನಪ್ಪ, ನರಸಿಂದೇವರ ಗುಡೀ ಜಗಲೀ ಮೇಲೆ, ನೀನ್ಬರೋ ಗಂಟಾಂ'ತಂದು. ಸರಿ, ಪುಟ್ಟಮಲ್ಲ ಹೊರಟನಂತೆ.

ಪುಟ್ಟಮಲ್ಲ ಕೆರೇಏರಿ ಮೇಲೆ ಹತ್ತಿಹೋದಾಗ ಚಿಕ್ಕರಂಗಪ್ಪನಿಗೆ ಎದೆಯಲ್ಲಿ ಹೇಗ್ಹೋಗೋ ಆಯಿತಂತೆ. ಹೊಟ್ಟೆಯಲ್ಲಿ ಒಂದು ತೆರ ಸಂಕಟ ಆಯಿತಂತೆ. ಮನಸ್ಸು ನಿಲ್ಲಲಿಲ್ಲವಂತೆ. 'ಛೆ! ಇಂಥಾ ಕೆಲ್ಸ ಮಾಡ್ಸೋದೇ ಪುಟ್ಟಮಲ್ಲನ ಕೈಲಿ? ಏನಾದ್ರೂ ಕೆಟ್ಟದಾಗಬೌದು. ದಿನ ಬೇರೆ ಚೆನ್ನಾಗಿಲ್ಲ. ಪುಟ್ಟಮಲ್ಲನ್ನ ಹಿಂದಕ್ಕೆ ಕರದೇಬಿಡಬೇಕೂ'ಂತ ನಿರ್ಧರಿಸಿಬಿಟ್ಟು, ಓಡಿದನಂತೆ ತಾನೂ ಕೆರೆಯ ಏರಿ ಮೇಲಕ್ಕೆ. ಆಗಲೇ ಪುಟ್ಟಮಲ್ಲ ಹೊರಟು ಐದು ನಿಮಿಷ ಆಗ್ಹೋಗಿತ್ತಂತೆ. ಆ ಕತ್ತಲಲ್ಲಿ ಪುಟ್ಟಮಲ್ಲ ಕಣ್ಣಿಗೇ ಬೀಳಲಿಲ್ಲವಂತೆ. ಗಾಳಿ ಅಂತೂ ವಿಪರೀತವಾಗಿತ್ತಂತೆ. 'ಹೇಗಪ್ಪಾ ಪುಟ್ಟಮಲ್ಲನ್ನ ಬಿಟ್ಟುಹೋಗೋದೂ? ಈ ಹಾಳು ಪಂದ್ಯ ಏಕ್ಬಂತೋ? ಏನಾದ್ರೂ ಆದ್ರೆ ನಾಲ್ಕು ಜನಕ್ಕೆ ಮುಖಾ

ಹೇಗಪ್ಪಾ ತೋರ್ಸೋದು? 'ಅಮ್ಮಾ! ಅಣ್ಣಮ್ಮಾ!! ನಮ್ತಾಯೀ!!! ಪುಟ್ಟಮಲ್ಲನ್ನ ಎಂಗಾರೂ ಕಾಪಾಡಮ್ಮಾ! ಮಕ್ಕಳ ಕೈಯಿಂದ ಹೂ ಬೆಳಕು ಹೊರಿಸ್ತೇವೆ ಉತ್ಸವ ಮಾಡಿಸ್ತೇವೇ'ಂತ ಅರಿಕೆಮಾಡಿಕೊಂಡು ನಿಂತುಬಿಟ್ಟನಂತೆ. ಮುಂದಕ್ಕೂ ಹೋಗೋದಕ್ಕಾಗಲಿಲ್ಲವಂತೆ, ಹಿಂದಕ್ಕೆ ಬರೋದಕ್ಕೂ ಆಗಲಿಲ್ಲವಂತೆ. ಕೈಕಾಲು ನಡಗತಾ ಇದ್ದು ಹೋಯಿತಂತೆ. ಎಷ್ಟು ಹೊತ್ತು ನಿಂತಿದ್ದನೋ ಅವನಿಗೇ ತಿಳಿಯದಂತೆ.

ಇದ್ದಕ್ಕಿದ್ದ ಹಾಗೆ "ಅಯ್ಯಯ್ಯೋ! ಅಯ್ಯಯ್ಯೋ!!" ಅಂತ ಘಟ್ಟಿಯಾಗಿ ದೂರದಿಂದ ಪುಟ್ಟಮಲ್ಲ ಅರಚಿಕೊಂಡ ಧ್ವನಿ ಕೇಳಿಬಂತಂತೆ. ಅದು ಪುಟ್ಟಮಲ್ಲನ ಧ್ವನೀನೇ ಅಂತ ಚಿಕ್ಕರಂಗಪ್ಪನಿಗೆ ಚೆನ್ನಾಗಿ ತಿಳಿದು ಬಂತಂತೆ. ಹೇಗೋ ಧೈರ್ಯ ಮಾಡಿಕೊಂಡು "ಪುಟ್ಟಮಲ್ಲಾ! **ಪುಟ್ಟಮಲ್ಲಾ! ಪುಟ್ಟಮಲ್ಲಾ ಲೋ!**" ಅಂತ ಘಟ್ಟಿಯಾಗಿ ಕೂಗಿಕೊಂಡನಂತೆ. ಜವಾಬೇ ಇಲ್ಲವಂತೆ. ಇನ್ನೂ ಘಟ್ಟಿಯಾಗಿ ಕೂಗಿದನಂತೆ. ಜವಾಬೇ ಇಲ್ಲವಂತೆ. 'ಅಯ್ಯೋ! ಏನೋ ಆಗೋಯ್ತು ಪುಟ್ಟಮಲ್ಲನ್ಗೆ! ಪುಟ್ಟಮಲ್ಲಂಗೇನೋ ಆಗೋಯ್ತು'ಂತಾ, ಏನು ಮಾಡುತ್ತಿದ್ದೇನೆ ಎಂಬೋ ಜ್ಞಾನ ಕೂಡ ಇಲ್ಲದೆ, ನೆಟ್ಟಗೆ ಉಪ್ಪಾರಪೇಟೆ ಪೋಲೀಸ್ ಸ್ಟೇಷನ್ನಿಗೆ ಹೋಗಿಬಿಟ್ಟನಂತೆ ಸಹಾಯಕ್ಕೆ. ಚಿಕ್ಕರಂಗಪ್ಪನ ಕೂಗನ್ನು ಕೇಳಿ, ಇಬ್ಬರು ಕಾನ್ಸ್‌ಟೇಬಲುಗಳು ಲಾಂದ್ರಾ ಹಚ್ಚಿಕೊಂಡು, ದೊಣ್ಣೆಗಳನ್ನು ತೆಗೆದುಕೊಂಡು ಈಚೆಗೆ ಬರುವುದಕ್ಕೂ, ಚಿಕ್ಕರಂಗಪ್ಪ ಸ್ಟೇಷನ್ ಬಾಗಿಲಲ್ಲಿ ಬಂದು ಜ್ಞಾನ ತಪ್ಪಿ ಬೀಳುವುದಕ್ಕೂ ಸರಿಹೋಯಿತಂತೆ. ಆಗ ಅವನ್ನ ಒಳಕ್ಕೆ ತಂದು, ತಲೇಗೆ ನೀರು ತಟ್ಟಿದ ಮೇಲೆ ಹೇಳಿದನಂತೆ, ಚಿಕ್ಕರಂಗಪ್ಪ—'ಹೋಗ್ರಪ್ಪಾ ಬೇಗ್ನೆ! ಪುಟ್ಟಮಲ್ಲನ್ನ ಆ ಹಾಳ್ ಮನೇಲಿ ಹೊಡೆದ್ಹಾಕ್ಬಿಟ್ಟಿದಾರೇ'ಂತ. ಪೋಲೀಸಿನವರು ಅಕ್ಕಪಕ್ಕದ ಮನೆಗಳಲ್ಲಿದ್ದ ಗಂಡಸರನ್ನ ಕೂಗಿ ಎಬ್ಬಿಸಿ, ಲಾಂದ್ರಗಳನ್ನೂ ದೊಣ್ಣೆಗಳನ್ನೂ ತೆಗೆದುಕೊಂಡು, ಓಡಿದರಂತೆ, ಹಾಳುಮನೆಯ ಹತ್ತಿರಕ್ಕೆ. ಮನೆಯೆಲ್ಲಾ ಹುಡುಕಿ ಮೆಟ್ಟಲು ಹತ್ತಿ ನೋಡುವಾಗ, ಬಾಗಿಲು ಪಕ್ಕದಲ್ಲೇ ಪುಟ್ಟಮಲ್ಲ ಸತ್ತುಬಿದ್ದಿದ್ದನಂತೆ. ಎದೆ ಎತ್ತರ ಮಟ್ಟದಲ್ಲಿ ಒಂದು ದೊಡ್ಡ ಆರಂಗುಲ ಉದ್ದದ ಕಬ್ಬಿಣದ ಮೊಳೆ, ಕೆಂಪು ಬಣ್ಣ

ಬಳಿದಿದ್ದು, ಗೋಡೆಯೊಳಕ್ಕೆ ಮುಕ್ಕಾಲು ಪಾಲು ಹೋಗಿತ್ತಂತೆ. ಮೊಳೆ ಹೊಡೆಯುವಾಗ ಗಾಳಿಗೋ ಅಥವಾ ಇನ್ನು ಹೇಗೋ ಅವನು ಹಾಕಿಕೊಂಡಿದ್ದ ಷರಟಿನ ಒಂದು ಪಕ್ಕದ ಕೊನೆ ಮೇಲಕ್ಕೆ ಹಾರಿ ಇತ್ತಂತೆ. ಪುಟ್ಟಮಲ್ಲ ಆ ಷರಟಿನ ಕೊನೆಯನ್ನೂ ಸೇರಿಸಿ ಮೊಳೆಯನ್ನು ಗೋಡೆಗೆ ಹೊಡೆದುಬಿಟ್ಟಿದ್ದನಂತೆ. . . .

*  *  *  *

ಸರ್ಕಲ್ ಇನ್ಸ್‌ಪೆಕ್ಟರ್ ಹೇಳಿದ್ದು :

ಪಂದ್ಯ ಕಟ್ಟಿಕೊಂಡ ಪುಟ್ಟಮಲ್ಲನು ಆ ಹಾಳುಮನೆಗೆ ಹೋಗಿ, ಕೆಳಗಿನ ಕೋಣೆಯಲ್ಲಿ ಮೊಳೆ ಹೊಡೆದು, ಪಡಸಾಲೆಯಲ್ಲಿಯೂ ಮೊಳೆ ಹೊಡೆದುಬಿಟ್ಟು, ಮಹಡಿಯ ಮೇಲಕ್ಕೂ ಹತ್ತಿಹೋಗಿ ಬಾಗಿಲು ಪಕ್ಕದಲ್ಲಿ ಮೊಳೆ ಹೊಡೆಯುತ್ತಾ ಇದ್ದಾಗ—ಉದ್ದವಾದ ಷರಟಿನ ಹಿಂಭಾಗ ಗಾಳಿಗೆ ಹಾರಿ ಮೊಳೆಯ ಕೊನೆಗೆ ಸಿಕ್ಕಿಕೊಂಡಿದೆ. ಕತ್ತಲು ಬಹಳವಾದ್ದರಿಂದ ಪುಟ್ಟಮಲ್ಲನಿಗೆ ಅದು ಕಾಣಬರಲಿಲ್ಲ. ಬೇಗನೇ ಹೊಡೆದು ತಾನು ಹೊರಡಬೇಕು ಅನ್ನೋ ಆತುರ ಬೇರೆ ಇದ್ದಿರಬೇಕು. ಜೊತೆಗೆ ಅಲ್ಪಸ್ವಲ್ಪ ಭಯವೂ ಆಯಿತೋ ಏನೋ. ಮೊಳೆ ಹೊಡೆದುಬಿಟ್ಟು ಮೆಟ್ಟಲು ಇಳಿಯಲು ಹಿಂದಿರುಗಿದಾಗ, ಆ ಮೊಳೆ ಅವನ ಷರಟನ್ನು ಬಿಡಲಿಲ್ಲ. ಯಾರೋ ಅಥವಾ ಯಾವುದೋ ತನ್ನನ್ನು ಹಿಂದಕ್ಕೆ ಎಳೆಯುತ್ತಿದೆ ಎಂದು ಭಾವಿಸಿ, ಅಷ್ಟು ಧೈರ್ಯಶಾಲಿಯಾದ ಪುಟ್ಟಮಲ್ಲನಿಗೂ ಹೃದಯಸ್ತಂಭನವಾಗಿರಬೇಕು. . . .

*  *  *  *

ಆ ಮೇಲೇನು?

ಕೇಸಾಯಿತು. ಶಿಕ್ಷೆಗಳೂ ಆಯಿತು. ಬಿಡುಗಡೆಯೂ ಆಯಿತು. ಆಗಿನ ಬಳೇಪೇಟೆ ಗರಡಿಯು ಕೆಲವು ವರ್ಷ ಅಜ್ಞಾತವಾಗಿತ್ತು.

ಬಿ. ಬಿ. ಡಿ. ಪವರ್ ಪ್ರೆಸ್, ಅರಳೇಪೇಟೆ, ಬೆಂಗಳೂರು ಸಿಟಿ

# ಹಳೆಯ ಸಾಹಿತ್ಯಕ್ಕೆ ಪ್ರವೇಶ

## ಜಿ. ಪಿ. ರಾಜರತ್ನಂ ಅವರ

## ಹೊಸ ಸಹಾಯ

೧. **ಪಂಪಭಾರತಸಾರ—ಪೂರ್ವಭಾಗ** ರೂ. ೨
(ಮೊದಲಿನಿಂದ ವಿರಾಟಪರ್ವ ಪೂರ್ತಿಯಾಗಿ ಪಂಪ ಭಾರತವನ್ನು ಸಂಗ್ರಹಿಸಿ, ಆ ಸಂಗ್ರಹದ ಹೊಸಗನ್ನಡ ಗದ್ಯಾನುವಾದ)

೨. **ರನ್ನನ ರಸಘಟ್ಟಿ** ರೂ. ೧ ೪
(ರನ್ನನ ಗದಾಯುದ್ಧವನ್ನು ಸಂಗ್ರಹಿಸಿ, ಆ ಸಂಗ್ರಹದ ಹೊಸಗನ್ನಡ ಗದ್ಯಾನುವಾದ)

೩. **ಹೊಸಗನ್ನಡ ಯಶೋಧರ ಚರಿತೆ** ರೂ. ೧ ೦
(ಶ್ರೀ ಕ. ವೆಂ. ರಾಘವಾಚಾರ್ಯರ ಯಶೋಧರ ಚರಿತೆಯ ಸಂಗ್ರಹಕ್ಕೆ ಹೊಸಗನ್ನಡ ಗದ್ಯಾನುವಾದ)

ಅಚ್ಚಿನಲ್ಲಿ

೧. **ಪಂಪಕವಿಯ ಕರ್ಣರಸಾಯನ**
(ಮೂಲ, ಅರ್ಥ, ಟಿಪ್ಪಣಿ, ಮುನ್ನುಡಿ)

೨. **ಶ್ರೀ ಕವಿರತ್ನ**
(ಕವಿಯ ಜೀವನ, ಕೃತಿ ಪರಿಚಯ)

**ಸತ್ಯಶೋಧನ ಪುಸ್ತಕ ಭಂಡಾರ, ಕೋಟೆ, ಬೆಂಗಳೂರು**

**ಮೆಜೆಸ್ಟಿಕ್ ಬುಕ್ ಹೌಸ್, ಮೆಜೆಸ್ಟಿಕ್ ಸ್ಕ್ವೇರ್, ಬೆಂಗಳೂರು**